ಅಧಿಕಮಾಸ

(ಅಧಿಕಮಾಸದ ಆಚರಣೆಯ ವಿಧಿವಿಧಾನಗಳು,
ಸಂಕಲ್ಪಮಂತ್ರಗಳು, ಮಾಹಾತ್ಮ್ಯ ಇತ್ಯಾದಿ)



ಸಂಕಲನ, ಅನುವಾದ, ವಿವರಣೆ:

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶನ :

ಐತರೇಯ ಪ್ರಕಾಶನ ವ್ಯಾಸನಕೆರೆ

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ಪ್ರಕಾಶನ ವಿಭಾಗ

ಅಧಿಕಮಾಸ

(ಅಧಿಕಮಾಸದ ಆಚರಣೆಯ ವಿಧಿವಿಧಾನಗಳು,
ಸಂಕಲ್ಪಮಂತ್ರಗಳು, ಮಾಹಾತ್ಮ್ಯ ಇತ್ಯಾದಿ)

ಸಂಕಲನ, ಅನುವಾದ, ವಿವರಣೆ:

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶನ :

ಐತರೇಯ ಪ್ರಕಾಶನ ವ್ಯಾಸನಕೆರೆ

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ಪ್ರಕಾಶನ ವಿಭಾಗ

‘ಪಾಜಕ’, ೮೯/೨೪, ೩ನೇ ಮುಖ್ಯರಸ್ತೆ, ೧ನೇ ಅಡ್ಡರಸ್ತೆ,
ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು - ೫೬೦ ೦೧೯.

Adhikamāsa - compiled, translated and edited by Vidyāvācaspati, Darśanaratnam, Sacchāstravicakṣaṇaratnam, Śāstrapravacanakesari, Pravacanācārya, Madhvamatavardhana, Vidvaccūḍāmaṇi, Vedavidyāvicakṣaṇa, Paṇḍitaratnam, Vidyāvāridhi, Sacchāstrapravacanapravīṇa, Gītāratnākara, Tattvavācaspati, Jnānaratnākara (and Recipient of Karnataka State Sanskrit Award-1999 & **Karnataka Rajyotsava Award-2002**, **Śrī Vidyāmānya Mahāpraśasti** of Śrī Pejavar Mutt, Udupi and **Rashtraprati Award - 2005**) Dr.Vyasanakere Prabhanjanacharya, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Śrī VyāsaMadhva Samśodhana Pratiṣṭhāna**, 'Pājaka', No.89/24, Third Main, First Cross, Mount Joy Extension, Hanumanthanagar, Bangalore- 560019. Pages: 56 (vi+50).

Phone : 26602802; 26611011.

Internet : www.vyasamadhwa.org

E-mail : info@vyasamadhwa.org

First Edition : 2010

Typeset by :

Śrī Vyāsa Madhva Samśodhana Pratiṣṭhāna(Regd)

Printed at :

Murudeshwara Printers, Srinagar, Bangalore.

ವಿಷಯಾನುಕ್ರಮಣಿಕೆ

★★★★★

ಮುನ್ನುಡಿ

ಶಾಶ್ವತಸುಖದ ನೆಲೆಯಾದ ಮೋಕ್ಷದ ಸಂಪಾದನೆ ಪ್ರತಿಯೊಬ್ಬ ವಿವೇಕಿಯ ಮುಖ್ಯ ಗುರಿ. ಜೀವನದ ಪ್ರತಿಕಾರ್ಯವೂ ಆ ಶ್ರೇಷ್ಠ ಗುರಿಯ ಸಾಧನೆಗೆ ಮೀಸಲಾಗಬೇಕು. ಅದಕ್ಕೆ ಬ್ರಹ್ಮಜ್ಞಾನಪ್ರಾಪ್ತಿಯೊಂದೇ ಪರಮೋಪಾಯ. ಶ್ರದ್ಧಾಭಕ್ತಿಗಳಿಂದ ನಡೆಸುವ ಅಧ್ಯಯನ ಜ್ಞಾನಸಾಧನೆಯ ಪ್ರಧಾನಮಾರ್ಗ. ಅಂತಹ ಜ್ಞಾನಕಾರ್ಯವು ಸಿದ್ಧಿಸುವುದು ಪರಿಶುದ್ಧವಾದ ಸದಾಚಾರದಿಂದ ಮಾತ್ರ. ಅಂತಹ ಸದಾಚಾರದಲ್ಲಿ ಸ್ನಾನ, ಸಂಧ್ಯಾವಂದನೆ, ದೇವಪೂಜೆ, ಪಂಚಮಹಾಯಜ್ಞಗಳು ಮೊದಲಾದ ದೈನಂದಿನ ಕಾರ್ಯಗಳಂತೆ ಸತ್ಯ, ಧರ್ಮಗಳ ಅನುಷ್ಠಾನ, ಗುರುಹಿರಿಯರಲ್ಲಿ ಗೌರವ, ಸಮಾನರಲ್ಲಿ ಮೈತ್ರಿ, ಕಿರಿಯರಲ್ಲಿ ವಾತ್ಸಲ್ಯ ಸಹ ವಿಹಿತವಾಗಿವೆ. ಮಾಸಧರ್ಮಗಳ ಆಚರಣೆ ಸದಾಚಾರದ ಮತ್ತೊಂದು ಅಂಗ.

ಸಾಧನದೇಹ, ಸಾಧನದೇಶ ಹಾಗೂ ಸಾಧನಕಾಲಗಳ ತ್ರಿವೇಣಿಸಂಗಮದಿಂದಲೇ ಜ್ಞಾನಭಕ್ತಿವೈರಾಗ್ಯಗಳೆಂಬ ಸಿದ್ಧಿತ್ರಿವೇಣಿಯ ಪ್ರಾಪ್ತಿ. ಆದರಿಂದಾಗಿ ಕಾಲಕ್ಕೆ ಇರುವ ಪ್ರಾಧಾನ್ಯ ಮಹತ್ತ್ವಪೂರ್ಣವಾದದ್ದು. ಸ್ವತಃ ಕಾಲನಾಮಕನಾದ ಭಗವಂತ ಕಾಲನಿಯಂತ್ರಕನಾಗಿದ್ದು ಕಾಲಾಭಿಮಾನಿಗಳಾದ ಗರುಡಶೇಷಾದಿಗಳ ಅಂತರ್ಯಾಮಿಯೂ ಆಗಿ ಶಾಸ್ತ್ರಗಳಲ್ಲಿ ಪ್ರತಿಪಾದಿತನಾಗಿರುವನು.

ಸಾಧನೆಗೆ ಪರಿಶುದ್ಧ ದೇಶದಂತೆ ಕಾಲವೂ ವಿಹಿತ. ಮಾಸಧರ್ಮಗಳು, ಗ್ರಹಣಾದಿ ಪರ್ವಕಾಲಗಳು ಮೊದಲಾಗಿ ಕಾಲವು ಅನೇಕ ಬಗೆ. ಅಧಿಕಮಾಸ ವಿಶಿಷ್ಟವಾದ ಪರ್ವಕಾಲ. ಇದರ ಮಾಹಾತ್ಮ್ಯ ಪದ್ಮಪುರಾಣ, ಬೃಹನ್ನಾರದೀಯಪುರಾಣ, ಭವಿಷ್ಯೋತ್ತರ ಪುರಾಣಗಳಲ್ಲಿ ನಿರೂಪಿತವಾಗಿದೆ. ಪದ್ಮಪುರಾಣದ ನಿರೂಪಣೆಯಲ್ಲಿ ಒಟ್ಟು ಇಪ್ಪತ್ತೊಂಭತ್ತು ಅಧ್ಯಾಯಗಳಿದ್ದರೆ, ಬೃಹನ್ನಾರದೀಯ ಪುರಾಣದ ನಿರೂಪಣೆಯಲ್ಲಿ ಒಟ್ಟು ಮೂವತ್ತೊಂದು ಅಧ್ಯಾಯಗಳಿವೆ. ಬಗೆಬಗೆಯ ಉಪಾಖ್ಯಾನಗಳೊಂದಿಗೆ ಇದರ ಮಹಾತ್ಮ್ಯ ಇವುಗಳಲ್ಲಿ ನಿರೂಪಿತವಾಗಿದೆ.

ಅಧಿಕಮಾಸದಲ್ಲಿ ಉಪನಯನ, ವಿವಾಹ, ಕ್ಷೌರ, ತೀರ್ಥಯಾತ್ರೆ ಮೊದಲಾದ ಸಕಲಕಾರ್ಯಗಳು ನಿಷಿದ್ಧ. ಸೂರ್ಯಸಂಕ್ರಮಣ ಇಲ್ಲದಿರುವುದು ಇದಕ್ಕೆ ಕಾರಣ. ಇದರಿಂದಾಗಿ ಶುಭಕಾರ್ಯಗಳಿಗೆ ವರ್ಜ್ಯ ಎಂಬುದು ಇದರ ವಿಶೇಷ. ಇದರಿಂದಾಗಿ ಆ ಮಾಸದ ಅಭಿಮಾನಿದೇವತೆಯು ತುಂಬ ವ್ಯಥೆಪಟ್ಟು ಮಹಾವಿಷ್ಣುವನ್ನು ಶರಣುಹೊಕ್ಕಾಗ ಶ್ರೀನಾರಾಯಣನು ಆ ಮಾಸಕ್ಕೆ ತಾನೇ ಶ್ರೀಪುರುಷೋತ್ತಮರೂಪದಿಂದ ನಿಯಾಮಕನಾಗಿ ಇರುವುದಾಗಿ ತಿಳಿಸಿ, ಮೇಲೆ ಹೇಳಿದ ಶುಭಕಾರ್ಯಗಳಿಗೆ ಅವಕಾಶವಿಲ್ಲದಿದ್ದರೂ ಅಧಿಕಮಾಸಕ್ಕೆ ಇತರ ಸಕಲಮಾಸಗಳಿಗಿಂತ ವಿಶೇಷವಾದ ಹಿರಿಮೆ ಲಭಿಸಲಿ ಎಂದು ಅನುಗ್ರಹಿಸಿದನು. ಇದರ ಆಚರಣೆಯಿಂದ ಇತರ ಮಾಸಗಳಲ್ಲಿ ಲಭಿಸದ ವಿಶೇಷಫಲ ಲಭಿಸುವುದು. ಇತರ ಎಲ್ಲ ಮಾಸಗಳ ಅನುಷ್ಠಾನದಿಂದ ಲಭಿಸುವ ಪುಣ್ಯಕ್ಕಿಂತ ಹೆಚ್ಚಿನ ಪುಣ್ಯ ಈ ಮಾಸದಲ್ಲಿ ಲಭಿಸುವುದರೊಂದಿಗೆ ಮುಂದೆ ಜ್ಞಾನದ್ವಾರ ಮುಕ್ತಿಯೂ ಲಭಿಸುವುದು. ಪುರುಷರಂತೆ

ಸ್ತ್ರೀಯರಿಗೂ ಇದು ವಿಹಿತ. ಬ್ರಾಹ್ಮಣರಂತೆ ಕ್ಷತ್ರಿಯಾದಿ ಇತರ ವರ್ಣದವರಿಗೂ ಇದು ಏಕಾದಶೀ, ಶ್ರೀಕೃಷ್ಣಜಯಂತೀ, ಚಾತುರ್ಮಾಸ್ಯವ್ರತಗಳಂತೆ ಕಡ್ಡಾಯವಾದ ವ್ರತ. ಇದನ್ನು ಆಚರಿಸದವರು ಶ್ರೀಹರಿಯ ಆಗ್ರಹಕ್ಕೆ ಪಾತ್ರರಾಗಿ ಸಕಲಪುರುಷಾರ್ಥಗಳಿಂದ ವಂಚಿತರಾಗುವರು. ಹೀಗೆ ಶ್ರೀಹರಿ ವಿಶೇಷವಾದ ಹಿರಿಮೆಯನ್ನು ಕರುಣಿಸಿದ.

ವರ್ಷದ ಮಾಸಗಳಲ್ಲಿ ಮಾಘಮಾಸ ಇತರ ಮಾಸಗಳಿಗಿಂತ ಮಿಗಿಲಾದರೆ ಅದಕ್ಕಿಂತ ವೈಶಾಖಮಾಸ ಮಿಗಿಲು; ಚಾತುರ್ಮಾಸ್ಯಕಾಲ ವೈಶಾಖಕ್ಕಿಂತ ಮಿಗಿಲು. ಚಾತುರ್ಮಾಸ್ಯದಲ್ಲೂ ಕಾರ್ತಿಕಮಾಸಕ್ಕೆ ಅಗ್ರಸ್ಥಾನ. ಅಧಿಕಮಾಸ ಕಾರ್ತಿಕಕ್ಕಿಂತ ಮಿಗಿಲು ಎಂಬುದು ವಿಶೇಷ.

ಶ್ರೀಹರಿ ಸರ್ವಾಧಿಕ(ಸರ್ವೋತ್ತಮ); ಶ್ರೀವಾಯುದೇವರು ಜೀವಾಧಿಕರು (ಜೀವೋತ್ತಮರು). ಮಧ್ವಸಿದ್ಧಾಂತವು ಸರ್ವಾಧಿಕವಾದ ಏಕಮಾತ್ರ ಸಿದ್ಧಾಂತ; ಭಕ್ತಿಯು ಸರ್ವಾಧಿಕವಾದ ಸಾಧನ; ಮುಕ್ತಿಯು ಸರ್ವಾಧಿಕವಾದ ಸಿದ್ಧಿ. ವೈಷ್ಣವಜನ್ಮ ಸರ್ವಾಧಿಕವಾದ ಸಾಧನಶರೀರ; ಕಲಿಗಾಲ ಸರ್ವಾಧಿಕವಾದ ಸಾಧನಕಾಲ. ಸರ್ವಮೂಲಗ್ರಂಥಗಳು ಸರ್ವಾಧಿಕವಾದ ಭಾಷ್ಯಗಳು; ನ್ಯಾಯಸುಧೆ ಸರ್ವಾಧಿಕವಾದ ಟೀಕೆ. ನ್ಯಾಯಾಮೃತ, ಯುಕ್ತಿಮಲ್ಲಿಕಾದಿಗಳು ಸರ್ವಾಧಿಕವಾದ ವಾದಗ್ರಂಥಗಳು. ಪರಿಮಳಾದಿಗಳು ಸರ್ವಾಧಿಕವಾದ ಟಿಪ್ಪಣಿಗ್ರಂಥಗಳು. ಹರಿದಾಸಸಾಹಿತ್ಯ ಸರ್ವಾಧಿಕವಾದ ಪ್ರಾಕೃತಸಾಹಿತ್ಯ. ಇಂತಹ ಅಧಿಕಗಳ ದಿವ್ಯಸಂಗಮಕ್ಕೆ ಮತ್ತೊಂದು ಸೇರ್ಪಡೆಯಾಗಿ ಬಂದಿರುವುದು ಅಧಿಕವೈಶಾಖದಂತಹ ಪವಿತ್ರ ಪರ್ವಕಾಲ. ಇದರ ಸದುಪಯೋಗವನ್ನು ಪಡೆಯುವುದು ವಿವೇಕಿಗಳ ಕರ್ತವ್ಯ.

ಮಾಘಮಾಸಕ್ಕಿಂತ ಮಿಗಿಲಾದ ವೈಶಾಖಮಾಸ ಈ ಬಾರಿ ಅಧಿಕಮಾಸ ಎನ್ನಿಸಿರುವುದು ವಿಶೇಷ. ವೈಶಾಖಶ್ರೇಷ್ಠ ಅಧಿಕಮಾಸ ಸರ್ವಶ್ರೇಷ್ಠ. ವೈಶಾಖವೇ ಅಧಿಕಮಾಸವಾಗಿರುವುದು ಈ ಬಾರಿಯ ಅತ್ಯಂತ ಗಮನಾರ್ಹ ಅಂಶ. ಅದರಿಂದಾಗಿ ಇದಕ್ಕೆ ವಿಶೇಷಮಹತ್ತ್ವವಿದೆ. ಇದರ ಆಚರಣೆಯ ವಿಧಿವಿಧಾನಗಳ ಪರಿಜ್ಞಾನ ಸಾಧನೆಗೆ ಅತ್ಯಂತ ಮುಖ್ಯ. ಈ ಕಾರಣದಿಂದ ಮೇಲೆ ಸೂಚಿಸಿದ ಆಕರಗಳಲ್ಲಿ ನಿರೂಪಿತವಾದ ವಿಚಾರಗಳನ್ನು ಆಸ್ತಿಕರ ಪ್ರಯೋಜನಕ್ಕಾಗಿ ಇಲ್ಲಿ ಅನುವಾದ ಸಮೇತ ಸಂಗ್ರಹಿಸಿ ಕೊಡಲಾಗಿದೆ.

ಪ್ರಸ್ತುತ ಗ್ರಂಥದ ಪ್ರಾಯೋಜಕರು ವಿಶೇಷ ಶ್ರೀಹರಿಗುರುಭಕ್ತರಾದ ಶ್ರೀಮತಿ **ಶ್ರುತಿ** ಮತ್ತು ಶ್ರೀ **ವೈ.ಆರ್.ಪ್ರದೀಪ್** ದಂಪತಿಗಳು. ಇವರಿಗೆ ಸರ್ವರೀತಿಯ ಶ್ರೇಯಸ್ಸನ್ನು ಕರುಣಿಸಲಿ ಎಂದು ಶ್ರೀಹರಿವಾಯುಗಳಲ್ಲಿ ನಮ್ಮ ಪ್ರತಿಷ್ಠಾನ ಪ್ರಾರ್ಥಿಸುತ್ತದೆ. ಡಿ.ಟಿ.ಪಿ. ಕಾರ್ಯ ಆಶಾ.ಕೆ. ಅವರದು. ಸಹಕಾರ ಆರ್.ಆನಂದಪದ್ಮನಾಭ ಹಾಗೂ ಎಂ.ಯಾದವ್ ಅವರದು. ಈ ಎಲ್ಲರಿಗೂ ಪ್ರತಿಷ್ಠಾನ ಋಣಿ.

ಬೆಂಗಳೂರು
ಅಧಿಕವೈಶಾಖ ಪೂರ್ಣಿಮಾ
(೨೮-೪-೨೦೧೦)

ವ್ಯಾಸನಕೆರೆ ಪ್ರಭಂಜನಾಚಾರ್ಯ

ಅಧಿಕಮಾಸ

ಪ್ರತಿ ಚಾಂದ್ರಮಾಸದಲ್ಲೂ ಒಂದು ರವಿಸಂಕ್ರಮಣ ಇದ್ದೇ ಇರುತ್ತದೆ. ಆದರೆ ಒಂದು (ರವಿ)ಸಂಕ್ರಮಣವೂ ಸಹ ಸಂಭವಿಸದ ಚಾಂದ್ರಮಾಸವನ್ನು ಅಧಿಕಮಾಸ ಅಥವಾ ಮಲಮಾಸ ಎನ್ನುವರು. ಅಸಂಕ್ರಾಂತಮಾಸ ಎಂಬ ಹೆಸರೂ ಇದೇ ಕಾರಣಕ್ಕಾಗಿ ಇದಕ್ಕೆ ಬಂದಿದೆ. ಒಂದೇ ಚಾಂದ್ರಮಾಸದಲ್ಲಿ ಎರಡು (ರವಿ)ಸಂಕ್ರಾಂತಿಗಳು ಸಂಭವಿಸಿದಲ್ಲಿ ಅದಕ್ಕೆ 'ಕ್ಷಯಮಾಸ'[೧] ಎಂದು ಹೆಸರು. ಪುರುಷೋತ್ತಮರೂಪಿ ಶ್ರೀಹರಿಯು ಇದಕ್ಕೆ ನಿಯಾಮಕನಾದ್ದರಿಂದ ಇದಕ್ಕೆ ಪುರುಷೋತ್ತಮಮಾಸ ಎಂದೂ ಹೆಸರು. ವಿವಾಹ ಉಪನಯನಾದಿ ಮಂಗಲ ಕಾರ್ಯಗಳಿಗೆ ಇದು ಯೋಗ್ಯವಲ್ಲ. ದೇಹದ ಮಲವನ್ನು ವಿಶೇಷವಾಗಿ ಪರಿಹರಿಸುವ ಸಾಧನವಾದ್ದರಿಂದ ಇದನ್ನು ಮಲಮಾಸ ಎಂದು ಕರೆಯುವರು. ಸೂರ್ಯನೇ ಇಲ್ಲದಿರುವುದರಿಂದ ನಪುಂಸಕ ಎಂಬುದಾಗಿಯೂ ಇದನ್ನು ಕರೆಯುವುದುಂಟು.

ಸರಾಸರಿ ಲೆಕ್ಕದಲ್ಲಿ ಮೂವತ್ಮೂರು ತಿಂಗಳಿಗೊಮ್ಮೆ ಒದಗುವ ಈ ಮಾಸವು, 'ಮುಕ್ಕೋಟಿ' ದೇವತೆಗಳಿಗೂ ಶ್ರೀಹರಿಯೇ ಸ್ವಾಮಿ ಎಂಬ ತತ್ತ್ವಕ್ಕೂ, 'ಅಧಿಕ' ಶಬ್ದವಾಚ್ಯವಾದ ಪುಣ್ಯದ ಸಂಪಾದನೆಗೂ, ಅವಕಾಶವೀಯುವ ಒಂದು ಉತ್ತಮ ಸಾಧನವಾಗಿ ಈ ಮಾಸದ ಮಹತ್ವ ಅಪಾರವಾದುದು(ಅಧಿಕಸ್ಯಾಧಿಕಂ ಫಲಂ). ವಿಷ್ಣುಪಂಚಕ ಮೊದಲಾದ ವರ್ಷಪೂರ್ತಿ ಮಾಡಬೇಕಾದ ವ್ರತಗಳನ್ನು ಕಾರಣಾಂತರದಿಂದ ಮಾಡಲಾಗದವರು ಈ ಒಂದು ತಿಂಗಳಲ್ಲಿ ಐದು ಉಪವಾಸಗಳನ್ನು ಮಾಡಿದರೆ ಅದು 'ಲಘುವಿಷ್ಣುಪಂಚಕ'ವೆಂದು ಮಾನ್ಯವಾಗುತ್ತದೆ ಎಂದೂ ಸಂಪ್ರದಾಯ ಉಂಟು. ಚಾತುರ್ಮಾಸ್ಯದಲ್ಲಿ ವಿಹಿತವಾದ ಧಾರಣ-ಪಾರಣ, ಏಕಭುಕ್ತ, ನಕ್ತಭೋಜನ, ಅಲವಣ, ಲಕ್ಷಪ್ರದಕ್ಷಿಣ, ಲಕ್ಷನಮಸ್ಕಾರ, ಲಕ್ಷದೀಪ ಮೊದಲಾದ ಸಕಲವ್ರತಗಳು ಈ ಅಧಿಕಮಾಸದಲ್ಲಿ ವಿಹಿತವಾಗಿವೆ. ಉಪವಾಸ, ಸ್ನಾನ, ದೀಪ, ಮೌನ ಇವು ಈ ಮಾಸದಲ್ಲಿ ಇನ್ನೂ ವಿಶೇಷವಾಗಿ ವಿಹಿತವಾಗಿರುವ ಮುಖ್ಯವ್ರತಗಳು. ಈ ಮಾಸದಲ್ಲಿ ದಶಮಿ ಹಾಗೂ ದ್ವಾದಶಿಗಳಂದಾದರೂ ಏಕಭುಕ್ತವನ್ನಾಚರಿಸುವುದು ವಿಶೇಷ ಫಲದಾಯಕ. ಇದರಿಂದ ಶನಿ ಮೊದಲಾದ ಗ್ರಹಗಳ ದೋಷವೂ, ದುಃಸ್ವಪ್ನ ದಾರಿದ್ರ್ಯ ಮೊದಲಾದ ಅನಿಷ್ಟಗಳು ಸಹ ಪರಿಹಾರವಾಗುವ ವಿಶೇಷಾಂಶ ಪುರಾಣಗಳಲ್ಲಿದೆ.

ಪ್ರತಿಯೊಂದು ಅಪೂಪದಲ್ಲಿ ವಿಷ್ಣು ಜಿಷ್ಣು ಮೊದಲಾದ ಭಗವದ್ರೂಪಗಳನ್ನು ಚಿಂತಿಸಿ ಒಟ್ಟು ಮೂವತ್ಮೂರು ಅಪೂಪಗಳನ್ನು ಅಧ್ಯಯನಶೀಲರಾದ ಸದ್ಬ್ರಾಹ್ಮಣರಿಗೆ

---

೧. ಕ್ಷಯಮಾಸ ಸಂಭವಿಸಿದ ವರ್ಷದಲ್ಲಿ ಅದಕ್ಕಿಂತ ಮುಂಚೆ ಒಂದು ಮತ್ತು ಅನಂತರ ಒಂದು ಹೀಗೆ ಎರಡು ಅಧಿಕಮಾಸಗಳು ಬರುತ್ತವೆ; ಅವುಗಳಲ್ಲಿ ಕ್ಷಯಮಾಸದ ಅನಂತರ ಬರುವ ಅಧಿಕಮಾಸವೇ ಆಚರಣೆಗೆ ಪ್ರಧಾನವಾದುದು.

ಪ್ರತಿನಿತ್ಯವೂ ಚಿನ್ನದ ಸಮೇತ ಕಂಚಿನ ಪಾತ್ರೆಯಲ್ಲಿರಿಸಿ ದಾನ ಮಾಡುವುದು ಈ ವ್ರತದ ಮುಖ್ಯ ಅಂಶ. ಅಂತಹ ದಾನವನ್ನು ಪೃಥ್ವೀದಾನಸಮವೆಂದೂ, ಸಕಲಪುರುಷಾರ್ಥಸಾಧಕ-ವೆಂದೂ, ತತ್ತ್ವಜ್ಞಾನ ಪ್ರಾಪಕವೆಂದೂ ಪುರಾಣಗಳು ಪ್ರಶಂಸಿಸಿವೆ. ಪ್ರತಿನಿತ್ಯ ಮೂವತ್ಮೂರು ಬ್ರಾಹ್ಮಣದಂಪತಿಗಳ ಭೋಜನ ಮೊದಲಾಗಿ ಅನೇಕರೀತಿಯಲ್ಲಿ ಬ್ರಾಹ್ಮಣಭೋಜನವೂ ಇದರ ಮತ್ತೊಂದು ಮುಖ್ಯವಿಧಿಯಾಗಿದೆ.

ಅಧಿಕಮಾಸದ ಬಗ್ಗೆ ವಿಶೇಷವಿವರಗಳು ಬೃಹನ್ನಾರದೀಯಪುರಾಣ, ಪದ್ಮಪುರಾಣ ಭವಿಷ್ಯಪುರಾಣ, ಭವಿಷ್ಯೋತ್ತರಪುರಾಣ ಮೊದಲಾದವುಗಳಲ್ಲಿ ಬಂದಿವೆ. ಅವುಗಳಲ್ಲಿ ಬಂದಿರುವ ಕೆಲವು ವಿವರಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಅಧಿಕಮಾಸ ಎಂದರೇನು

ಯಸ್ಮಿನ್ ಮಾಸಿ ನ ಸಂಕ್ರಾಂತಿಃ ಸಂಕ್ರಾಂತಿದ್ವಯಮೇವ ಚ ।
ಮಲಮಾಸಃ ಸ ವಿಜ್ಞೇಯಃ ಮಾಸಃ ಸ್ಯಾತ್ತು ತ್ರಯೋದಶಃ ॥ – ಕಾಠಕಗೃಹ್ಯ

'ಚಾಂದ್ರೋ ಮಾಸೋ ಹ್ಯಸಂಕ್ರಾಂತೋ ಮಲಮಾಸಃ ಪ್ರಕೀರ್ತಿತಃ ।'
– ಬ್ರಹ್ಮಸಿದ್ಧಾಂತ(ಸ್ಮೃತಿಮುಕ್ತಾವಲಿ)

ಮಲಮಾಸದ ಅರ್ಥ

ಮಲಾಪಕರ್ಷಕೋ ಮಾಸೋ ಮಲಮಾಸಸ್ತತೋ ಬುಧೈಃ ।
ನಿರ್ಧಾರಿತೋ ವಸಿಷ್ಠಾದ್ಯೈಃ ಪುರಾಣೈರ್ವೇದಚಿಂತಕೈಃ ॥
ಮಲಂ ತು ಪಾತಕಂ ನಾಮ ಸ್ನಾನದಾನಾದಿದೀಪಕೈಃ ।
ಕ್ರಿಯತೇ ಭಸ್ಮಸಾತ್ ಸರ್ವಂ ಪುರುಷೋತ್ತಮಪೂಜಕೈಃ ॥

-ಪ.ಪು.೬/೨೭-೨೮

ಮಲವನ್ನು ಕಳೆಯುವ ಮಾಸವಾದ್ದರಿಂದ ಅಧಿಕಮಾಸಕ್ಕೆ ಮಲಮಾಸ ಎಂದು ಹೆಸರು ಎಂಬುದಾಗಿ ಪುರಾಣ ಹಾಗೂ ವೇದಗಳನ್ನು ಬಲ್ಲ ವಸಿಷ್ಠಾದಿಜ್ಞಾನಿಗಳು ನಿರ್ಣಯಿಸಿ ಹೇಳಿರುವರು. ಮಲ ಎಂದರೆ ಪಾತಕ. ಸ್ನಾನ, ದಾನ, ದೀಪಗಳಿಂದ ಶ್ರೀಪುರುಷೋತ್ತಮ-ನನ್ನು ಆರಾಧಿಸಿದರೆ ಎಲ್ಲ ಪಾತಕವೂ ಬೂದಿಯಾಗುವುದು. (ಶುಭಕಾರ್ಯಗಳಿಗೆ ನಿಷಿದ್ಧವಾದ ಕಾರಣದಿಂದಲೂ ಇದಕ್ಕೆ ಮಲಮಾಸ ಎಂದು ಹೆಸರು).

ಯಸ್ಮಿನ್ ಮಾಸೇ ನ ಸಂಕ್ರಾಂತಿಃ ಸಂಕ್ರಾಂತಿದ್ವಯಮೇವ ವಾ ।
ಮಲಮಾಸಕ್ಷಯೌ ಜ್ಞೇಯೌ ಸರ್ವಧರ್ಮವಿವರ್ಜಿತೌ ॥ - ಭ.ಪು. ೧೨

ಯಾವ ತಿಂಗಳಲ್ಲಿ ರವಿಸಂಕ್ರಾಂತಿ ಇರದೋ ಅದು ಅಧಿಕಮಾಸ; ಎರಡು ರವಿಸಂಕ್ರಮಣಗಳು ಬಂದರೆ ಅದು ಕ್ಷಯಮಾಸ.

ಅಧಿಕಮಾಸದ ಮಹಿಮೆ

ಪರ್ವತೇಷು ಯಥಾ ಮೇರುರ್ಗ್ರಹಾಣಾಂ ಚ ಯಥಾ ರವಿಃ।
ಸರಿತ್ಸು ಚ ಯಥಾ ಗಂಗಾ ಗರುತ್ಮಾಂಶ್ಚ ಪತತ್ರಿಷು ॥
ನಕ್ಷತ್ರಾಣಾಂ ಯಥಾ ಚಂದ್ರೋ ಗೌರ್ವರಿಷ್ಠಾ ಚತುಷ್ಪದಾಮ್।
ಮಾಸಾನಾಂ ಮಲಮಾಸೋಽಯಂ ದ್ವಿಪದಾಂ ಬ್ರಾಹ್ಮಣೋ ಯಥಾ ॥

- ಪ.ಪು. ೧೭/೪೫,೪೬

ಪರ್ವತಗಳಲ್ಲಿ ಮೇರು, ಗ್ರಹಗಳಲ್ಲಿ ಸೂರ್ಯ, ನದಿಗಳಲ್ಲಿ ಗಂಗಾ, ಪಕ್ಷಿಗಳಲ್ಲಿ ಗರುಡ, ನಕ್ಷತ್ರಗಳಲ್ಲಿ ಚಂದ್ರ, ಪಶುಗಳಲ್ಲಿ ಗೋವು, ಮನುಷ್ಯರಲ್ಲಿ ಬ್ರಾಹ್ಮಣ ಹೇಗೋ ಹಾಗೆ ಮಾಸಗಳಲ್ಲಿ ಅಧಿಕಮಾಸ ಶ್ರೇಷ್ಠವಾದುದು.

ಅಕಾಮಃ ಸರ್ವಕಾಮೋ ವಾ ಯೋಽಧಿಮಾಸಂ ಪ್ರಪೂಜಯೇತ್।
ಕರ್ಮಾಣಿ ಭಸ್ಮಸಾತ್ ಕೃತ್ವಾ ಮಾಮೇವೈಷ್ಯತ್ಯಸಂಶಯಮ್ ॥

- ಬೃ.ನಾ. ೭/೧೪

ಯಾವುದೇ ಕಾಮನೆ ಇರಲಿ, ಇಲ್ಲದಿರಲಿ ಅಧಿಕಮಾಸವನ್ನು ಆಚರಿಸಲೇಬೇಕು. ಇದ-ರಿಂದ ಸಕಲದುಷ್ಕರ್ಮಗಳು ಬೂದಿಯಾಗಿ ಹರಿಲೋಕದ ಪ್ರಾಪ್ತಿಯು ಲಭಿಸುವುದು.

ವಿಧಿವತ್ಸೇವತೇ ಯಸ್ತು ಪುರುಷೋತ್ತಮಮಾದರಾತ್।
ಕುಲಂ ಸ್ವಕೀಯಮುದ್ಧೃತ್ಯ ಮಾಮೇವೈಷ್ಯತ್ಯಸಂಶಯಮ್ ॥ -ಬೃ.ನಾ. ೭/೨೨

ಆದರದಿಂದ ಈ ಪುರುಷೋತ್ತಮಮಾಸವನ್ನು ವಿಧ್ಯುಕ್ತವಾಗಿ ಆಚರಿಸುವವನು ತನ್ನ ಕುಲವನ್ನು ಉದ್ಧರಿಸಿ ಮುಂದೆ ವಿಷ್ಣುಲೋಕವನ್ನು ಪಡೆಯುವನು.

ಪೃಥಿವ್ಯಾಂ ಯಾನಿ ತೀರ್ಥಾನಿ ಕ್ಷೇತ್ರಾಣಿ ಸರ್ವದೇವತಾಃ।
ತದ್ದೇಹೇ ತಾನಿ ತಿಷ್ಠಂತಿ ಯಃ ಕುರ್ಯಾತ್ ಪುರುಷೋತ್ತಮಮ್ ॥

- ಬೃ.ನಾ. ೨೨/೩೪

ಅಧಿಕಮಾಸವನ್ನು ಆಚರಿಸುವವರ ದೇಹದಲ್ಲಿ ಭೂಮಿಯಲ್ಲಿನ ಸಕಲತೀರ್ಥಗಳು, ಕ್ಷೇತ್ರಗಳು, ಸರ್ವದೇವತೆಗಳು ಸನ್ನಿಧಾನವನ್ನಿರಿಸುವರು.

ದುಃಸ್ವಪ್ನಂ ಚೈವ ದಾರಿದ್ರ್ಯಂ ದುಷ್ಕೃತಂ ತ್ರಿವಿಧಂ ಚ ಯತ್।
ತತ್ ಸರ್ವಂ ವಿಲಯಂ ಯಾತಿ ಕೃತೇ ಶ್ರೀಪುರುಷೋತ್ತಮೇ ॥ -ಬೃ.ನಾ. ೨೨/೩೫

ದುಃಸ್ವಪ್ನ, ದಾರಿದ್ರ್ಯ ಹಾಗೂ ದುಷ್ಕೃತ ಎಂಬ ಮೂರು ವಿಧವಾದ ಅನಿಷ್ಟವು ಅಧಿಕಮಾಸವನ್ನು ಆಚರಿಸಿದಾಗ ಪರಿಹಾರವಾಗುವುದು.

ಪುರುಷೋತ್ತಮಸೇವಾಯಾಂ ನಿಶ್ಚಲಂ ಹರಿಸೇವಕಮ್ ।
ವಿಘ್ನಾದ್ರಕ್ಷ್ಯಂತಿ ಶಕ್ರಾದ್ಯಾಃ ಪುರುಷೋತ್ತಮತುಷ್ಟಯೇ ॥ - ಬೃ.ನಾ. ೨೨/೩೬

ಅಧಿಕಮಾಸವನ್ನು ನಿಷ್ಠೆಯಿಂದ ಶ್ರೀಹರಿಪ್ರೀತಿಗೆಂದು ಆಚರಿಸುವ ಹರಿಭಕ್ತನಿಗೆ ವಿಘ್ನಗಳು ಒದಗದಂತೆ ಇಂದ್ರಾದಿದೇವತೆಗಳು ರಕ್ಷಿಸುವರು.

ಪುರುಷೋತ್ತಮಸ್ಯ ವ್ರತಿನೋ ಯತ್ರ ಯತ್ರ ವಸಂತಿ ಚ ।
ಭೂತಪ್ರೇತಪಿಶಾಚಾದ್ಯಾ ನ ತಿಷ್ಠಂತಿ ತದಗ್ರತಃ ॥ - ಬೃ.ನಾ. ೨೨/೩೭

ಅಧಿಕಮಾಸವನ್ನು ಆಚರಿಸುವ ವ್ರತಶೀಲರು ವಾಸಿಸುವ ಸ್ಥಳಗಳಲ್ಲಿ ಭೂತ, ಪ್ರೇತ, ಪಿಶಾಚಿ ಮೊದಲಾದವುಗಳು ಸರ್ವಥಾ ನೆಲೆಸಲಾರವು.

ಧನಧಾನ್ಯಪಶುವ್ರಾತಪುತ್ರಪೌತ್ರಯಶಸ್ಕರಮ್ ।
ವಂಧ್ಯಾವಂಧ್ಯತ್ವಶಮನಮವೈಧವ್ಯಕರಂ ಸ್ತ್ರಿಯಃ ॥
ರಾಜ್ಯಪದಂ ರಾಜ್ಯಭ್ರಷ್ಟಸ್ಯ ಚಿಂತಿತಾರ್ಥಕರಂ ನೃಣಾಮ್ ।
ಕನ್ಯಾ ವಿಂದೇತ ಭರ್ತಾರಂ ಗುಣಿನಂ ಚಿರಜೀವಿನಮ್ ॥
ಕಾಂತಾರ್ಥೀ ಲಭತೇ ಕಾಂತಾಂ ಸುಶೀಲಾಂ ಚ ಪತಿವ್ರತಾಮ್ ।
ವಿದ್ಯಾರ್ಥೀ ಲಭತೇ ವಿದ್ಯಾಂ ಸುಸಿದ್ಧಿಂ ಸಿದ್ಧಿಕಾಮುಕಃ ॥
ಕೋಶಕಾಮೋ ಲಭೇತ್ ಕೋಶಂ ಮೋಕ್ಷಾರ್ಥೀ ಮೋಕ್ಷಮಾಪ್ನುಯಾತ್ ॥
- ಬೃ.ನಾ. ೨೪/೨೬-೨೯

ಅಧಿಕಮಾಸದ ಆಚರಣೆಯು ಧನ, ಧಾನ್ಯ, ಪಶುಗಳ ಹಿಂಡು, ಪುತ್ರ, ಪೌತ್ರ, ಪ್ರಾಪ್ತಿ ಹಾಗೂ ಕೀರ್ತಿಗಳಿಗೆ ಸಾಧನ. ಸ್ತ್ರೀಯರಿಗೆ ಬಂಜೆತನವನ್ನು ತೊಲಗಿಸುವುದು; ವೈಧವ್ಯ ಬರದಂತೆ ರಕ್ಷಿಸುವುದು. ರಾಜ್ಯಭ್ರಷ್ಟರಿಗೆ ಪುನಃ ರಾಜ್ಯವನ್ನು ದೊರಕಿಸುವುದು; ಮನುಷ್ಯರಿಗೆ ಬಯಸಿದ್ದನ್ನು ನೀಡುವುದು; ಕನ್ಯೆಯು ಗುಣವಂತನು, ದೀರ್ಘಾಯುವು ಆದ ಪತಿಯನ್ನು ಪಡೆಯುವಳು; ತರುಣನು ಸುಶೀಲೆಯು, ಪತಿವ್ರತೆಯೂ ಆದ ಕನ್ಯೆಯನ್ನು ಪಡೆಯುವನು. ವಿದ್ಯಾರ್ಥಿಗೆ ವಿದ್ಯೆಯು, ಸಿದ್ಧಿ ಬಯಸುವವನಿಗೆ ಸಿದ್ಧಿಯು ಲಭಿಸುವುದು; ಕೋಶ ಬಯಸುವವನಿಗೆ ಕೋಶವು ದೊರೆಯುವುದು; ಮೋಕ್ಷಾರ್ಥಿಯು ಮೋಕ್ಷವನ್ನು ಹೊಂದುವನು.

ಮಲಮಾಸೇ ತು ಸಂಪ್ರಾಪ್ತೇ ಸಂಧ್ಯೋಪಾಸನತರ್ಪಣೇ ॥
ನಿತ್ಯಂ ಹಿ ಸಫಲಂ ಶ್ರಾದ್ಧದಾನಾದಿನಿಯಮವ್ರತಮ್ ।
ಬ್ರಹ್ಮಹತ್ಯಾದಿಪಾಪಾನಿ ನಶ್ಯಂತೇ ತದ್ ವ್ರತೇನ ಹಿ ॥ - ಭ.ಪು. ೧೪-೧೫

ಅಧಿಕಮಾಸ ಬಂದಾಗ ಪ್ರತಿನಿತ್ಯ ಸಂಧ್ಯಾವಂದನೆ, ತರ್ಪಣ, ಶ್ರಾದ್ಧದಾನಾದಿ ನಿಯಮಗಳು ಅತ್ಯಂತ ಪುಣ್ಯಕರ. ಇವುಗಳ ಆಚರಣೆಯಿಂದ ಬ್ರಹ್ಮಹತ್ಯಾದಿಪಾಪಗಳು ಪರಿಹಾರವಾಗುವವು.

ಅಧಿಕಮಾಸದ ಮುಖ್ಯ ಕರ್ತವ್ಯ ಮತ್ತು ಅದರ ಫಲ

ಅಧಿಮಾಸೇ ತು ಸಂಪ್ರಾಪ್ತೇ ಶುಭೇ ಸೂರ್ಯಾದಿದೈವತೇ ।
ತ್ರಯಸ್ತ್ರಿಂಶದಪೂಪಾಂಶ್ಚ ದಾನಾರ್ಹಾಂಶ್ಚ ದಿನೇದಿನೇ ॥
ಸುವರ್ಣಗುಡಸಂಯುಕ್ತಾನ್ ಕಾಂಸ್ಯಪಾತ್ರೇ ನಿಧಾಯ ಚ ।
ವಿಷ್ಣುಪ್ರೀತ್ಯೈ ಪ್ರದದ್ಯಾಚ್ಚ ಪೃಥ್ವೀದಾನಫಲಂ ಲಭೇತ್ ॥
ದ್ವಾದಶ್ಯಾಂ ಪೌರ್ಣಮಾಸ್ಯಾಂ ವಾ ಕ್ಷಯೇ ಪಾತೇ ಶುಭೇಽಹ್ನಿ ವಾ ।
ನಿಷ್ಕಿಂಚನೇನ ದಾತವ್ಯಾ ಘೃತಶರ್ಕರಯಾ ಸಹ ॥
ಯಾವಂತಿ ಚೈವ ಛಿದ್ರಾಣಿ ತೇಷ್ವಪೂಪೇಷು ಪಾಂಡವ ।
ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥ – ಭವಿಷ್ಯತ್ಪುರಾಣ
ಮಾಸಾಧಿಕೇ ತು ಸಂಪ್ರಾಪ್ತೇ ಯಾವತ್ಸರ್ವಾನಪೂಪಕಾನ್ ।
ತಾವದ್ವರ್ಷಮವಾಪ್ನೋತಿ ವಿಷ್ಣುಲೋಕಂ ಸನಾತನಮ್ ॥ – ಸ್ಮೃತಿ

ಅಧಿಕಮಾಸದಲ್ಲಿ ದ್ವಾದಶೀ, ಹುಣ್ಣಿಮೆ ಅಥವಾ ಯಾವುದೇ ಶುಭದಿನಗಳಲ್ಲಿ ಬೆಲ್ಲ ತುಪ್ಪಗಳೊಂದಿಗೆ ಕೂಡಿದ ಮೂವತ್ಮೂರು ಅಪೂಪಗಳನ್ನು ಕಂಚಿನ ಪಾತ್ರೆಯಲ್ಲಿರಿಸಿ ಸುವರ್ಣಸಮೇತ ಯೋಗ್ಯಬ್ರಾಹ್ಮಣರಿಗೆ ಪ್ರತಿದಿನ ದಾನವೀಯಬೇಕು. ಅದರಿಂದ ಅಪೂಪದಲ್ಲಿರುವ ಛಿದ್ರಗಳ ಸಂಖ್ಯೆಯಷ್ಟು ದೀರ್ಘಕಾಲ ಸ್ವರ್ಗಲೋಕದಲ್ಲಿ ವಾಸಿಸುವ ಪುಣ್ಯವು ಲಭಿಸುತ್ತದೆ. ಮೂವತ್ಮೂರು ದೇವತೆಗಳನ್ನು ಉದ್ದೇಶಿಸಿ ಮಾಡುವ ಅಪೂಪ-ದಾನವು ಪೃಥ್ವೀದಾನದ ಫಲವನ್ನು ತಂದುಕೊಡುತ್ತದೆ. ಕ್ರಮವಾಗಿ, ಅಪರೋಕ್ಷಜ್ಞಾನ-ದ್ವಾರಾ ಮೋಕ್ಷಪದವನ್ನು ಹೊಂದಲು ಸಹ ಇದು ನೆರವಾಗುತ್ತದೆ.

ಅಸಂಕ್ರಾಂತೇ ತು ಸಂಪ್ರಾಪ್ತೇ ಮಾಮುದ್ದಿಶ್ಯ ವ್ರತಂ ಚರೇತ್ ।
ಅಧಿಮಾಸಸ್ಯಾಧಿಪತಿರಹಂ ವೈ ಪುರುಷೋತ್ತಮಃ ॥
ಸ್ನಾನಂ ದಾನಂ ಜಪೋ ಹೋಮಃ ಸ್ವಾಧ್ಯಾಯಃ ಪಿತೃತರ್ಪಣಮ್ ।
ದೇವಾರ್ಚಾಂ ಚ ತಥಾ ಚೈವ ಯೇಽರ್ಚಯಂತಿ ನರಾ ಇಹ ॥
ಅಕ್ಷಯ್ಯಂ ತದ್ಭವೇತ್ ಸರ್ವಂ ಮಾಮುದ್ದಿಶ್ಯ ಚ ಯತ್ಕೃತಮ್ ॥
–ಪ.ಪು. ೧/೧೫-೧೭

ಅಧಿಕಮಾಸದಲ್ಲಿ ಸ್ನಾನ, ದಾನ, ಜಪ, ಹೋಮ, ಸ್ವಾಧ್ಯಾಯ, ಪಿತೃತರ್ಪಣ, ದೇವಪೂಜೆ ಇವುಗಳಿಂದ ಶ್ರೀಹರಿಯನ್ನು ಆರಾಧಿಸುವವನು ಅಕ್ಷಯಪುಣ್ಯವನ್ನು ಪಡೆದುಕೊಳ್ಳುವನು.

ಸ್ನಾನಂ ದಾನಂ ಜಪಂ ಹೋಮಂ ಸ್ವಾಧ್ಯಾಯಂ ಪಿತೃತರ್ಪಣಮ್ ।
ದೇವಾರ್ಚನಮಥಾನ್ಯಚ್ಚ ಯೇ ಕುರ್ವಂತಿ ಮನುಷ್ಯಜಾಃ ।
ಅಕ್ಷಯಂ ತದ್ಭವೇತ್ ಸರ್ವಂ ಮಮೋದ್ದೇಶೇನ ಯತ್ಕೃತಮ್ ॥
– ಭವಿಷ್ಯತ್ಪುರಾಣ

ಅಧಿಕಮಾಸದಲ್ಲಿ ಸ್ನಾನ, ದಾನ, ಜಪ, ಹೋಮ, ಸ್ವಾಧ್ಯಾಯ, ಪಿತೃತರ್ಪಣ ಹಾಗೂ ದೇವಪೂಜೆ ಮೊದಲಾದ ನಿತ್ಯಕಾರ್ಯಗಳನ್ನು ಶ್ರೀಹರಿಪ್ರೀತಿಗಾಗಿ ತಪ್ಪದೇ ಮಾಡಿದಲ್ಲಿ ಅವು ಅಕ್ಷಯವೆನ್ನಿಸುವವು.

ಯೇ ಚ ಮಾಸಾಃ ಸಸಂಕ್ರಾಂತಾಸ್ತೇಷಾಂ ಸ್ವಾಮೀ ರವಿಃ ಸ್ಮೃತಃ ।
ಮಲಮಾಸೇ ಚ ಸರ್ವೇಽಸ್ಮಿನ್ ಸ್ವಯಂ ದೇವೋ ಜನಾರ್ದನಃ ॥
ತಮುದ್ದಿಶ್ಯ ಕೃತಂ ಯಚ್ಚ ಸ್ವಲ್ಪಂ ವಾ ಯದಿ ವಾ ಬಹು ।
ಹುತಂ ದತ್ತಂ ತಪಸ್ತಪ್ತಂ ತದಕ್ಷಯ್ಯಕರಂ ಭವೇತ್॥ -ಪ.ಪು.೨/೧-೩

ಸಂಕ್ರಾಂತಿಯನ್ನು ಹೊಂದಿದ ಇತರ ಮಾಸಗಳ ಅಧಿಪತಿ ಸೂರ್ಯ ಹಾಗೂ ಅವನ ಅಂತರ್ಯಾಮಿಯಾದ ಶ್ರೀಹರಿ. ಆದರೆ ಅಧಿಕಮಾಸಕ್ಕೆ ಸ್ವಯಂ ಶ್ರೀಹರಿಯೇ ಅಧಿದೇವತೆ. ಅವನ ಆರಾಧನೆಗಾಗಿ ಮಾಡುವ ಹೋಮ, ದಾನ, ತಪಸ್ಸು ಮೊದಲಾದವುಗಳು ಎಷ್ಟೇ ಅಲ್ಪವಾಗಿದ್ದರೂ ಅಕ್ಷಯಫಲವನ್ನು ನೀಡುವವು.

ಯದಾ ಮಲಿಮ್ಲುಚೋ ಮಾಸಃ ಪ್ರಾಪ್ಯತೇ ಮಾನವೈಃ ಪ್ರಿಯೇ ।
ಮಹೋತ್ಸವಸ್ತದಾ ಕಾರ್ಯಮಾತ್ಮನೋ ಹಿತಕಾಂಕ್ಷಿಭಿಃ ॥
ಕೃಷ್ಣಪಕ್ಷೇ ಚತುರ್ದಶ್ಯಾಂ ನವಮ್ಯಾಂ ವಾ ಸುರೇಶ್ವರಿ ।
ಅಷ್ಟಮ್ಯಾಂ ವಾಽಥ ಕರ್ತವ್ಯಂ ವ್ರತಂ ಶೋಕವಿನಾಶನಮ್ ॥
- ಭವಿಷ್ಯತ್ಪುರಾಣ

ಅಧಿಕಮಾಸ ಬಂದಾಗ ಹಿತವನ್ನು ಬಯಸುವ ಮಾನವರು ಕೃಷ್ಣಪಕ್ಷದ ಚತುರ್ದಶೀ, ನವಮೀ ಅಥವಾ ಅಷ್ಟಮಿಯಂದು ವಿಶೇಷವಾದ ವ್ರತವನ್ನು ಆಚರಿಸತಕ್ಕದ್ದು.

ಅಶ್ವಮೇಧಸಹಸ್ರಾಣಿ ವಾಜಪೇಯಶತಾನಿ ಚ ।
ಅಧಿಮಾಸದಿನೈಕಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥ -ಪ.ಪು. ೨೪/೮

ಸಾವಿರಾರು ಅಶ್ವಮೇಧಗಳು, ನೂರಾರು ವಾಜಪೇಯಯಾಗಗಳು ಅಧಿಕಮಾಸದ ಒಂದು ದಿನದ ಹದಿನಾರನೆಯ ಒಂದಂಶಕ್ಕೂ ಸಾಟಿಯೆನ್ನಿಸವು.

ತಾವತ್ಪಾಪಾನಿ ಗರ್ಜಂತಿ ತಾವದ್ಭೂತಾನಿ ಭೂತಲೇ ।
ತಾವಚ್ಚ ಯಾತನಾ ಯಾಮೀ ಯಾವದ್ದೂರೋ ಮಲಿಮ್ಲುಚಃ ॥
ಯಥಾ ಬೀಜಾನಿ ಭೂಭಾಗೇ ವಾಪಿತಾನಿ ಭವಂತಿ ಚ ।
ಅಮೃತಾಖ್ಯಾ ಯಥಾ ವಲ್ಲೀ ಯಥಾ ದೂರ್ವಾದಲಂ ಭುವಿ ॥
ವರ್ಧತೇ ತದ್ವದೇವೇದಂ ಕುರುತೇ ಸತ್ಫಲಂ ಮಲೇ ।
ತಸ್ಮಾತ್ ಸರ್ವಾತ್ಮನಾ ಶಕ್ತ್ಯಾ ಮಲಮಾಸವ್ರತಂ ಚರೇತ್ ॥
- ಪ.ಪು. ೨೪/೧೪-೧೬

ದೇಹದೊಳಗೆ ಪಾಪಗಳು ಹೆದರಿಸುವುದು ಜೀವಿಯು ಅಧಿಕಮಾಸವನ್ನು ಆಚರಿಸುವವರೆಗೆ ಮಾತ್ರ. ಭೂಮಿಯಲ್ಲಿ ಬಿತ್ತಿದ ಬೀಜಗಳು ಹೇಗೆ ಬೆಳೆಯುವವೋ, ಅಮೃತಬಳ್ಳಿ, ದೂರ್ವಾದಲ-ಗಳು ಹೇಗೆ ವರ್ಧಿಸುವವೋ ಹಾಗೆ ಅಧಿಕಮಾಸದಲ್ಲಿ ಮಾಡುವ ಸತ್ಕಾರ್ಯಗಳು ಅಪಾರ ಫಲ ನೀಡುವವು; ಆದ್ದರಿಂದ ಸರ್ವಾತ್ಮನಾ ಯಥಾಶಕ್ತಿ ಅಧಿಕಮಾಸವ್ರತವನ್ನು ಆಚರಿಸಲೇಬೇಕು.

ಅಧಿಕಮಾಸದ ಆಚರಣೆಯಿಂದ ಶನಿದೋಷದ ಪರಿಹಾರ

ಸ್ನಾನಂ ದಾನಂ ಜಪೋ ಹೋಮಃ ಸ್ವಾಧ್ಯಾಯೋ ಹರಿತೋಷಣಮ್ ।
ಸ್ನಾನೇನಾಥ ವ್ರತೇನಾಥ ದೀಪದಾನೇನ ವಾ ಪುನಃ ॥
ಯೇನ ಕೇನಾಪ್ಯುಪಾಯೇನ ಮಾಸೇಽಸ್ಮಿನ್ ವ್ರತಮುತ್ತಮಮ್ ।
ವ್ಯಾಜೇನಾಪಿ ಕೃತಂ ಯೇನ ನ ಸ ಪಶ್ಯತಿ ಭಾಸ್ಕರಿಮ್ ॥ - ಪ.ಪು.೨೪/೩-೪

ಅಧಿಕಮಾಸದಲ್ಲಿ ಸ್ನಾನ, ದಾನ, ಜಪ, ಹೋಮ, ಸ್ವಾಧ್ಯಾಯಗಳು ಶ್ರೀಹರಿಗೆ ಪ್ರೀತಿಕರ. ಇಂತಹ ಸ್ನಾನ, ವ್ರತ, ದೀಪದಾನ ಮೊದಲಾದ ಯಾವುದೇ ಉತ್ತಮಕಾರ್ಯಗಳನ್ನು ಯಾವ ನೆಪದಲ್ಲಿ ಮಾಡಿದರೂ ಶನಿದೋಷ ಪರಿಹಾರವಾಗುವುದು; ಅದರಂತೆ ನರಕಪ್ರಾಪ್ತಿಯ ಭಯವೂ ತೊಲಗುವುದು (ಭಾಸ್ಕರಿ ಎಂದರೆ ಭಾಸ್ಕರನ ಮಗ; ಯಮ ಹಾಗೂ ಶನಿ ಇಬ್ಬರು ಸೂರ್ಯನ ಪುತ್ರರು; ಇವರಿಬ್ಬರ ಭಯವೂ ಅಧಿಕಮಾಸದ ಆಚರಣೆ ಮಾಡಿದವರಿಗೆ ಒದಗದು ಎಂದರ್ಥ).

ಅಪೂಪಗಳನ್ನು ಶ್ರೀಹರಿಗೆ ಸಮರ್ಪಿಸುವ ವಿಧಿ

ಆಚ್ಛಾದ್ಯ ವಸ್ತ್ರಯುಗ್ಮೇನ ಪೀತೇನ ಚ ಯಥಾವಿಧಿ ।
ವಿಷ್ಣವೇ ಚ ತತೋ ದದ್ಯಾದುಪವೀತೇ ಚ ಶೋಭನೇ ॥
ಚಂದನೇನ ಸುಗಂಧೇನ ಪುಷ್ಪೈರ್ನಾನಾವಿಧೈರ್ನೃಪ ।
ಧೂಪೈರ್ನಾನಾವಿಧೈರ್ದೀಪೈಃ ಪೂಜಯೇಚ್ಚ ಯಥಾವಿಧಿ ॥
ಮಿಷ್ಟಾನ್ನೈಶ್ಚೈವ ನೈವೇದ್ಯೈರ್ನಾಗವಲ್ಲೀದಲಾನ್ವಿತೈಃ ।
ಘಂಟಾಮೃದಂಗನಿರ್ಘೋಷೈಃ ಶಂಖಧ್ವನಿಸಮನ್ವಿತೈಃ ॥
ಆರಾರ್ತಿಕಂ ಪ್ರಕುರ್ವೀತ ಕರ್ಪೂರಾಗುರುಚಂದನೈಃ ।
ಪ್ರದಕ್ಷಿಣನಮಸ್ಕಾರಾನ್ ಮಂತ್ರಪುಷ್ಪಂ ಯಥಾವಿಧಿ ॥ - ಪ.ಪು.

ಮೂವತ್ಮೂರು ಅಪೂಪಗಳನ್ನು ಎರಡು ಪೀತಾಂಬರಗಳಿಂದ ಮುಚ್ಚಬೇಕು. ಅವುಗಳನ್ನು ಎರಡು ನೂತನ ಯಜ್ಞೋಪವೀತಗಳೊಂದಿಗೆ ಶ್ರೀಹರಿಗೆ ಸಮರ್ಪಿಸಬೇಕು. ಶ್ರೀಗಂಧ, ಬಗೆಬಗೆಯ ಸುಗಂಧಪುಷ್ಪಗಳು ಹಾಗೂ ಧೂಪದೀಪಗಳಿಂದ ಪೂಜಿಸಬೇಕು. ಮೃಷ್ಟಾನ್ನಯುಕ್ತವಾದ ನೈವೇದ್ಯವನ್ನು ತಾಂಬೂಲದೊಂದಿಗೆ ಸಮರ್ಪಿಸಬೇಕು. ಘಂಟೆ,

ಮೃದಂಗ, ಶಂಖ ಮೊದಲಾದ ಘೋಷಗಳಿಂದ, ಕರ್ಪೂರ, ಅಗುರು, ಚಂದನಗಳಿಂದ ಕೂಡಿದ ಮಂಗಳಾರತಿಯನ್ನು ಸಮರ್ಪಿಸಬೇಕು. ಬಳಿಕ ಮಂತ್ರಪುಷ್ಪವನ್ನು, ಪ್ರದಕ್ಷಿಣೆ, ನಮಸ್ಕಾರಗಳನ್ನು ಅರ್ಪಿಸಬೇಕು.

ಪ್ರತಿದಿನವೂ ಅಪೂಪದಾನವು ವಿಹಿತ

ಅಧಿಮಾಸೇ ತು ಸಂಪ್ರಾಪ್ತೇ ಗುಡಸರ್ಪಿರ್ಯುತಾನಿ ಚ ।
ತ್ರಯಸ್ತ್ರಿಂಶದಪೂಪಾನಿ ದಾತವ್ಯಾನಿ ದಿನೇ ದಿನೇ ॥ - ಭ.ಪು.

ಅಧಿಕಮಾಸವು ಬಂದಾಗ, ಬೆಲ್ಲತುಪ್ಪಗಳೊಂದಿಗೆ ಕೂಡಿದ ಮೂವತ್ಮೂರು ಅಪೂಪಗಳನ್ನು ಪ್ರತಿನಿತ್ಯವೂ ದಾನಮಾಡಬೇಕು. (ಪ್ರತಿದಿನವೂ ಕೊಡುವ ಅವಕಾಶವನ್ನು ಅನೇಕ ಕಾರಣಗಳಿಂದಾಗಿ ಹೊಂದದವರು ಆ ತಿಂಗಳಲ್ಲಿ ಒಂದು ದಿನವಾದರೂ ಕೊಡಲೇಬೇಕು).

ತ್ರಯಸ್ತ್ರಿಂಶದಪೂಪಾಂಶ್ಚ ಪ್ರದದ್ಯಾದ್ ಘೃತಸಂಯುತಾನ್ ।
ಶ್ರೀಸೂರ್ಯಪ್ರೀತಯೇ ರಾಜನ್ ಸರ್ವಪಾಪವಿಮುಕ್ತಯೇ ॥ - ಭ.ಪು. ೯

ಘೃತದಿಂದ ಕೂಡಿದ ಮೂವತ್ತಮೂರು ಘೃತಪಕ್ವಅಪೂಪಗಳನ್ನು ಶ್ರೀಸೂರ್ಯನ (ಅಂತರ್ಯಾಮಿಯಾದ ಶ್ರೀನಾರಾಯಣನ) ಪ್ರೀತಿಗಾಗಿಯೂ, ಸಕಲಪಾಪಗಳ ಪರಿಹಾರಕ್ಕಾಗಿಯೂ ದಾನಮಾಡಬೇಕು.

ಅಪೂಪದಾನದ ವಿಶೇಷ

ತ್ರಯಸ್ತ್ರಿಂಶದಪೂಪಾನ್ನಂ ಕಾಂಸ್ಯಪಾತ್ರೇ ನಿಧಾಯ ಚ ।
ಸಘೃತಂ ಸಹಿರಣ್ಯಂ ಚ ಬ್ರಾಹ್ಮಣಾಯ ನಿವೇದಯೇತ್॥ - ಭ.ಪು.

ಮೂವತ್ಮೂರು ಅಪೂಪ(ಅತಿರಸ)ಗಳನ್ನು ಕಂಚಿನಪಾತ್ರೆಯಲ್ಲಿರಿಸಿ ತುಪ್ಪ ಮತ್ತು ಚಿನ್ನದ ಸಮೇತ ಯೋಗ್ಯಬ್ರಾಹ್ಮಣನಿಗೆ ಸಮರ್ಪಿಸಬೇಕು.

ಅಪೂಪದಾನ ಮಂತ್ರ

ವಿಷ್ಣುರೂಪೀ ಸಹಸ್ರಾಂಶುಃ ಸರ್ವಪಾಪಪ್ರಣಾಶನಃ ।
ಅಪೂಪಾನ್ನಪ್ರದಾನೇನ ಮಮ ಪಾಪಂ ವ್ಯಪೋಹತು ॥
ನಾರಾಯಣ ಜಗದ್ಬೀಜ ಭಾಸ್ಕರಪ್ರತಿರೂಪಧೃಕ್ ।
ವ್ರತೇನಾನೇನ ಪುತ್ರಾಂಶ್ಚ ಸಂಪದಂ ಚಾಭಿವರ್ಧಯ ॥
ಯಸ್ಯ ಹಸ್ತೇ ಗದಾ ಚಕ್ರೋ ಗರುಡೋ ಯಸ್ಯ ವಾಹನಮ್ ।

ಶಂಖಃ ಕರತಲೇ ಯಸ್ಯ ಸ ಮೇ ವಿಷ್ಣುಃ ಪ್ರಸೀದತು ॥
ಕಲಾಕಾಷ್ಠಾದಿರೂಪೇಣ ನಿಮೇಷಘಟಿಕಾದಿನಾ ।
ಯೋ ವಂಚಯತಿ ಭೂತಾನಿ ತಸ್ಮೈ ಕಾಲಾತ್ಮನೇ ನಮಃ ॥
ಕುರುಕ್ಷೇತ್ರಮಯೋ ದೇಶಃ ಕಾಲಃ ಪರ್ವ ದ್ವಿಜೋ ಹರಿಃ ।
ಪೃಥ್ವೀಸಮಮಿದಂ ದಾನಂ ಗೃಹಾಣ ಪುರುಷೋತ್ತಮ ॥
ಮಲಾನಾಂ ಚ ವಿಶುದ್ಧ್ಯರ್ಥಂ ಪಾಪಪ್ರಶಮನಾಯ ಚ ।
ಪುತ್ರಪೌತ್ರಾದಿವೃದ್ಧ್ಯರ್ಥಂ ತೇನ ದಾಸ್ಯಾಮಿ ಭಾಸ್ಕರ ॥ –ಪ.ಪು.

ವಿಷ್ಣುರೂಪದ ಸಹಸ್ರಕಿರಣನಾದ ಸೂರ್ಯ ಸರ್ವಪಾಪಗಳನ್ನು ಪರಿಹರಿಸುವವನು. ಈ ಅಪೂಪದಾನದಿಂದ ನನ್ನ ಪಾಪವನ್ನು ಪರಿಹರಿಸಲಿ; ಜಗತ್ಕಾರಣನಾದ ಶ್ರೀನಾರಾಯಣನಾದ ನೀನು ಸೂರ್ಯನ ಬಿಂಬ; ಈ ವ್ರತದಿಂದ ಪುತ್ರರನ್ನು, ಸಂಪತ್ತನ್ನು ಅಭಿವೃದ್ಧಿಗೊಳಿಸು; ಕೈಯಲ್ಲಿ ಶಂಖಗದಾಚಕ್ರಗಳನ್ನು ಧರಿಸಿದ, ಗರುಡನನ್ನು ವಾಹನವನ್ನಾಗಿ ಉಳ್ಳ ವಿಷ್ಣುವು ನನಗೆ ಪ್ರಸನ್ನನಾಗಲಿ. ಕಲಾ, ಕಾಷ್ಠ, ನಿಮೇಷ, ಘಳಿಗೆ ಮೊದಲಾದ ರೂಪಗಳಲ್ಲಿ ನೆಲೆಸಿದ್ದು ಪ್ರಾಣಿಗಳನ್ನು ನಿಯಂತ್ರಿಸುವ ಕಾಲರೂಪಿಯಾದ ಶ್ರೀಹರಿಗೆ ನಮಸ್ಕಾರ. ಅಧಿಕಮಾಸದ ಕಾಲ ಪರ್ವಕಾಲ; ಪ್ರತಿಸ್ಥಳವೂ ಕುರುಕ್ಷೇತ್ರ; ಪ್ರತಿಯೊಬ್ಬ ವಿಪ್ರನಲ್ಲೂ ಶ್ರೀಹರಿಯ ಸನ್ನಿಧಾನ. ಈ ದಾನವಂತೂ ಪೃಥ್ವೀದಾನಕ್ಕೆ ಸಮಾನ. ಪುರುಷೋತ್ತಮನೇ ಇದನ್ನು ಸ್ವೀಕರಿಸು. ದೋಷಗಳ ಪರಿಹಾರಕ್ಕೋಸ್ಕರ, ಪಾಪಗಳ ನಾಶಕ್ಕೋಸ್ಕರ, ಪುತ್ರಪೌತ್ರಾದಿಗಳ ಅಭಿವೃದ್ಧಿಗೋಸ್ಕರ ಹೇ ಭಾಸ್ಕರರೂಪಿ ವಿಷ್ಣುವೇ! ನಾನು ಇದನ್ನು ನಿನಗೆ ಸಮರ್ಪಿಸುತ್ತಿರುವೆನು.

ಅಪೂಪದಾನಕಾಲದಲ್ಲಿ ಚಿಂತಿಸಬೇಕಾದ ಭಗವದ್ರೂಪಗಳು

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಹರಿಂ ಕೃಷ್ಣಮಧೋಕ್ಷಜಮ್ ।
ಕೇಶವಂ ಮಾಧವಂ ರಾಮಮಚ್ಯುತಂ ಪುರುಷೋತ್ತಮಮ್ ॥
ಗೋವಿಂದಂ ವಾಮನಂ ಶ್ರೀಶಂ ಶ್ರೀಕಂಠಂ ವಿಶ್ವಸಾಕ್ಷಿಣಮ್ ।
ನಾರಾಯಣಂ ಮಧುರಿಪುಮನಿರುದ್ಧಂ ತ್ರಿವಿಕ್ರಮಮ್ ॥
ವಾಸುದೇವಂ ಜಗದ್ಯೋನಿಮನಂತಂ ಶೇಷಶಾಯಿನಮ್ ।
ಸಂಕರ್ಷಣಂ ಚ ಪ್ರದ್ಯುಮ್ನಂ ದೈತ್ಯಾರಿಂ ವಿಶ್ವತೋಮುಖಮ್ ॥
ಜನಾರ್ದನಂ ಧರಾವಾಸಂ ದಾಮೋದರಮಘಾರ್ದನಮ್ ।
ಶ್ರೀಪತಿಂ ಚ [೧]ತ್ರಯಸ್ತ್ರಿಂಶದುದ್ದಿಶ್ಯ ಪ್ರತಿನಾಮಭಿಃ ॥

---

೧. ಪದ್ಮಪುರಾಣದಲ್ಲಿ ಧರಾವಾಸ, ದಾಮೋದರ ಹಾಗೂ ಅಘಾರ್ದನ ಎಂಬ ಮೂರು ನಾಮಗಳ ಬದಲಿಗೆ ಧರಾಧಾರ, ಶ್ರೀಧರ, ಗರುಡಧ್ವಜ ಎಂಬ ನಾಮಾಂತರಗಳು ಉಲ್ಲೇಖಿಸಲ್ಪಟ್ಟಿವೆ.

ಮಂತ್ರೈರೇತೈಶ್ಚ ಯೋ ದದ್ಯಾತ್ ತ್ರಯಸ್ತ್ರಿಂಶದಪೂಪಕಮ್ ।
ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರಪೌತ್ರಾದಿಸಂತತಿಮ್ ॥

ವಿಷ್ಣು, ಜಿಷ್ಣು, ಮಹಾವಿಷ್ಣು, ಹರಿ, ಕೃಷ್ಣ, ಅಧೋಕ್ಷಜ, ಕೇಶವ, ಮಾಧವ, ರಾಮ, ಅಚ್ಯುತ, ಪುರುಷೋತ್ತಮ, ಗೋವಿಂದ, ವಾಮನ, ಶ್ರೀಶ, ಶ್ರೀಕಂಠ, ವಿಶ್ವಸಾಕ್ಷಿ, ನಾರಾಯಣ, ಮಧುಸೂದನ, ಅನಿರುದ್ಧ, ತ್ರಿವಿಕ್ರಮ, ವಾಸುದೇವ, ಜಗದ್ಯೋನಿ, ಅನಂತ, ಶೇಷಶಾಯಿ, ಸಂಕರ್ಷಣ, ಪ್ರದ್ಯುಮ್ನ, ದೈತ್ಯಾರಿ, ವಿಶ್ವತೋಮುಖ, ಜನಾರ್ದನ, ಧರಾವಾಸ, ದಾಮೋದರ, ಅಘಾರ್ದನ, ಶ್ರೀಪತಿ - ಇವು ಮೂವತ್ಮೂರು ಅಪೂಪಗಳಲ್ಲಿ ಚಿಂತಿಸಬೇಕಾದ ಶ್ರೀಹರಿಯ ರೂಪಗಳು. ಪ್ರತಿಯೊಂದು ಅಪೂಪದಲ್ಲಿ ನಾಮೋಚ್ಚಾರಣೆಪೂರ್ವಕ ಶ್ರೀಹರಿಯನ್ನು ಚಿಂತಿಸಿ ದಾನನೀಡುವವನು ಅಪಾರವಾದ ಸಂಪತ್ತನ್ನು, ಪುತ್ರ ಪೌತ್ರ ಮೊದಲಾದ ಸಂತತಿಯನ್ನು ಪಡೆಯುವನು.

ಮೂವತ್ಮೂರು ದೇವತೆಗಳು

೧-೮. ಅಷ್ಟವಸುಗಳು ಹಾಗೂ ಅವುಗಳ ಅಂತರ್ಯಾಮಿ ಭಗವದ್ರೂಪಗಳು :

ದ್ರೋಣ(ವಿಷ್ಣು)	ಧ್ರುವ(ಜಿಷ್ಣು)	ದೋಷ(ಮಹಾವಿಷ್ಣು)
ಅರ್ಕ(ಹರಿ)	ಅಗ್ನಿ(ಕೃಷ್ಣ)	ದ್ಯು (ಅಧೋಕ್ಷಜ)
ಪ್ರಾಣ(ಕೇಶವ)	ವಿಭಾವಸು(ಮಾಧವ)	

೯-೧೯. ಏಕಾದಶರುದ್ರರು ಹಾಗೂ ಅವುಗಳ ಅಂತರ್ಯಾಮಿ ಭಗವದ್ರೂಪಗಳು :

ಭೀಮ(ರಾಮ)	ರೈವತ (ಅಚ್ಯುತ)	ಓಜ (ಪುರುಷೋತ್ತಮ)
ಅಜೈಕಪಾತ್(ಗೋವಿಂದ)	ಮಹಾನ್ (ವಾಮನ)	ಬಹುರೂಪ (ಶ್ರೀಶ)
ಭವ (ಶ್ರೀಕಂಠ)	ವಾಮದೇವ(ವಿಶ್ವಸಾಕ್ಷೀ)	ಉಗ್ರ(ನಾರಾಯಣ)
ವೃಷಾಕಪಿ (ಮಧುರಿಪು)		ಅಹಿರ್ಬುಧ್ನಿ(ಅನಿರುದ್ಧ)

೨೦-೩೧. ದ್ವಾದಶಾದಿತ್ಯರು ಹಾಗೂ ಅವುಗಳ ಅಂತರ್ಯಾಮಿ ಭಗವದ್ರೂಪಗಳು :

ವಿವಸ್ವಾನ್(ತ್ರಿವಿಕ್ರಮ)	ಅರ್ಯಮಾ(ವಾಸುದೇವ)	ಪೂಷಾ(ಜಗದ್ಯೋನಿ)
ತ್ವಷ್ಟೃ (ಅನಂತ)	ಸವಿತೃ (ಶೇಷಶಾಯಿ)	ಭಗ (ಸಂಕರ್ಷಣ)
ಧಾತೃ (ಪ್ರದ್ಯುಮ್ನ)	ಪರ್ಜನ್ಯ(ದೈತ್ಯಾರಿ)	ವರುಣ(ವಿಶ್ವತೋಮುಖ)
ಮಿತ್ರ(ಜನಾರ್ದನ)	ಶಕ್ರ (ಧರಾವಾಸ)	ಉರುಕ್ರಮ(ದಾಮೋದರ)

೩೨. ಪ್ರಜಾಪತಿ (ಅಘಾರ್ದನ)

೩೩. ವಷಟ್ಕಾರ (ಶ್ರೀಪತಿ)

ಕಂಚಿನ ಪಾತ್ರೆಯ ದಾನದ ವಿಶೇಷ

ಕಾಂಸ್ಯಾನಿ ಸಂಪುಟಾನ್ಯೇವ ತ್ರಿಂಶದ್ದೇಯಾನಿ ಸರ್ವಥಾ ।
ತ್ರಿಂಶತ್ತ್ರಿಂಶದಪೂಪೈಶ್ಚ ಮಧ್ಯೇ ಸಂಪೂರಿತಾನಿ ಚ ॥ - ಬೃ.ನಾ. ೨೫/೩೮

ಮೂವತ್ಮೂರು ಅಪೂಪಗಳಿಂದ ಕೂಡಿದ ಕಂಚಿನ ಪಾತ್ರೆಗಳನ್ನು ದಾನನೀಡಬೇಕು.

ಪ್ರತ್ಯಪೂಪಂ ತು ಯಾವಂತಿ ಛಿದ್ರಾಣಿ ಪೃಥಿವೀಪತೇ ।
ತಾವದ್ವರ್ಷಸಹಸ್ರಾಣಿ ವೈಕುಂಠೇ ವಸಂತೇ ನರಃ ॥
ತತಃ ಪ್ರಯಾತಿ ಗೋಲೋಕಂ ನಿರ್ಗುಣಂ ಯೋಗಿದುರ್ಲಭಮ್ ।
ಯದ್ಗತ್ವಾ ನ ನಿವರ್ತಂತೇ ಜ್ಯೋತಿರ್ಧಾಮ ಸನಾತನಮ್ ॥
-ಬೃ.ನಾ.೨೫/೩೯-೪೦

ದಾನನೀಡಿದ ಅಪೂಪಗಳಲ್ಲಿ ಪ್ರತಿಯೊಂದರಲ್ಲಿ ಎಷ್ಟು ಛಿದ್ರಗಳಿರುವವೋ ಅಷ್ಟು ಸಾವಿರ ವರ್ಷಗಳ ಕಾಲ ಕಂಚಿನ ಸಂಪುಟಗಳಲ್ಲಿ ಅಪೂಪದಾನ ಮಾಡವವನು ವೈಕುಂಠದಲ್ಲಿ ನೆಲೆಸುವನು. ಅಪ್ರಾಕೃತವಾದ, ಯೋಗಿಗಳಿಗೂ ದುರ್ಲಭವಾದ ವೈಕುಂಠ ಅವನಿಗೆ ಲಭಿಸುವುದು.

ಸಾರ್ಧಪ್ರಸ್ಥದ್ವಯಂ ಕಾಂಸ್ಯಸಂಪುಟಂ ಪರಿಕೀರ್ತಿತಮ್ ।
ನಿರ್ಧನೇನ ಯಥಾಶಕ್ತ್ಯಾ ಕಾರ್ಯಾಣಿ ವ್ರತಪೂರ್ತಯೇ ॥
ಅಥವಾಽಪೂಪಸಾಮಗ್ರೀಮಪಕ್ವಾಂ ಸಫಲಾಂ ಪರಾಮ್ ।
ತತ್ರಾಧಾಯ ಪ್ರದೇಯಾನಿ ಪುರುಷೋತ್ತಮಪ್ರೀತಯೇ ॥
- ಬೃ.ನಾ. ೨೫/೪೧-೪೨

ಶಕ್ತಿ ಇಲ್ಲದವನು ಯಥಾಶಕ್ತಿಯಾದರೂ ಅಪೂಪದಾನವನ್ನು ಮಾಡಬೇಕು; ಅಥವಾ ಅಪೂಪದ್ರವ್ಯಗಳನ್ನಾದರೂ ಕಂಚಿನ ಪಾತ್ರೆಯಲ್ಲಿ ಹಾಕಿ ಶ್ರೀಪುರುಷೋತ್ತಮನ ಪ್ರೀತಿಗೆಂದು ಸಮರ್ಪಿಸಬೇಕು.

ಸ್ತ್ರೀಯರಿಗೂ ಅಧಿಕಮಾಸದ ಆಚರಣೆಯು ವಿಹಿತ

ಯಾಃ ಸ್ತ್ರಿಯಃ ಸುಭಗಾಃ ಪುತ್ರಸುಖಸೌಭಾಗ್ಯಹೇತವೇ ।
ಪುರುಷೋತ್ತಮೇ ಕರಿಷ್ಯಂತಿ ಸ್ನಾನದಾನಾರ್ಚನಾದಿಕಮ್ ।
ತಾಸಾಂ ಸೌಭಾಗ್ಯಸಂಪತ್ತಿಸುಖಪುತ್ರಪ್ರದೋ ಹ್ಯಹಮ್ ॥ - ಬೃ.ನಾ. ೭/೩೬

ಪುತ್ರಸುಖ ಹಾಗೂ ಸೌಭಾಗ್ಯಗಳಿಗಾಗಿ ಅಧಿಕಮಾಸದಲ್ಲಿ ಸ್ನಾನ, ದಾನ ಹಾಗೂ ಅರ್ಚನೆ ಮೊದಲಾದವುಗಳನ್ನು ಆಚರಿಸುವ ಸ್ತ್ರೀಯರು ಲಕ್ಷಣವತಿಯರು ಎನ್ನಿಸುವರು.

ಅವರಿಗೆ ಶ್ರೀಹರಿಯು ಸೌಭಾಗ್ಯ, ಸಂಪತ್ತು ಸುಖ ಹಾಗೂ ಸಂತತಿಯನ್ನು ಕರುಣಿಸುವನು.

ಮಲಮಾಸವ್ರತಂ ನಾರೀ ಯಾ ಕರೋತೀಹ ಭಾರತ ||
ದಾರಿದ್ರ್ಯಂ ಪುತ್ರಶೋಕಂ ತು ನ ವೈಧವ್ಯಂ ಲಭೇತ ಸಾ || - ಭ.ಪು. ೮೪-೮೫

ಮಲಮಾಸವ್ರತವನ್ನು ಆಚರಿಸುವ ಸ್ತ್ರೀಯು ದಾರಿದ್ರ್ಯ, ಪುತ್ರಶೋಕ, ವೈಧವ್ಯಗಳನ್ನು ಹೊಂದಲಾರಳು.

ಅಸಂಕ್ರಾಂತವ್ರತಂ ನಾರೀ ಯಾ ಕರೋತಿ ಮಮ ಪ್ರಿಯೇ ।
ದಾರಿದ್ರ್ಯಂ ಪುತ್ರಶೋಕಂ ಚ ವೈಧವ್ಯಂ ನ ಲಭೇಚ್ಚ ಸಾ ।
ಪುರುಷೋऽಪ್ಯೇವಂವಿಧೋ ದೇವಿ ಯದಿ ಕುರ್ಯಾನ್ಮಲಿಮ್ಲುಚಮ್ ||
- ಭವಿಷ್ಯತ್ಪುರಾಣ

ಯಾವ ಸ್ತ್ರೀಯು ಅಧಿಕಮಾಸವ್ರತವನ್ನು ಆಚರಿಸುವಳೋ ಅವಳಿಗೆ ಬಡತನ, ಪುತ್ರಶೋಕ, ವೈಧವ್ಯಗಳು ಉಂಟಾಗಲಾರವು; ಅದರಂತೆ ಪುರುಷನೂ ಸಹ ಆಚರಿಸಿದಲ್ಲಿ ಯೋಗ್ಯಫಲಗಳು ಲಭಿಸುವವು.

ಏತತ್ತುಲ್ಯೋ ನ ಕೋऽಪ್ಯನ್ಯಃ ಕಾರ್ತಿಕಾದಿಷು ಸುಂದರಿ ।
ಸರ್ವೇ ಮಾಸಾಸ್ತಥಾ ಪಕ್ಷಾಃ ಪರ್ವಾಣ್ಯನ್ಯಾನಿ ಯಾನಿ ಚ ।
ಪುರುಷೋತ್ತಮಮಾಸಸ್ಯ ಕಲಾಂ ನಾರ್ಹಂತಿ ಷೋಡಶೀಮ್ ||
-ಬೃ.ನಾ. ೧೦/೬-೭

ಎಲ್ಲ ಇತರ ಮಾಸಗಳು, ಪಕ್ಷಗಳು, ಪರ್ವಕಾಲಗಳು ಅಧಿಕಮಾಸಕ್ಕೆ ಹದಿನಾರನೆ ಒಂದಂಶಕ್ಕೂ ಸಾಟಿಯೆನ್ನಿಸವು.

ಸಾಧನಾನಿ ಸಮಸ್ತಾನಿ ನಿಗಮೋಕ್ತಾನಿ ಯಾನಿ ಚ ।
ಮಾಸಸ್ಯೈತಸ್ಯ ನಾರ್ಹಂತಿ ಕಲಾಮಪಿ ಚ ಷೋಡಶೀಮ್ || -ಬೃ.ನಾ. ೧೦/೮

ಶಾಸ್ತ್ರೋಕ್ತವಾದ ಇತರ ಸಕಲಸಾಧನಗಳು ಈ ಅಧಿಕಮಾಸದ ಹದಿನಾರನೆಯ ಒಂದಂಶಕ್ಕೂ ಸಾಟಿಯೆನ್ನಿಸವು.

ದ್ವಾದಶಾಬ್ದ ಸಹಸ್ರಾಣಿ ಗಂಗಾಸ್ನಾನೇನ ಯತ್ಫಲಮ್ ।
ಗೋದಾವರೀಸಕೃತ್ಸ್ನಾನಾದ್ಯತ್ಫಲಂ ಸಿಂಹಗೇ ಗುರೌ ||
ತದೇವ ಫಲಮಾಪ್ನೋತಿ ಮಾಸೇ ವೈ ಪುರುಷೋತ್ತಮೇ ।
ಸಕೃತ್ ಸುಸ್ನಾನಮಾತ್ರೇಣ ಯತ್ರ ಕುತ್ರಾಪಿ ಸುಂದರಿ || - ಬೃ.ನಾ. ೧೦/೯-೧೧

ಹನ್ನೆರಡು ವರ್ಷಗಳ ಕಾಲ ಗಂಗಾಸ್ನಾನ ಮಾಡಿದ ಫಲ ಗುರು ಸಿಂಹರಾಶಿಯಲ್ಲಿದ್ದಾಗ ಗೋದಾವರಿಯಲ್ಲಿ ಒಮ್ಮೆ ಸ್ನಾನ ಮಾಡಿದರೆ ಲಭಿಸುವುದು. ಅಂತಹುದೇ ಫಲ ಅಧಿಕಮಾಸದಲ್ಲಿ ಒಮ್ಮೆ ಸ್ನಾನ ಮಾಡಿದರೆ ಲಭಿಸುವುದು (ಅಧಿಕಮಾಸದಲ್ಲಿ ನಿತ್ಯ ಶಾಸ್ತ್ರೋಕ್ತಪ್ರಾತಃಸ್ನಾನದ ಫಲ ಸಿಂಹರಾಶಿಯಲ್ಲಿ ಗೋದಾವರೀಸ್ನಾನದ ಫಲಕ್ಕೆ ಸಮವೆನ್ನಿಸುವುದು).

ಅಧಿಕಮಾಸದಲ್ಲಿ ನಿಷಿದ್ಧ ಕಾರ್ಯಗಳು

ಅನಿತ್ಯಮನಿಮಿತ್ತಂ ಚ ದಾನಂ ಚ ಮಹದಾದಿಕಮ್ ।
ಅಗ್ನ್ಯಾಧಾನಾಧ್ವರಾಪೂರ್ವತೀರ್ಥಯಾತ್ರಾಮರೇಕ್ಷಣಮ್ ॥
ದೇವಾರಾಮತಟಾಕಾದಿಪ್ರತಿಷ್ಠಾಂ ಮೌಂಜಿಬಂಧನಮ್ ।
ಆಶ್ರಮಸ್ವೀಕೃತಿಂ ಕಾಮ್ಯವೃಷೋತ್ಸರ್ಗಂ ಚ ನಿಷ್ಕ್ರಮಮ್ ॥
ರಾಜ್ಯಾಭಿಷೇಕಂ ಪ್ರಥಮಂ ಚೂಡಾಕರ್ಮವ್ರತಾನಿ ಚ ।
ಅನ್ನಪ್ರಾಶನಮಾರಂಭಂ ಗೃಹಾಣಾಂ ಚ ಪ್ರವೇಶನಮ್ ॥
ಸ್ನಾನಂ ವಿವಾಹಂ ನಾಮಾತಿಪನ್ನಂ ದೇವಮಹೋತ್ಸವಮ್ ।
ವ್ರತಾರಂಭಂ ಸಮಾಪ್ತಿಂ ಚ ಕಾಮ್ಯಕರ್ಮ ಚ ಪಾಪ್ಮನಾಮ್ ॥
ಪ್ರಾಯಶ್ಚಿತ್ತಂ ಚ ಸರ್ವಸ್ಯ ಮಲಮಾಸೇ ವಿವರ್ಜಯೇತ್॥

– ಬೃಹಸ್ಪತಿಃ(ಸ್ಮೃತಿಮುಕ್ತಾವಲಿಃ)

ತುಲಾಪುರುಷದಾನಾದಿ ಮಹಾದಾನಗಳು, ಅಗ್ನ್ಯಾಧಾನ, ಯಜ್ಞ, ಉದ್ಯಾನವನಗಳ ನಿರ್ಮಾಣ, ಕೆರೆ ಕಟ್ಟಿಸುವುದು, ಉಪನಯನ, ಸನ್ಯಾಸ ಸ್ವೀಕಾರ, ಜ್ಯೋತಿಷ್ಟೋಮಾದಿ ಕಾಮ್ಯಕರ್ಮಗಳು, ಮಗುವನ್ನು ಮೊದಲಬಾರಿಗೆ ಮನೆಯಿಂದ ಹೊರಕ್ಕೆ ಕರೆದೊಯ್ಯುವ ಕಾರ್ಯ, ಪಟ್ಟಾಭಿಷೇಕ ಕಾರ್ಯ, ಚೌಲ, ಉಪನಯನ, ವಿಶೇಷರೀತಿಯ ವ್ರತಗಳು, ಅನ್ನಪ್ರಾಶನ, ಗೃಹಾರಂಭ, ಗೃಹಪ್ರವೇಶ, ವಿಶೇಷತೀರ್ಥಸ್ನಾನ, ವಿವಾಹ, ಪಾಪಗಳಿಗೆ ಪ್ರಾಯಶ್ಚಿತ್ತ ಈ ಕಾರ್ಯಗಳನ್ನು ಅಧಿಕಮಾಸದಲ್ಲಿ ಮಾಡಕೂಡದು. (ಅಧಿಕಮಾಸದಲ್ಲಿ ಬಿಡುವ ಈ ಮೇಲಿನ ಕಾರ್ಯಗಳನ್ನು ಮುಂದೆ ಶುದ್ಧಮಾಸದಲ್ಲಿಯೇ ಮಾಡಬೇಕು). ಅಧಿಕಮಾಸಕ್ಕಿಂತ ಮುಂಚಿತವಾಗಿ ಪ್ರಾರಂಭಿಸಿದ್ದ (ವಿಷ್ಣುಪಂಚಕಾದಿ) ವ್ರತ ಮತ್ತು ವೈಶಾಖಸ್ನಾನದಿಕಾರ್ಯಗಳನ್ನು ಮಾತ್ರ ಅಧಿಕಮಾಸದಲ್ಲೂ ಮುಂದುವರಿಸಬೇಕು.

ಮಲಿಮ್ಲುಚೇ ತು ಸಂಪ್ರಾಪ್ತೇ ಕ್ರಿಯಾಃ ಸರ್ವಾಃ ಪರಿತ್ಯಜೇತ್ ।
ಪಿತೃಕಾರ್ಯಂ ದೇವಕಾರ್ಯಂ ತೀರ್ಥಯಾತ್ರಾವ್ರತಾದಿಕಮ್ ॥
ಕ್ಷೌರಂ ಮೌಂಜೀವಿವಾಹೌ ಚ ವ್ರತಂ ಕಾಮ್ಯೋಪವಾಸಕಮ್ ।
ಮಲಿಮ್ಲುಚೇ ಸದಾ ತ್ಯಾಜ್ಯಂ ಗೃಹಸ್ಥೈಶ್ಚ ವಿಶೇಷತಃ ॥ – ಬೃ.ನಾ. ೩/೩೭-೩೮

ಅಧಿಕಮಾಸವು ಬಂದಾಗ ತೀರ್ಥಯಾತ್ರೆ, ಪಿತೃಕಾರ್ಯ, ತೀರ್ಥಶ್ರಾದ್ಧ ಕ್ಷೌರ, ಉಪನಯನ, ವಿವಾಹ, ಕಾಮ್ಯವ್ರತ, ಕಾಮ್ಯಉಪವಾಸ ಮೊದಲಾದವುಗಳನ್ನು ಮಾಡಕೂಡದು.

ಅನರ್ಹೋ ಮಲಮಾಸೋಽಯಂ ರವಿಸಂಕ್ರಮವರ್ಜಿತಃ।
ಅಸ್ಪೃಶ್ಯೋ ಮಲರೂಪತ್ವಾಚ್ಛುಭೇ ಕರ್ಮಣಿ ಗರ್ಹಿತಃ ॥ - ಬೃ.ನಾ. ೩/೩೯

ಸೂರ್ಯಸಂಕ್ರಮಣವಿಲ್ಲದ ಕಾರಣ ಅಧಿಕಮಾಸವು ಮಲಮಾಸ ಎನ್ನಿಸುವುದು; ಇದು ಮಲರೂಪವಾದ್ದರಿಂದ ಉಪನಯನಾದಿ ಶುಭಕಾರ್ಯಗಳಿಗೆ ಯೋಗ್ಯವಲ್ಲ.

ಕ್ಷೌರಂ ಮೌಂಜೀ ವಿವಾಹಸ್ಯ ವ್ರತಂ ಕಾಮ್ಯೋಪವಾಸಕಮ್ ।
ಮಲಿಮ್ಲುಚೇ ಸದಾ ತ್ಯಾಜ್ಯಂ ಗೃಹಸ್ಥೇನ ವಿಶೇಷತಃ॥ - ಭವಿಷ್ಯತ್ಪುರಾಣ

ಮಲಮಾಸದಲ್ಲಿ ಕ್ಷೌರ, ಉಪನಯನ, ವಿವಾಹ, ಕಾಮ್ಯವ್ರತ ಹಾಗೂ ಕಾಮ್ಯೋಪವಾಸಗಳನ್ನು ಗೃಹಸ್ಥನಾದವನು ವಿಶೇಷವಾಗಿ ತೊರೆಯಬೇಕು.

ಶ್ರೀಮದ್ಭಾಗವತದ ಶ್ರವಣ ಅಧಿಕಮಾಸದಲ್ಲಿ ವಿಶೇಷವಾಗಿ ವಿಹಿತ

ಶ್ರೀಮದ್ಭಾಗವತಂ ಭಕ್ತ್ಯಾ ಶ್ರೋತವ್ಯಂ ಪುರುಷೋತ್ತಮೇ।
ತತ್ಪುಣ್ಯಂ ವಚಸಾ ವಕ್ತುಂ ವಿಧಾತಾಽಪಿ ನ ಶಕ್ನುಯಾತ್ ॥ - ಬೃ.ನಾ. ೨೨/೩೦

ಅಧಿಕಮಾಸದಲ್ಲಿ ಭಕ್ತಿಯಿಂದ ಶ್ರೀಮದ್ಭಾಗವತವನ್ನು ಶ್ರವಣ ಮಾಡಲೇಬೇಕು; ಅದರ ಪುಣ್ಯವನ್ನು ಬ್ರಹ್ಮದೇವರು ಸಹ ವರ್ಣಿಸಲು ಶಕ್ತರಾಗಲಾರರು.

ಅಧಿಕಮಾಸವನ್ನು ಆಚರಿಸದಿರುವುದು ಮಹಾಅನರ್ಥಕ್ಕೆ ಕಾರಣ

ಮಲಮಾಸೋ ಗತಃ ಶೂನ್ಯೋ ಯೇಷಾಂ ದೇವಿ ಪ್ರಮಾದತಃ।
ದಾರಿದ್ರ್ಯಂ ಪುತ್ರಶೋಕಂ ಚ ಪಾಪಪಂಕವಿಗರ್ಹಿತಮ್ ।
ಮರ್ತ್ಯಲೋಕೇ ಭವೇಜ್ಜನ್ಮ ತೇಷಾಂ ದೇವಿ ನ ಸಂಶಯಃ॥ - ಭವಿಷ್ಯತ್ಪುರಾಣ

ಪ್ರಮಾದವಶಾತ್ ಅಧಿಕಮಾಸವನ್ನು ಆಚರಿಸದೇ ಇದ್ದಲ್ಲಿ ಬಡತನ, ಪುತ್ರಶೋಕ ಹಾಗೂ ಪಾಪದ ಕೆಸರಿನಿಂದಾಗಿ ಅಸಹ್ಯವೆನ್ನಿಸುವ ಮನುಷ್ಯಲೋಕದಲ್ಲಿ ಜನ್ಮ ತಪ್ಪದೇ ಒದಗುವವು.

ಮಲಿಮ್ಲುಚಂ ಪ್ರಾಪ್ಯ ನ ಪೂಜಿತೋ ಯೈಃ ಶ್ರೀನಾಥದೇವಃ ಪರಯೇಹ ಭಕ್ತ್ಯಾ।
ತೇಷಾಂ ಕಥಂ ಸ್ಯಾತ್ ತು ಸುಖಂ ಚ ಸಂಪತ್ಪುತ್ರಃ ಸುಹೃತ್ಸ್ವಜನಶ್ಚಾಪಿ ಭಾರ್ಯಾ॥
- ಭವಿಷ್ಯತ್ಪುರಾಣ

ಅಧಿಕಮಾಸ ಬಂದಾಗ ಲಕ್ಷ್ಮೀಪತಿಯಾದ ಶ್ರೀಹರಿಯನ್ನು ಶ್ರೇಷ್ಠಭಕ್ತಿಯಿಂದ ಪೂಜಿಸದವರಿಗೆ ಸುಖ, ಸಂಪತ್ತು, ಪುತ್ರ, ಸ್ನೇಹಿತ, ಬಂಧುಜನರು ಹಾಗೂ ಪತ್ನಿ ಹೇಗೆ ತಾನೇ ಲಭಿಸಿಯಾರು?

ಯ ಏತಸ್ಮಿನ್ ಮಹಾಮೂಢಾ ಜಪದಾನಾದಿವರ್ಜಿತಾಃ ।
ಸತ್ಕರ್ಮಸ್ನಾನರಹಿತಾ ದೇವತೀರ್ಥದ್ವಿಜದ್ವಿಷಃ ॥
ಜಾಯಂತೇ ದುರ್ಭಗಾ ದುಷ್ಟಾಃ ಪರಭಾಗ್ಯೋಪಜೀವಿನಃ ।
ನ ಕದಾಚಿತ್ ಸುಖಂ ತೇಷಾಂ ಸ್ವಪ್ನೇಽಪಿ ಶಶಶೃಂಗವತ್ ॥

-ಬೃ.ನಾ. ೭/೩೦,೩೧

ಅಧಿಕಮಾಸದಲ್ಲಿ ಜಪ, ದಾನಗಳನ್ನು ಮಾಡದ, ಸತ್ಕರ್ಮ, ಸ್ನಾನಗಳನ್ನು ತೊರೆಯುವ, ದೇವ, ತೀರ್ಥ ಹಾಗೂ ಬ್ರಾಹ್ಮಣದ್ವೇಷಿಗಳಾದ ಮಹಾಮೂರ್ಖರು ದುರ್ಲಕ್ಷಣಗಳನ್ನು ಹೊಂದಿದವರು, ಪರರ ಭಾಗ್ಯವನ್ನು ಅವಲಂಬಿಸಿ ಬದುಕುವವರು ಆದ ದುಷ್ಟರಾಗುವರು; ಅವರಿಗೆ ಸ್ವಪ್ನದಲ್ಲೂ ಸುಖವೂ ಮೊಲದ ಕೊಂಬಿನಂತೆ ಸರ್ವಥಾ ಇಲ್ಲವಾಗುವುದು.

ತಿರಸ್ಕುರ್ವಂತಿ ಯೇ ಮೂಢಾ ಮಲಮಾಸಂ ಮಮ ಪ್ರಿಯಮ್ ।
ನಾಚರಿಷ್ಯಂತಿ ಯೇ ಧರ್ಮಂ ತೇ ಸದಾ ನಿರಯಾಲಯಾಃ ॥

- ಬೃ.ನಾ. ೭/೩೨

ಶ್ರೀಹರಿಗೆ ವಿಶೇಷವಾಗಿ ಪ್ರಿಯವಾದ ಮಲಮಾಸವನ್ನು ಆಚರಿಸದವರು ಮೂಢರು, ನರಕವಾಸಿಗಳೂ ಆಗುವರು.

ಪುರುಷೋತ್ತಮಮಾಸಾದ್ಯ ವರ್ಷೇ ವರ್ಷೇ ತೃತೀಯಕೇ ।
ನಾಚರಿಷ್ಯಂತಿ ಧರ್ಮಂ ಯೇ ಕುಂಭೀಪಾಕೇ ಪತಂತಿ ತೇ ॥
ಇಹ ಲೋಕೇ ಮಹದ್ದುಃಖಂ ಪುತ್ರಪೌತ್ರಕಲತ್ರಜಮ್ ।
ಪ್ರಾಪ್ನುವಂತಿ ಮಹಾಮೂಢಾ ದುಃಖದಾವಾನಲಸ್ಥಿತಾಃ ॥

-ಬೃ.ನಾ. ೭/೩೩-೩೪

ಪ್ರತಿ ಮೂರು ವರ್ಷಕೊಮ್ಮೆ ಬರುವ ಪುರುಷೋತ್ತಮಮಾಸವನ್ನು ಆಚರಿಸದವರು ಈ ಲೋಕದಲ್ಲಿ ಮಕ್ಕಳು, ಮೊಮ್ಮಕ್ಕಳು ಹಾಗೂ ಪತ್ನೀನಿಮಿತ್ತವಾದ ದುಃಖವನ್ನು ಹೊಂದುವರು. ದುಃಖವೆಂಬ ಕಾಡ್ಗಿಚ್ಚಿನಲ್ಲಿ ಬೇಯುವರು ಹಾಗೂ ಮಹಾಮೂರ್ಖರು ಎನ್ನಿಸುವರು.

ಸಂಪ್ರಾಪ್ತೇ ಮಲಮಾಸೇ ತು ಸ್ವಶಕ್ತ್ಯಾ ನ ಕರೋತಿ ಯಃ ।
ದಾನಂ ಹೋಮಂ ವ್ರತಂ ಸ್ನಾನಂ ತಪೋ ಬ್ರಾಹ್ಮಣಪೂಜನಮ್ ॥
ತೇನ ಪಾಪೇನ ದೇಹೇನ ಸ ಯಾತಿ ನರಕಂ ಚಿರಮ್ ॥ -ಪ.ಪು.೨/೩-೪

ಅಧಿಕಮಾಸ ಬಂದಾಗ ತನ್ನ ಶಕ್ತಿಯಿದ್ದಷ್ಟು ದಾನ, ಹೋಮ, ವ್ರತ, ಸ್ನಾನ, ತಪಸ್ಸು, ಬ್ರಾಹ್ಮಣಪೂಜೆಗಳನ್ನು ಯಾವನು ಮಾಡುವುದಿಲ್ಲವೋ ಅವನು ಬಹುಕಾಲ ನರಕದಲ್ಲಿ ನೆಲೆಸುವನು.

ಅಧಿಕಮಾಸವನ್ನು ಅವಮಾನಿಸುವುದು ಸಹ ಮಹಾಪಾತಕ

ಪುರುಷೋತ್ತಮಮಾಸಸ್ಯ ಯತ್ತ್ವಯಾಽನಾದರಃ ಕೃತಃ।
ಸರ್ವಥಾ ತತ್ಫಲಂ ಭಾವಿ ಇಹ ವಾಽಪರಜನ್ಮನಿ ॥ - ಬೃ.ನಾ. ೧೦/೩೩

ಅಧಿಕಮಾಸವನ್ನು ನಿಂದಿಸಿದರೆ ಅದರ ದುಷ್ಫಲ ಈ ಜನ್ಮದಲ್ಲಿ ಹಾಗೂ ಮುಂದಿನ ಜನ್ಮದಲ್ಲಿ ತಪ್ಪದೇ ಕಾಡುವುದು.

ಯೋ ವೈ ನಿಂದತಿ ತಂ ಮಾಸಂ ಸ ಯಾತಿ ಘೋರರೌರವಮ್।
ವಿಪರೀತಂ ಭವೇತ್ ತಸ್ಯ ನ ಕದಾಽಪ್ಯನ್ಯಥಾ ಭವೇತ್ ॥ - ಬೃ.ನಾ. ೧೧/೪೧

ಅಧಿಕಮಾಸವನ್ನು ನಿಂದಿಸುವವನು ಘೋರರೌರವನರಕವನ್ನು ಹೊಂದುವನು. ಅವನಿಗೆ ದುಷ್ಫಲ ಲಭಿಸುವುದು. ಈ ಮಾತು ಎಂದೂ ಸುಳ್ಳಲ್ಲ.

ಅಧಿಕಮಾಸದ ವಿಶೇಷ ಪರ್ವಕಾಲಗಳು

ವೈಧೃತಿಶ್ಚ ವ್ಯತೀಪಾತೋ ರಾಕಾ ಚೈವ ಕುಹೂಸ್ತಥಾ।
ದ್ವಾದಶೀ ಪಂಚಪರ್ವಾಣಿ ಪರಂಶ್ರೇಷ್ಠಾನ್ಯನುಕ್ರಮಾತ್ ॥ - ಪ. ಪು. ೧೨/೪

ವೈಧೃತಿ, ವ್ಯತೀಪಾತ (ಎಂಬ ಎರಡು ಯೋಗಗಳು), ಹುಣ್ಣಿಮೆ, ಅಮಾವಾಸ್ಯೆ ಹಾಗೂ ದ್ವಾದಶೀ ಈ ಐದು ಅನುಕ್ರಮವಾಗಿ ಹೆಚ್ಚು ಹೆಚ್ಚು ಮಹತ್ತ್ವದ ಅಧಿಕಮಾಸದ ಮಹಾ-ಪರ್ವದಿವಸಗಳು(ಉಭಯಪಕ್ಷದ ದ್ವಾದಶಿಗಳು ಮಹಾವಿಶೇಷಪರ್ವಕಾಲಗಳು ಎಂದರ್ಥ).

ಅಧಿಕಮಾಸದಲ್ಲಿ ಉಪವಾಸದ ಮಹತ್ತ್ವ

ದ್ವಾತ್ರಿಂಶದ್ಭಿರ್ಗತೈರ್ಮಾಸೈರ್ದಿನೈರ್ಷೋಡಶಭಿಸ್ತಥಾ।
ಘಟಿಕಾನಾಂ ಚತುಷ್ಕೇಣ ಪತತ್ಯಧಿಕಮಾಸಕಃ ॥
ಪಂಚಮೇ ಪಂಚಮೇ ವರ್ಷೇ ದ್ವೌ ಮಾಸಾವಧಿಮಾಸಕೌ।
ತೇಷಾಂ ಕಾಲಾತಿರೇಕೇಣ ಗ್ರಹಾಣಾಮತಿಚಾರತಃ ॥
ಏಕಮಪ್ಯುಪವಾಸಂ ಯಃ ಕರೋತ್ಯಸ್ಮಿನ್ ತಪೋನಿಧೇ।
ಅಸಾವನಂತಪಾಪಾನಿ ಭಸ್ಮೀಕೃತ್ಯ ದ್ವಿಜೋತ್ತಮ ॥ -ಸ್ಮೃತಿ

ಸರಾಸರಿ ಲೆಕ್ಕದಲ್ಲಿ ಮೂವತ್ತೆರಡು ತಿಂಗಳು, ಹದಿನಾರು ದಿನಗಳು ಹಾಗೂ ನಾಲ್ಕು ಘಳಿಗೆಯೊಮ್ಮೆ ಅಧಿಕಮಾಸವು ಬರುತ್ತದೆ. ಪ್ರತಿ ಐದುವರ್ಷಗಳಲ್ಲಿ ಎರಡು

ಅಧಿಕಮಾಸಗಳಾಗುತ್ತವೆ. ಇಂತಹ ಪವಿತ್ರವಾದ ಅಧಿಕಮಾಸದಲ್ಲಿ ಒಂದುದಿನವಾದರೂ ಉಪವಾಸ ಮಾಡುವವನು ಅನಂತಪಾಪಗಳಿಂದ ಬಿಡುಗಡೆ ಹೊಂದುವನು.

ಏಕಭಕ್ತೇನ ನಕ್ತೇನ ತಥೈವಾಯಾಚಿತೇನ ವಾ ।
ಉಪವಾಸೇನ ಕುರ್ವೀತ ಮಲಮಾಸವ್ರತಂ ನರಃ ॥ -ಪ.ಪು. ೨/೫

ಅಧಿಕಮಾಸದಲ್ಲಿ ಏಕಭುಕ್ತ (ಒಂದೇ ಊಟ), ನಕ್ತಭೋಜನ (ರಾತ್ರಿಯಲ್ಲಿ ಮಾತ್ರ ಭೋಜನ) ಅಥವಾ ಉಪವಾಸವ್ರತಗಳನ್ನು ಆಚರಿಸಬೇಕು.

ಉಪವಾಸಸ್ಯ ನಕ್ತಸ್ಯ ಏಕಭುಕ್ತಸ್ಯ ಭಾಮಿನಿ ।
ಏಕಸ್ಯ ನಿಶ್ಚಯಂ ಕೃತ್ವಾ ತತೋ ವಿಪ್ರಾನ್ ನಿಮಂತ್ರಯೇತ್ ॥ - ಭವಿಷ್ಯತ್ಪುರಾಣ

ಉಪವಾಸವ್ರತ, ನಕ್ತವ್ರತ ಅಥವಾ ಏಕಭುಕ್ತವ್ರತಗಳಲ್ಲಿ ಯಾವುದಾದರೂ ಒಂದನ್ನು ಆಚರಿಸಲು ಸಂಕಲ್ಪ ಮಾಡಿ ಯೋಗ್ಯಬ್ರಾಹ್ಮಣರನ್ನು ಆಹ್ವಾನಿಸಬೇಕು.

ಪ್ರತಿಪತ್ತಿಥಿಮಾರಭ್ಯ ಅಮಾವಸ್ಯಾವಧಿರ್ಭವೇತ್ ।
ಉಪವಾಸೇನ ನಕ್ತೇನ ಹ್ಯೇಕಭುಕ್ತೇನ ವಾ ನೃಪ ॥
ಏಕಸ್ಯ ನಿಯಮಂ ಕೃತ್ವಾ ದಾನಂ ದದ್ಯಾದ್ದಿನೇದಿನೇ ।
ದಾನಂ ಕುರ್ಯಾದಪೂಪಾನಾಂ ದಕ್ಷಿಣಾವ್ರತಸಂಯುತಮ್ ॥
ಅಂತೇ ಚೋದ್ಯಾಪನಂ ಕುರ್ಯಾತ್ ಸಂಪೂಜ್ಯ ಮಧುಸೂದನಮ್ ।
ಉಪೋಷ್ಯ ಚ ಚತುರ್ದಶ್ಯಾಂ ಸರ್ವಪಾಪೈಃ ಪ್ರಮುಚ್ಯತೇ ॥ - ಭ.ಪು. ೪-೬

ಅಧಿಕಮಾಸದಲ್ಲಿ ಶುಕ್ಲಪಕ್ಷದ ಪಾಡ್ಯದಿಂದ ಅಮಾವಾಸ್ಯೆಯವರೆಗೆ ಉಪವಾಸ, ನಕ್ತವ್ರತ ಅಥವಾ ಏಕಭುಕ್ತವ್ರತವನ್ನು ಸಂಕಲ್ಪಿಸಿ ಪ್ರತಿನಿತ್ಯ ದಾನನೀಡಬೇಕು. ವಿಶೇಷವಾಗಿ ಅಪೂಪಗಳನ್ನು ದಕ್ಷಿಣೆಸಮೇತ ದಾನಮಾಡಬೇಕು. ಕೊನೆಯಲ್ಲಿ ಉದ್ಯಾಪನೆ ಮಾಡಿ ಶ್ರೀಹರಿಯನ್ನು ಪೂಜಿಸಿದಲ್ಲಿ ಸಕಲಪಾಪಗಳು ಪರಿಹಾರವಾಗುವವು.

ದಾನೇ ವಾಽಪಿ ವ್ರತೇ ವಾಽಪಿ ಯಸ್ಯ ಶಕ್ತಿರ್ನ ವಿದ್ಯತೇ ॥
ಶರೀರಶೋಷಣಂ ತೇನ ಕರ್ತವ್ಯಂ ತೀರ್ಥಸೇವನಮ್ ॥ -ಪ.ಪು.೨/೬

ದಾನ ಮಾಡಲು, ವ್ರತವನ್ನಾಚರಿಸಲು ಶಕ್ತಿ ಸಾಲದವನು ಉಪವಾಸವ್ರತಗಳಿಂದ ದೇಹದಂಡನೆ ಮಾಡಬೇಕು; ತೀರ್ಥಕ್ಷೇತ್ರಗಳಲ್ಲಿ ನೆಲೆಸಬೇಕು. ಶಾಸ್ತ್ರಶ್ರವಣವನ್ನಂತೂ ತಪ್ಪದೇ ಮಾಡಲೇಬೇಕು.

ಸರ್ವವ್ಯಾಪೀ ಯಥಾ ವಿಷ್ಣುಃ ಸರ್ವಭೂತದಯಾಕರಃ ।
ಮಲಿಮ್ಲುಚೇ ತಥಾ ದಾನಂ ಲೋಕದ್ವಯಸುಖಾವಹಮ್ ॥ -ಪ.ಪು.೨/೭

ವಿಷ್ಣುವು ಸರ್ವತ್ರವ್ಯಾಪ್ತನೂ, ಸರ್ವಭೂತಹಿತೈಷಿಯೂ ಆದವನು; ಅದರಂತೆ ಅಧಿಕಮಾಸದಲ್ಲಿ ಮಾಡುವ ದಾನ ಇಹಲೋಕ ಹಾಗೂ ಪರಲೋಕಗಳ ಸುಖಕ್ಕೆ ಕಾರಣವಾಗುವವು.

ಅಧಿಮಾಸೇ ನರೋ ನಕ್ತಂ ಯೋ ಭುಂಕ್ತೇ ಸ ನರಾಧಿಪ ।
ಸರ್ವಾನ್ ಕಾಮಾನವಾಪ್ನೋತಿ ನರೋ ನೈವಾತ್ರ ಸಂಶಯಃ ॥

- ಬೃ.ನಾ.೨೬/೧೬

ಅಧಿಕಮಾಸದಲ್ಲಿ ನಕ್ತ(ರಾತ್ರಿಮಾತ್ರ)ಭೋಜನ ವ್ರತವನ್ನು ಮಾಡುವುದು ಸಹ ವಿಹಿತ. ಇದನ್ನು ಆಚರಿಸುವವನು ಸಕಲ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವನು; ಇದು ನಿಶ್ಚಿತ.

ಪೂರ್ವಾಹ್ನೇ ಭುಂಜತೇ ದೇವಾ ಮಧ್ಯಾಹ್ನೇ ಮುನಯಸ್ತಥಾ ।
ಅಪರಾಹ್ನೇ ಪಿತೃಗಣಾಃ ಸ್ವಾತ್ಮಾರ್ಥಸ್ತು ಚತುರ್ಥಕಃ ॥
ಸರ್ವವೇಲಾಮತಿಕ್ರಮ್ಯ ಯಸ್ತು ಭುಂಕ್ತೇ ನರಾಧಿಪ ।
ಬ್ರಹ್ಮಹತ್ಯಾದಿ ಪಾಪಾನಿ ನಾಶಂ ಯಾಂತಿ ನ ಸಂಶಯಃ ॥
ನಕ್ತಭೋಜೀ ಮಹೀಪಾಲ ಸರ್ವಪುಣ್ಯಾಧಿಕೋ ಭವೇತ್ ।
ದಿನೇ ದಿನೇಽಶ್ವಮೇಧಸ್ಯ ಫಲಂ ಪ್ರಾಪ್ನೋತಿ ಮಾನವಃ ॥

- ಬೃ.ನಾ.೨೬/೧೭-೧೯

ಪೂರ್ವಾಹ್ಣ ದೇವತೆಗಳ ಭೋಜನಕಾಲ; ಮಧ್ಯಾಹ್ನ ಮುನಿಗಳದು; ಅಪರಾಹ್ನ ಪಿತೃಗಣಗಳದ್ದು. ನಾಲ್ಕನೆಯ ಭಾಗ ಮನುಷ್ಯನದು. ಅದನ್ನೂ ಮೀರಿ ರಾತ್ರಿಕಾಲದಲ್ಲಿ ಭೋಜನ ಮಾಡುವುದು ಅಧಿಕಮಾಸದಲ್ಲಿ ವಿಶೇಷಪುಣ್ಯಕರ. ಬ್ರಹ್ಮಹತ್ಯಾದಿ ಪಾಪಗಳನ್ನು ಇದು ಪರಿಹರಿಸುವುದು; ದಿನದಿನದಲ್ಲೂ ಅಶ್ವಮೇಧಯಾಗದ ಫಲವು ಲಭಿಸುವುದು.

ಏಕಾನ್ನವ್ರತ

ಏಕಾನ್ನೇನ ನರೋ ಯಸ್ತು ಮಲಮಾಸಂ ನಿಷೇವತೇ ।
ಚತುರ್ಭುಜೋ ನರೋ ಭೂತ್ವಾ ಸ ಯಾತಿ ಪರಮಾಂ ಗತಿಮ್ ॥
ಏಕಾನ್ನಾನ್ನಾಪರಂ ಕಿಂಚಿತ್ ಪವಿತ್ರಮಿಹ ವಿದ್ಯತೇ ।
ಏಕಾನ್ನಾನ್ಮುನಯಃ ಸಿದ್ಧಾಃ ಪರಂ ನಿರ್ವಾಣಮಾಗತಾಃ ॥

- ಬೃ.ನಾ. ೨೬/೧೪,೧೫

ಒಂದುಬಾರಿ ಮಾತ್ರ ಉಂಡ ಊಟ, ಕುಡಿದ ನೀರು ಎಂಬ ಏಕಾನ್ನಭೋಜನದ ವ್ರತ ಅಧಿಕಮಾಸದಲ್ಲಿ ವಿಶೇಷವಾಗಿ ವಿಹಿತ. ಇದನ್ನು ಆಚರಿಸುವವನು ಚತುರ್ಭುಜದಿಂದ ಕೂಡಿದ ಸಾರೂಪ್ಯಮುಕ್ತಿಯನ್ನು ಪಡೆಯುವನು. ಈ ವ್ರತಕ್ಕೆ ಸಮನಾದ ಬೇರೊಂದು ಪವಿತ್ರವ್ರತ ಇಲ್ಲ. ಇದರ ಅನುಷ್ಠಾನದಿಂದ ಮುನಿಗಳು ಶ್ರೇಷ್ಠಸಿದ್ಧಿಯನ್ನು, ಮುಂದೆ ಮುಕ್ತಿಯನ್ನೂ ಪಡೆದಿರುವರು.

ದಶಮೀಂ ದ್ವಾದಶೀಂ ಚೈವ ಏಕಭುಕ್ತಂ ಚ ಕಾರಯೇತ್ ।
ಪ್ರೀತಯೇ ದೇವದೇವಸ್ಯ ನರಃ ಸ್ವರ್ಗಮವಾಪ್ನುಯಾತ್ ॥ - ಬೃ.ನಾ.೨೬/೨೪

ದಶಮಿ ಹಾಗೂ ದ್ವಾದಶಿಗಳಂದು ಒಂದು ಬಾರಿ ಮಾತ್ರ ಭೋಜನ ಎಂಬುದು ಏಕಾದಶೀ ಉಪವಾಸಕ್ಕೆ ಅಗತ್ಯವಾದ ವ್ರತ. ಅಧಿಕಮಾಸದಲ್ಲಿ ಸಹ ಈ ನಿಯಮವನ್ನು ಶ್ರೀಹರಿಪ್ರೀತಿಗೆಂದು ಪಾಲಿಸುವ ಮನುಷ್ಯನು ಸ್ವರ್ಗವನ್ನು ಪಡೆಯುವನು.

ಒಂದುದಿನವಾದರೂ ಉಪವಾಸ ಮಾಡಲೇಬೇಕು

ಉಪವಾಸವ್ರತಂ ಕುರ್ಯಾತ್ ಸರ್ವಕಾಮಫಲಾಪ್ತಯೇ ।
ಮಾಸೋಪವಾಸಂ ವಾ ಕುರ್ಯಾತ್ ಪಕ್ಷೇ ತು ಹ್ಯುಪವಾಸಕಃ ॥
ಷಡ್ರಾತ್ರಂ ವಾ ತ್ರಿರಾತ್ರಂ ವಾ ವ್ರತಮೇಕತರಂ ತು ವಾ ।
ಏಕಂ ವಾಽಪ್ಯುಪವಾಸಂ ತು ಶಕ್ತಿತಸ್ತು ಸಮಾಚರೇತ್ ॥
ನರೋ ವಾ ಯದಿ ವಾ ನಾರೀ ಕುಮಾರೀ ವಾ ಕುಮಾರಕಃ ।
ಜ್ವರವಾನಥ ವೃದ್ಧೋ ವಾ ವಿಧವಾ ತು ವಿಶೇಷತಃ ॥
ಏಕೇನಾಪ್ಯುಪವಾಸೇನ ಕೃತಕೃತ್ಯೋ ಭವೇದಿಹ ॥ -ಪ.ಪು. ೯/೧೦-೧೨

ಸಕಲಕಾಮನೆಗಳ ಸಿದ್ಧಿಗಾಗಿ ಉಪವಾಸವ್ರತವನ್ನು ಅಧಿಕಮಾಸದಲ್ಲಿ ಮಾಡಲೇಬೇಕು. ಪೂರ್ತಿತಿಂಗಳು ಉಪವಾಸ, ಒಂದು ಪಕ್ಷದ ಉಪವಾಸ, ಆರು ದಿನ, ಮೂರು ದಿನಗಳ ಉಪವಾಸ ಅಥವಾ ಒಂದು ದಿನವಾದರೂ ಉಪವಾಸವನ್ನು ಯಥಾಶಕ್ತಿ ಆಚರಿಸಲೇಬೇಕು. ಪುರುಷರು, ಸ್ತ್ರೀಯರು, ಕನ್ಯೆಯರು, ಕುಮಾರರು, ರೋಗಿಗಳು, ವೃದ್ಧರು ಸಹ ಒಂದು ದಿನವಾದರೂ ಉಪವಾಸವನ್ನು ಮಾಡಲೇಬೇಕು. ವಿಧವೆಯರಿಗಂತೂ ಇದು ವಿಶೇಷ ಕರ್ತವ್ಯ.

ಮಾಸಪೂರ್ತಿ ಉದ್ದನ್ನು ತೊರೆಯುವುದು ಸಹ ವ್ರತ

ತಸ್ಮಿನ್ ವಿವರ್ಜಯೇನ್ಮಾಷಮಧಿಮಾಸೇ ಹರಿಪ್ರಿಯೇ ।
ಸರ್ವಸ್ಮಾನ್ಮುಚ್ಯತೇ ಪಾಪಾದ್ವಿಷ್ಣುಲೋಕಂ ಸ ಗಚ್ಛತಿ ॥ - ಬೃ.ನಾ.೨೬/೨೦

ಶ್ರೀಹರಿಗೆ ಪ್ರಿಯವಾದ ಅಧಿಕಮಾಸದಲ್ಲಿ ಒಂದು ತಿಂಗಳುಪೂರ್ತಿ ಉದ್ದನ್ನು ಉಪಯೋಗಿಸದಿರುವುದು ಮತ್ತೊಂದು ವ್ರತ. ಇದರಿಂದ ಸಕಲಪಾಪಗಳು ಪರಿಹಾರವಾಗಿ ವಿಷ್ಣುಲೋಕವು ಲಭಿಸುವುದು.

ಅಧಿಕಮಾಸದಲ್ಲಿ ಗೋಸೇವೆ ಹಾಗೂ ಗೋದಾನಗಳ ಮಹತ್ತ್ವ

ಯೋಗಂ ತು ವಾಂಛಂತಿ ಸ್ವರ್ಗೇ ಗೋಪೂಜಾಂ ಸ ಕರೋತು ವೈ ।
ಅಧಿಕಮಾಸೇ ವಿಶೇಷೇಣ ಸುಭಕ್ತ್ಯಾ ಯವಸಾದಿನಾ ॥

ಪ್ರದಕ್ಷಿಣೀಕೃತಾ ಗಾವೋ ಯೇನ ಮಾಸೇ ಮಲೀಮ್ಲುಚೇ ।
ಪ್ರದಕ್ಷಿಣೀಕೃತಾ ತೇನ ಸಶೈಲಾ ಸವನಾऽವನಿಃ ॥ -ಪ.ಪು.೨/೩೩-೩೪

ಸ್ವರ್ಗಪ್ರಾಪ್ತಿಯನ್ನು ಬಯಸುವವನು ಅಧಿಕಮಾಸದಲ್ಲಿ ಹುಲ್ಲು, ಧಾನ್ಯಗಳನ್ನು ನೀಡುವ ಮೂಲಕ ವಿಶೇಷವಾಗಿ ಗೋಸೇವೆ ಮಾಡಬೇಕು. ಅಧಿಕಮಾಸದಲ್ಲಿ ಗೋವು-ಗಳಿಗೆ ಮಾಡುವ ಪ್ರದಕ್ಷಿಣೆಯೂ ಇಡೀ ಭೂಮಿಯನ್ನು ಪ್ರದಕ್ಷಿಣೆ ಮಾಡಿದ ಫಲವನ್ನು ನೀಡುವುದು.

ಸ್ಪೃಷ್ಟಾಶ್ಚ ಗಾವಃ ಶಮಯಂತಿ ಪಾಪಂ ದತ್ತಾಶ್ಚ ಗಾವಸ್ತ್ರಿದಿವಂ ನಯಂತಿ ।
ಸಂರಕ್ಷಿತಾಶ್ಚ ಉಪನಯಂತಿ ವಿತ್ತಂ ಗೋಭಿರ್ನ ತುಲ್ಯಂ ಧನಮಸ್ತಿ ಕಿಂಚಿತ್ ॥
-ಪ.ಪು.೨/೩೮

ಗೋವುಗಳ ಸ್ಪರ್ಶ ಪಾಪನಾಶಕ; ಗೋದಾನ ಸ್ವರ್ಗಪ್ರಾಪ್ತಕ; ಗೋವುಗಳ ಸಂರಕ್ಷಣೆ ಸಂಪತ್ಕರ; ಗೋಧನಕ್ಕಿಂತ ಮಿಗಿಲಾದ ಮತ್ತೊಂದು ಸಂಪತ್ತು ಮತ್ತೊಂದಿಲ್ಲ.

ತೃಣಾನಿ ಶುಷ್ಕಾನಿ ವನೇ ಚರಿತ್ವಾ ಪೀತ್ವಾ ಸುತೋಯಾನ್ಯಮೃತಂ ಪ್ರವಂತಿ ।
ಯದ್ಗೋಮಯಾದ್ಯಾಶ್ಚ ಪುನಂತಿ ಲೋಕಾನ್ ಗೋಭಿರ್ನ ತುಲ್ಯಂ ಭುವನೇಷು ದೇವಿ ॥
-ಪ.ಪು.೨/೪೦

ಕಾಡಿನಲ್ಲಿ ಒಣಗಿದ ಹುಲ್ಲನ್ನು ತಿಂದು, ನೀರನ್ನು ಕುಡಿದು ಗೋವುಗಳು ಅಮೃತವನ್ನು ನೀಡುವವು. ಗೋಮಯವು ಸಹ ಲೋಕಗಳನ್ನು ಪಾವನಗೊಳಿಸುವವು; ಆದ್ದರಿಂದ ಗೋವುಗಳಿಗೆ ಸಮನಾದದ್ದು ಲೋಕದಲ್ಲಿ ಬೇರಾವುದೂ ಇಲ್ಲ.

ವಿಧಿವತ್ ತು ಯದಾ ದತ್ತಾ ಪಾತ್ರೇ ಧೇನುಃ ಸದಕ್ಷಿಣಾ ।
ತದಾ ತಾರಯತೇ ಜಂತೂನ್ ಕುಲಾನಾಮಯುತೈಃ ಶತೈಃ ॥ -ಪ.ಪು.೩/೮

ವಿಧ್ಯುಕ್ತವಾಗಿ ಸತ್ಪಾತ್ರರಿಗೆ ನೀಡುವ ಗೋದಾನವು ದಾನನೀಡುವವನನ್ನು ಹಾಗೂ ಅವನ ಸಾವಿರಾರು ಕುಲದವರನ್ನು ಉದ್ಧರಿಸುವುದು.

ಅಪಾತ್ರರಿಗೆ ಗೋದಾನ ನಿಷಿದ್ಧ

ಅಪಾತ್ರೇ ಸಾ ತು ಗೌರ್ದತ್ತಾ ದಾತಾರಂ ನರಕಂ ನಯೇತ್ ।
ಕುಲೈಕವಿಂಶತಿಯುತಂ ಗ್ರಹೀತಾರಂ ತು ಪಾತಯೇತ್ ॥
ನಾಪಾತ್ರೇ ವಿದುಷಾ ದೇಯಾ ಯ ಆತ್ಮನಃ ಶುಭಮಿಚ್ಛತಾ ।
ಗೀತಾ ಧೇನುಃ ಹಿರಣ್ಯಂ ಚ ಪಾತ್ರೇ ದತ್ತಮನಂತಕಮ್ ॥ - ಪ.ಪು.೩/೯-೧೦

ಅಪಾತ್ರರಿಗೆ ಗೋದಾನ ನೀಡುವವನು ತನ್ನ ಇಪ್ಪತ್ತೊಂದು ಕುಲದವರೊಂದಿಗೆ ನರಕಕ್ಕೆ ಹೋಗುವನು; ಅರ್ಹತೆ ಇಲ್ಲದೆ ದಾನ ಸ್ವೀಕರಿಸಿದವನು ಸಹ ಅನರ್ಥಕ್ಕೆ ಗುರಿಯಾಗುವನು. ಆದ್ದರಿಂದ ತನಗೆ ಒಳಿತನ್ನು ಬಯಸುವವನು ಅಪಾತ್ರರಿಗೆ ದಾನ ನೀಡಕೂಡದು. ಗೀತಾ, ಗೋವು ಹಾಗೂ ಚಿನ್ನ ಇವು ಸತ್ಪಾತ್ರರಿಗೆ ದಾನನೀಡಿದಾಗ ಅನಂತವೆನ್ನಿಸುವವು.

ಗೋದಾನ ಮಂತ್ರ

ಯಜ್ಞಸಾಧನಭೂತಾ ಯಾ ವಿಶ್ವಸ್ಯಾಘೌಘನಾಶಿನೀ ।
ವಿಶ್ವರೂಪಧರೋ ದೇವಃ ಪ್ರೀಯತಾಮನಯಾ ಗವಾ ॥
ಜಲಶಾಯೀ ಬ್ರಹ್ಮಪಿತಾ ಪದ್ಮನಾಭಃ ಸನಾತನಃ ।
ಅನೇನ ಭೋಗಶಯನಃ ಪ್ರೀಯತಾಂ ಪರಮಃ ಪ್ರಭುಃ ॥ -ಪ.ಪು.೩/೩೮-೩೯

ವಿಶ್ವರೂಪಧರನಾದ ಶ್ರೀಹರಿಯು ಯಜ್ಞಕ್ಕೆ ಸಾಧನಭೂತವೂ, ಲೋಕದ ಪಾಪರಾಶಿಯನ್ನು ಪರಿಹರಿಸುವಂತಹುದೂ ಆದ ಈ ಗೋದಾನದಿಂದ ಪ್ರೀತನಾಗಲಿ.

ಸಮುದ್ರಶಾಯಿಯೂ, ಬ್ರಹ್ಮಜನಕನೂ, ಪದ್ಮನಾಭನೂ, ನಾಗಶಯನನೂ, ಸರ್ವೋತ್ತಮನೂ ಆದ ಪ್ರಭು ಶ್ರೀಹರಿಯು ಈ ಗೋದಾನದಿಂದ ಪ್ರೀತನಾಗಲಿ.

ಅಧಿಕಮಾಸದಲ್ಲಿ ಸ್ನಾನದ ಮಹತ್ತ್ವ

ಮಲಮಾಸೇ ಸಮಾಯಾತೇ ಯತ್ರ ಕ್ವಾಪಿ ಜಲೇಽಮಲೇ ।
ಸ್ನಾತ್ವಾ ವ್ಯಾಸಂ ಸಮಭ್ಯರ್ಚ್ಯ ಪುರುಷೋತ್ತಮಬುದ್ಧಿನಾ ॥ -ಪ.ಪು. ೫/೨೨

ಅಧಿಕಮಾಸ ಬಂದಾಗ ವೇದವ್ಯಾಸರನ್ನೇ ಪುರುಷೋತ್ತಮನಾದ ಶ್ರೀಹರಿ ಎಂದು ಧ್ಯಾನಿಸಿ ಯಾವ ಜಲದಲ್ಲಿ ಸ್ನಾನ ಮಾಡಿದರೂ ವಿಶೇಷ ಪುಣ್ಯ ಲಭಿಸುವುದು.

ಯತ್ಪುರಾ ನರನಾರೀಭಿಃ ತ್ರಿವರ್ಣೈರ್ಹ್ಯಘಂ ಕೃತಮ್ ।
ಮಲಮಾಸೇ ಸಮಾಯತೇ ಕಂಪತ್ಯಶ್ವತ್ಥಪರ್ಣವತ್ ॥
ಸಪ್ತಜನ್ಮಾರ್ಜಿತಂ ಪಾಪಂ ಸ್ನಾನೇನೈಕೇನ ಗಚ್ಛತಿ ।
ದಶಜನ್ಮಾರ್ಜಿತಂ ಪಾಪಂ ಪರ್ವಣಿ ಸ್ನಾನತೋ ವ್ರಜೇತ್ ॥
ಶತಜನ್ಮೋತ್ಥಿತಂ ಪಾಪಂ ಮಾಸಾರ್ಧೇನೈವ ಗಚ್ಛತಿ ।
ಜನ್ಮಾಂತರಸಹಸ್ರೈಸ್ತು ಯದಘಂ ಸಮುಪಾರ್ಜಿತಮ್ ।
ವಿಧಿನಾ ಸ್ನಾನಮಾತ್ರೇಣ ಮಾಸೇನ ವಿಲಯಂ ವ್ರಜೇತ್ ॥ -ಪ.ಪು.೭/೨೨-೨೫

ತ್ರಿವರ್ಣದ ಸ್ತ್ರೀಪುರುಷರುಗಳಿಂದ ಮಾಡಲ್ಪಟ್ಟ ಪಾಪಗಳೆಲ್ಲ ಅಧಿಕಮಾಸದ ಸ್ನಾನಕ್ಕೆ ಅಶ್ವತ್ಥದ ಎಲೆಯಂತೆ ಕಂಪಿಸುವವು. ಏಳು ಜನ್ಮಗಳಿಂದ ಒದಗಿದ ಪಾಪ ಒಂದೇ

ಸ್ನಾನದಿಂದ ಪರಿಹಾರವಾಗುವುದು. ಹತ್ತು ಜನ್ಮಗಳ ಪಾಪ ಪರ್ವಕಾಲದ ಸ್ನಾನದಿಂದಲೂ, ನೂರು ಜನ್ಮಗಳ ಪಾಪ ಪಕ್ಷವೊಂದರ ಸ್ನಾನದಿಂದಲೂ, ಸಾವಿರಾರು ಜನ್ಮಗಳ ಪಾಪ ಒಂದು ತಿಂಗಳ ಸ್ನಾನದಿಂದಲೂ ಅಧಿಕಮಾಸದಲ್ಲಿ ಪರಿಹಾರವಾಗುವವು.

ಮೌನವ್ರತದ ಫಲ

ಸ್ನಾನೇನ ಪ್ರಾಪ್ಯತೇ ತೇಜೋ ಜುಹ್ವತಃ ಶ್ರಿಯಮುತ್ತಮಾಮ್ ।
ಭುಂಜಾನೋ ಲಭತೇ ಚಾಯುಸ್ತಸ್ಮಾತ್ ಮೌನಂ ಸಮಾಚರೇತ್॥ -ಪ.ಪು.

ಸ್ನಾನದಿಂದ ತೇಜಸ್ಸು ಲಭಿಸುತ್ತದೆ. ಹೋಮದಿಂದ ಉತ್ತಮ ಸಂಪತ್ತು ದೊರೆಯುತ್ತದೆ. ಮೌನಭೋಜನದಿಂದ ಆಯುಷ್ಯ ಹೆಚ್ಚುತ್ತದೆ. ಆದ್ದರಿಂದ ಸ್ನಾನ, ಹೋಮ ಹಾಗೂ ಭೋಜನ ಸಮಯದಲ್ಲಿ ಮೌನವ್ರತವನ್ನು ಆಚರಿಸಬೇಕು.

ಸ್ನಾನೇನ ವರುಣಸ್ತೇಜೋಽಜುಹ್ವತೋಽಗ್ನಿಃ ಶ್ರಿಯಂ ಹರೇತ್ ।
ಭುಂಜಾನೋ ಮೃತ್ಯುರಾಯುಷ್ಯಂ ತಸ್ಮಾನ್ಮೌನಂ ಸಮಾಚರೇತ್ ॥ -ಪ.ಪು.

ಸ್ನಾನ ಮಾಡದಿದ್ದಲ್ಲಿ ವರುಣನು ತೇಜಸ್ಸನ್ನು ಅಪಹರಿಸುವನು. ಹೋಮ ಮಾಡದಿದ್ದಲ್ಲಿ ಅಗ್ನಿಯು ಸಂಪತ್ತನ್ನು ಕಸಿಯುವನು. ಮೌನವನ್ನಾಚರಿಸದಿದ್ದಲ್ಲಿ ಮೃತ್ಯುವು ಆಯುಷ್ಯವನ್ನು ಕಳೆಯುವುದು. ಆದ್ದರಿಂದ ಸ್ನಾನ ಹೋಮಾದಿಗಳನ್ನು ಮೌನದಿಂದಲೇ ಆಚರಿಸಲೇಬೇಕು.

ಏಕತೋ ಮಲಮಾಸೋಽಯಮೇಕತೋ ದ್ವಾದಶಾಬ್ದಿಕಮ್ ।
ಸಮಾನಮತ್ರ ನ ಭವೇತ್ ಕಿಂ ಪುನರ್ಮೌನಭೋಜನಾತ್ ॥ - ಪ.ಪು.

ಒಂದು ತಿಂಗಳ ಅಧಿಕಮಾಸಕ್ಕೆ ಉಳಿದ ಹನ್ನೆರಡು ತಿಂಗಳುಗಳು ಸಮವೆನ್ನಿಸವು. ಮೌನಭೋಜನ ಇದಕ್ಕಿಂತ ಮಿಗಿಲು.

ಏಕತೋ ಪೃಥ್ವೀದಾನಮೇಕತೋ ಮೌನಭೋಜನಮ್ ।
ನ ಸಮಂ ಚಾತ್ರ ಕಥಿತಂ ಶಿವೇನ ಬ್ರಹ್ಮಣಾ ಮಯಾ ॥ - ಪ.ಪು.

ಪೃಥ್ವೀದಾನ ಒಂದು ಕಡೆ; ಮೌನಭೋಜನ ಮತ್ತೊಂದು ಕಡೆ. ಇವು ಸಮವೆನ್ನಿಸವು ಎಂದು ಬ್ರಹ್ಮವಿಷ್ಣುಮಹೇಶ್ವರರ ವಚನ (ಪೃಥ್ವೀದಾನಕ್ಕಿಂತ ಮೌನವ್ರತ ಮಿಗಿಲು ಎಂದರ್ಥ).

ಧನ್ಯೋ ವೈ ಮಾನವೋ ಲೋಕೇ ಯಃ ಸ್ನಾತಿ ಮಲಮಾಸಕೇ ।
ತಥೋ ಧನ್ಯತಮಃ ಸೋಽಪಿ ದೀಪದಃ ಪುರುಷೋತ್ತಮೇ ॥
ಮೌನವ್ರತೀ ತತೋ ಧನ್ಯಃ ಸ್ನಾನೇ ವೈ ಭೋಜನಾರ್ಚನೇ ।
ಆಜನ್ಮತಃ ಕೃತಾತ್ ಪಾಪಾತ್ ಮುಚ್ಯತೇ ನಾತ್ರ ಸಂಶಯಃ ॥ - ಪ.ಪು.

ಅಧಿಕಮಾಸದಲ್ಲಿ ಸ್ನಾನ ಮಾಡುವ ಮನುಷ್ಯ ಧನ್ಯ; ಅವನಿಗಿಂತಲೂ ಪುರುಷೋತ್ತಮನಿಗೆ ದೀಪಾರಾಧನೆ ಮಾಡುವವನು ಇನ್ನೂ ಹೆಚ್ಚು ಧನ್ಯ; ಅವನಿಗಿಂತ ಸ್ನಾನ, ಭೋಜನ ಹಾಗೂ ಪೂಜಾಕಾಲದಲ್ಲಿ ಮೌನವ್ರತ ಮಾಡುವವನು ಮತ್ತೂ ಧನ್ಯ; ಜನ್ಮಾರಭ್ಯ ಮಾಡಿದ ಸಕಲಪಾಪಗಳು ಅದರಿಂದ ನಾಶವಾಗುತ್ತವೆ; ಸಂಶಯವಿಲ್ಲ.

ದೀಪಾರಾಧನೆಯ ಮಂತ್ರ

ಗೃಹಾಣೇಮಂ ಮಯಾ ದತ್ತಂ ಸುದೀಪಂ ಪುರುಷೋತ್ತಮ ।
ಪ್ರಸಾದಸುಮುಖೋ ಭೂತ್ವಾ ವಾಂಛಿತಾರ್ಥಪ್ರದೋ ಭವ ॥

-ಪ.ಪು.೭/೩೭

ಪುರುಷೋತ್ತಮನೇ! ನಾನು ಸಮರ್ಪಿಸುವ ಈ ಉತ್ತಮದೀಪವನ್ನು ಸ್ವೀಕರಿಸು; ಪ್ರಸನ್ನನಾಗಿ ನಾನು ಬಯಸಿದ್ದನ್ನು ನೀಡಿ ಅನುಗ್ರಹಿಸು.

ದೀಪದಾನ ಮಂತ್ರ

ದೀಪಸ್ತಮೋ ನಾಶಯತಿ ದೀಪಃ ಕಾಂತಿಂ ಪ್ರಯಚ್ಛತಿ ।
ತಸ್ಮಾದ್ದೀಪಪ್ರದಾನೇನ ಪ್ರೀಯತಾಂ ಪುರುಷೋತ್ತಮಃ ॥
ಅವಿದ್ಯಾತಮಸಾ ವ್ಯಾಪ್ತೇ ಸಂಸಾರೇ ಪಾಪಗರ್ಭಿತೇ ।
ಜ್ಞಾನಮೋಕ್ಷಪ್ರದೋ ದೀಪಸ್ತಸ್ಮಾದ್ದತ್ತೋ ಮಯಾ ತವ ॥

-ಪ.ಪು. ೭/೩೫-೩೬

ದೀಪವು ಕತ್ತಲೆಯನ್ನು ಕಳೆಯುವುದು; ಕಾಂತಿಯನ್ನು ನೀಡುವುದು. ಆದ್ದರಿಂದ ದೀಪದಾನದಿಂದ ಪುರುಷೋತ್ತಮನು ಪ್ರೀತನಾಗಲಿ. ಅವಿದ್ಯೆಯ ಕತ್ತಲಿನಿಂದ ಕೂಡಿದ, ಒಡಲಲ್ಲಿ ಪಾಪವನ್ನು ತುಂಬಿಕೊಂಡಿರುವ ಸಂಸಾರಕ್ಕೆ ದೀಪವು ಜ್ಞಾನಮೋಕ್ಷಗಳನ್ನು ನೀಡುವಂತಹುದು; ಆದ್ದರಿಂದ ನಾನು ನಿನಗೆ ದೀಪವನ್ನು ನೀಡಿರುವೆನು.

ಅಧಿಕಮಾಸದಲ್ಲಿ ದೀಪಾರಾಧನೆಯ ಮಹತ್ತ್ವ

ವೇದೋಕ್ತಾನಿ ಚ ಕರ್ಮಾಣಿ ದಾನಾನಿ ವಿವಿಧಾನಿ ಚ ।
ಪುರುಷೋತ್ತಮದೀಪಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

-ಬೃ.ನಾ.೨೪/೧೯

ವೇದೋಕ್ತವಾದ ಸಕಲಕರ್ಮಗಳು, ನಾನಾತೆರನಾದ ದಾನಗಳು ಸಹ ಅಧಿಕಮಾಸದಲ್ಲಿ ದೀಪಸಮರ್ಪಣೆಗೆ ಹದಿನಾರನೆಯ ಒಂದಂಶಕ್ಕೂ ಸಾಟಿ ಎನ್ನಿಸವು.

ತೀರ್ಥಾನಿ ಸಕಲಾನ್ಯೇವ ಶಾಸ್ತ್ರಾಣಿ ಸಕಲಾನಿ ಚ ।
ಪುರುಷೋತ್ತಮದೀಪಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

-ಬೃ.ನಾ.೨೪/೨೦

ಸಕಲತೀರ್ಥಗಳು ಹಾಗೂ ಸಕಲಶಾಸ್ತ್ರಗಳು ಅಧಿಕಮಾಸದ ದೀಪಾರಾಧನೆಯ ಹದಿನಾರನೆಯ ಒಂದಂಶಕ್ಕೂ ಸಾಟಿ ಎನ್ನಿಸವು.

ಯೋಗೋ ಜ್ಞಾನಂ ತಥಾ ಸಾಂಖ್ಯಂ ತಂತ್ರಾಣಿ ಸಕಲಾನ್ಯಪಿ ।
ಪುರುಷೋತ್ತಮದೀಪಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

-ಬೃ.ನಾ.೨೪/೨೧

ಯೋಗ, ಜ್ಞಾನ, ಸಾಂಖ್ಯ ಹಾಗೂ ಸಕಲ ತಂತ್ರಗಳು ಸಹ ಅಧಿಕಮಾಸದ ದೀಪಾರಾಧನೆಯ ಹದಿನಾರನೆಯ ಒಂದಂಶಕ್ಕೂ ಸಾಟಿಯಾಗಲಾರವು.

ಕೃಚ್ಛ್ರಚಾಂದ್ರಾಯಣಾದೀನಿ ವ್ರತಾನಿ ನಿಖಿಲಾನಿ ಚ ।
ಪುರುಷೋತ್ತಮದೀಪಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

-ಬೃ.ನಾ.೨೪/೨೨

ಕೃಚ್ಛ್ರ, ಚಾಂದ್ರಾಯಣ ಮೊದಲಾದ ಸಕಲವ್ರತಗಳು ಅಧಿಕಮಾಸದ ದೀಪಕ್ಕೆ ಹದಿನಾರನೆಯ ಒಂದಂಶಕ್ಕೂ ಸಾಟಿಯಾಗಲಾರವು.

ವೇದಾಭ್ಯಾಸೋ ಗಯಾಶ್ರಾದ್ಧಂ ಗೋಮತೀತಟಸೇವನಮ್ ।
ಪುರುಷೋತ್ತಮದೀಪಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

-ಬೃ.ನಾ.೨೪/೨೩

ವೇದಾಧ್ಯಯನ, ಗಯಾಶ್ರಾದ್ಧ, ಗೋಮತೀತೀರದ ಸೇವನೆಗಳು ಸಹ ಅಧಿಕಮಾಸದ ದೀಪಕ್ಕೆ ಹದಿನಾರನೆಯ ಒಂದಂಶಕ್ಕೂ ಸಾಟಿಯಲ್ಲ.

ಉಪರಾಗಸಹಸ್ರಾಣಿ ವ್ಯತೀಪಾತಶತಾನಿ ಚ ।
ಪುರುಷೋತ್ತಮದೀಪಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

-ಬೃ.ನಾ.೨೪/೨೪

ಸಾವಿರಾರು ಗ್ರಹಣಗಳು, ನೂರಾರು ವ್ಯತೀಪಾತಯೋಗಗಳು ಸಹ ಅಧಿಕಮಾಸದ ದೀಪಕ್ಕೆ ಹದಿನಾರನೆಯ ಒಂದಂಶಕ್ಕೂ ಸಾಟಿಯೆನ್ನಿಸವು.

ಕುರ್ವಾದಿಕ್ಷೇತ್ರವರ್ಯಾಣಿ ದಂಡಕಾದಿವನಾನಿ ಚ ।
ಪುರುಷೋತ್ತಮದೀಪಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

-ಬೃ.ನಾ.೨೪/೨೫

ಕುರುಕ್ಷೇತ್ರ ಮೊದಲಾದ ಕ್ಷೇತ್ರಗಳು ದಂಡಕಾರಣ್ಯ ಮೊದಲಾದ ಅರಣ್ಯಗಳು ಅಧಿಕಮಾಸದ ದೀಪಕ್ಕೆ ಹದಿನಾರನೆಯ ಒಂದಂಶಕ್ಕೂ ಸಾಟಿಯೆನ್ನಿಸವು.

ಶ್ರೀಮದ್ಭಾಗವತ ಗ್ರಂಥದಾನವು ವಿಹಿತ

ಶ್ರೀಮದ್ಭಾಗವತಂ ದದ್ಯಾದ್ವೈಷ್ಣವಾಯ ದ್ವಿಜನ್ಮನೇ ।
ಶಕ್ತಶ್ಚೇನ್ನ ವಿಲಂಬೇತ ಚಲಮಾಯುರ್ವಿಚಾರಯನ್ ॥ -ಬೃ.ನಾ. ೨೫/೩೨

ಶಕ್ತನಾದವನು ಆಯುಷ್ಯ ಅಸ್ಥಿರ ಎಂಬುದನ್ನು ಗಮನಿಸಿ ಅಧಿಕಮಾಸದಲ್ಲಿ ವೈಷ್ಣವಬ್ರಾಹ್ಮಣನಿಗೆ ಶ್ರೀಮದ್ಭಾಗವತಗ್ರಂಥವನ್ನು ದಾನವಾಗಿ ನೀಡಬೇಕು.

ಶ್ರೀಮದ್ಭಾಗವತಂ ಸಾಕ್ಷಾದ್ಭಗವದ್ರೂಪಮದ್ಭುತಮ್ ।
ಯೋ ದದ್ಯಾದ್ವೈಷ್ಣವಾಯೈವ ಪಂಡಿತಾಯ ದ್ವಿಜನ್ಮನೇ ॥ - ಬೃ.ನಾ. ೨೫/೩೩

ಶ್ರೀಮದ್ಭಾಗವತವು ಸಾಕ್ಷಾತ್ ಶ್ರೀಹರಿಯ ಪ್ರತಿಕೃತಿ; ವಿದ್ವಾಂಸನಾದ ವೈಷ್ಣವಬ್ರಾಹ್ಮಣನಿಗೆ ಅದನ್ನು ದಾನವಾಗಿ ನೀಡಬೇಕು.

ಸ ಕೋಟಿಕುಲಮುದ್ಧೃತ್ಯ ಹ್ಯಪ್ಸರೋಗಣಸೇವಿತಃ ।
ವಿಮಾನಮಧಿರುಹ್ಯೈತಿ ಗೋಲೋಕಂ ಯೋಗಿದುರ್ಲಭಮ್ ॥
-ಬೃ.ನಾ.೨೫/೩೪

ಶ್ರೀಮದ್ಭಾಗವತ ಗ್ರಂಥವನ್ನು ದಾನ ನೀಡುವವನು ಅಪ್ಸರೆಯರ ಗುಂಪಿನಿಂದ ಸೇವಿತ-ನಾಗಿ ವಿಮಾನವನ್ನೇರಿ ಯೋಗಿಗಳಿಗೂ ದೊರಕದ ಗೋಲೋಕವನ್ನು ಹೊಂದುವನು.

ಕನ್ಯಾದಾನಸಹಸ್ರಾಣಿ ವಾಜಪೇಯಶತಾನಿ ಚ ।
ಸಧಾನ್ಯಕ್ಷೇತ್ರದಾನಾನಿ ತುಲಾದಾನಾನಿ ಯಾನಿ ಚ ॥
ಮಹಾದಾನಾನಿ ಯಾನ್ಯಷ್ಟೌ ಛಂದೋದಾನಾನಿ ಯಾನಿ ಚ ।
ಶ್ರೀಭಾಗವತದಾನಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥
-ಬೃ.ನಾ.೨೫/೩೫-೩೬

ಸಾವಿರಾರು ಕನ್ಯಾದಾನಗಳು, ನೂರಾರು ವಾಜಪೇಯಯಾಗಗಳು, ಉತ್ತಮ ಧಾನ್ಯಗಳನ್ನು ಬೆಳೆಯುವ ಕ್ಷೇತ್ರಗಳ ದಾನಗಳು, ತುಲಾಪುರುಷದಾನಾದಿ ಎಂಟು ಮಹಾದಾನಗಳು, ವೇದೋಪದೇಶಗಳು ಮೊದಲಾದವುಗಳು ಶ್ರೀಮದ್ಭಾಗವತದಾನದ ಹದಿನಾರನೆಯ ಒಂದಂಶಕ್ಕೂ ಸಾಟಿಯೆನ್ನಿಸವು (ಇಲ್ಲಿ ಶ್ರೀಮದ್ಭಾಗವತ ಎಂದರೆ ಹದಿನೆಂಟು ಮಹಾಪುರಾಣಗಳಲ್ಲಿ ಪ್ರಧಾನವಾದ ಶ್ರೀಮದ್ಭಾಗವತಮಹಾಪುರಾಣ ಹಾಗೂ ಭಗವಂತನಾದ ಮಹಾವಿಷ್ಣುವಿನ ಮಹಿಮೆಯನ್ನು ತಿಳಿಸುವ ಮಹಾಭಾರತ, ಭಗವದ್ಗೀತೆ, ಸರ್ವಮೂಲಗ್ರಂಥಗಳು, ನ್ಯಾಯಸುಧಾದಿ ಟೀಕಾಗ್ರಂಥಗಳು, ಪರಿಮಳ ಮೊದಲಾದ ಟಿಪ್ಪಣಿಗ್ರಂಥಗಳು, ನ್ಯಾಯಾಮೃತ, ಯುಕ್ತಿಮಲ್ಲಿಕಾ ಮೊದಲಾದ

ವಾದಗ್ರಂಥಗಳು, ಹರಿಕಥಾಮೃತಸಾರ ಮೊದಲಾದ ಹರಿದಾಸಸಾಹಿತ್ಯದ ಕೃತಿಗಳು ಸಹ ಗ್ರಾಹ್ಯ; ಆದ್ದರಿಂದ ಇವುಗಳಲ್ಲಿ ಯಾವುದೇ ಗ್ರಂಥದ ದಾನವೂ ವಿಹಿತ).

ಅಧಿಕಮಾಸದಲ್ಲಿ ವಿಹಿತವಾದ ಬಗೆಬಗೆಯ ದಾನಗಳು ಹಾಗೂ ಅವುಗಳ ಫಲ

ಅಧಿಕಮಾಸದಲ್ಲಿ ವಿಹಿತವಾದ ಬಗೆಬಗೆಯ ದಾನಗಳು ಹಾಗೂ ಅವುಗಳ ಫಲ ಪದ್ಮಪುರಾಣದಲ್ಲಿ ನಿರೂಪಿತವಾಗಿದ್ದು ಅವುಗಳಲ್ಲಿ ಕೆಲವು ಹೀಗಿವೆ :

ದಾನಗಳು	ಫಲ
ಸುವರ್ಣದಾನ	ದಾರಿದ್ರ್ಯನಾಶ
ಗೋದಾನ	ಬ್ರಹ್ಮಲೋಕಪ್ರಾಪ್ತಿ
ರಜತದಾನ	ಪಿತೃಗಳಿಗೆ ತೃಪ್ತಿ
ತಾಮ್ರಪಾತ್ರದಾನ	ಸರ್ವಾಭೀಷ್ಟಸಿದ್ಧಿ
ರತ್ನದಾನ	ರಾಜಯೋಗ
ಮುತ್ತುಗಳ ದಾನ	ಭುಕ್ತಿಮುಕ್ತಿಪ್ರಾಪ್ತಿ
ವಸ್ತ್ರದಾನ	ಚಂದ್ರಲೋಕಪ್ರಾಪ್ತಿ
ಶಾಲುದಾನ	ಪಾಪಪರಿಹಾರ
ರೇಷ್ಮೆ ವಸ್ತ್ರದಾನ	ಭಯಪರಿಹಾರ
ಧಾನ್ಯದಾನ	ಸರ್ವಾರ್ಥಸಿದ್ಧಿ
ಪಾದರಕ್ಷೆಗಳ ದಾನ	ಸುಖಕರ ಪರಲೋಕ ಪ್ರಯಾಣ

ಅಧಿಕಮಾಸದಲ್ಲಿ ವಿಹಿತವಾದ ವಿವಿಧ ವ್ರತಗಳು ಹಾಗೂ ಅವುಗಳ ಸಂಪೂರ್ತಿಗೆ ವಿಹಿತವಾದ ದಾನಗಳು

ನಕ್ತಭೋಜೀ ನರೋ ರಾಜನ್ ಬ್ರಾಹ್ಮಣಾನ್ ಭೋಜಯೇದಥ ।
ಅಯಾಚಿತೇ ವ್ರತೇ ಚೈವ ಸ್ವರ್ಣದಾನಂ ಸಮಾಚರೇತ್ ॥
ಅಮಾವಾಸ್ಯಾಶನೋ ಯಸ್ತು ಪ್ರದದ್ಯಾದ್ಗಾಂ ಸದಕ್ಷಿಣಾಮ್ ।
ಧಾತ್ರೀಸ್ನಾನಂ ನರೋ ಯಸ್ತು ದಧಿ ವಾ ಕ್ಷೀರಮೇವ ಚ ॥
ಫಲಾನಾಂ ನಿಯಮೇ ರಾಜನ್ ಫಲದಾನಂ ಸಮಾಚರೇತ್ ।
ತೈಲಸ್ಥಾನೇ ಘೃತಂ ದೇಯಂ ಘೃತಸ್ಥಾನೇ ಪಯಸ್ತಥಾ ॥
ಧಾನ್ಯಾನಾಂ ನಿಯಮೇ ರಾಜನ್ ಗೋಧೂಮಾನ್ ಶಾಲಿತಂಡುಲಾನ್ ।
ಭೂಮೌ ಚ ಶಯನೇ ರಾಜನ್ ಸತೂಲೀಂ ಸಪರಿಚ್ಛದಾಮ್ ॥
ಸುಖದಾಂ ಚಾತ್ಮನೋಽನ್ಯಸ್ಯ ಹ್ಯಂತರ್ಯಾಮೀ ಪ್ರಿಯೋ ಜನಃ ।
ಪತ್ರಭೋಜೀ ನರೋ ಯಸ್ತು ಭೋಜನಂ ಘೃತಶರ್ಕರಾಮ್ ॥
ಮೌನೇ ಘಂಟಾಂ ತಿಲಾಂಶ್ಚೈವ ಸಹಿರಣ್ಯಾನ್ ಪ್ರದಾಪಯೇತ್ ।
ದಂಪತ್ಯೋರ್ಭೋಜನಂ ಚೈವ ಸಸ್ನೇಹಂ ಚ ಸುಶೋಭನಮ್ ॥

ನಖಕೇಶಧರೋ ರಾಜನ್ನಾದರ್ಶಂ ದಾಪಯೇದ್ಬುಧಃ।
ಉಪಾನಹೌ ಪ್ರದಾತವ್ಯೇ ಉಪಾನಹವಿವರ್ಜನಾತ್ ॥
ಲವಣಸ್ಯ ಪರಿತ್ಯಾಗೇ ದಾತವ್ಯಾ ವಿವಿಧಾ ರಸಾಃ।
ದೀಪದಾನಪರೋ ದದ್ಯಾತ್ ಪಾತ್ರಯುಕ್ತಂ ಚ ದೀಪಕಮ್ ॥
ಅಧಿಮಾಸೇ ನರೋ ಭಕ್ತ್ಯಾ ಸ ವೈಕುಂಠೇ ವಸೇತ್ ಸದಾ।
ದೀಪಂ ಚ ಸಘೃತಂ ತಾಮ್ರಂ ಕಾಂಚನೀವರ್ತಿಸಂಯುತಮ್ ॥
ಪಲಮಾತ್ರಂ ಪ್ರದೇಯಂ ಸ್ಯಾದ್ವ್ರತಸಂಪೂರ್ಣಹೇತವೇ।
ಏಕಾಂತರೋಪವಾಸೇನ ಕುಂಭಾನಷ್ಟೌ ಪ್ರದಾಪಯೇತ್ ॥
ಸವಸ್ತ್ರಾನ್ ಕಾಂಚನೋಪೇತಾನ್ ಮೃಣ್ಮಯಾನಥ ಕಾಂಚನಾನ್।
ಮಾಸಾಂತೇ ಮೋದಕಾಂಸ್ತ್ರಿಂಶತ್ ಛತ್ರೋಪಾನಹಸಂಯುತಾನ್ ॥
ಅನಡ್ವಾಂಶ್ಚ ಪ್ರದಾತವ್ಯೋ ಧೌರೇಯಸ್ತು ಧುರಿಕ್ಷಮಃ।
ಸರ್ವೇಷಾಮಪ್ಯಲಾಭೇ ಚ ಯಥೋಕ್ತಕರಣಂ ವಿನಾ।
ದ್ವಿಜವಾಕ್ಯಂ ಸ್ಮೃತಂ ರಾಜನ್ ಸಂಪೂರ್ಣವ್ರತಸಿದ್ಧಿದಮ್ ॥

- ಬೃ.ನಾ.೨೭/೨-೧೩

ಅಧಿಕಮಾಸದಲ್ಲಿ ವಿಶೇಷವಾಗಿ ಕೈಗೊಳ್ಳಬೇಕಾದ ವ್ರತಗಳು	**ವ್ರತಗಳ ಪೂರ್ಣತೆಗಾಗಿ ವಿಹಿತವಾದ ದಾನಗಳು**
ರಾತ್ರಿಭೋಜನವ್ರತ	ಬ್ರಾಹ್ಮಣಭೋಜನ
ಅಯಾಚಿತವ್ರತ	ಸುವರ್ಣದಾನ
ಅಮಾವಾಸ್ಯೆಯವರೆಗೆ ಮಾಸೋಪವಾಸ	ಗೋದಾನ
ನೆಲ್ಲೀಕಾಯಿ ಸ್ನಾನ	ದಧಿ ಅಥವಾ ಕ್ಷೀರದಾನ
ಫಲಾಹಾರವ್ರತ	ಫಲದಾನ
ತೈಲತ್ಯಾಗವ್ರತ	ಘೃತದಾನ
ಘೃತತ್ಯಾಗವ್ರತ	ಕ್ಷೀರದಾನ
ಧಾನ್ಯತ್ಯಾಗವ್ರತ	ಗೋಧಿ ಮತ್ತು ಅಕ್ಕಿ ದಾನ
ನೆಲದ ಮೇಲೆ ಮಲಗುವ ವ್ರತ	ಶಯ್ಯಾದಾನ
ಎಲೆಯಲ್ಲಿ ಊಟ ಮಾಡುವ ನಿಯಮ	ಬ್ರಾಹ್ಮಣಭೋಜನ
ಮೌನವ್ರತ	ಘಂಟೆ, ತಿಲ, ಸುವರ್ಣಗಳ ದಾನ
ನಖಕೇಶಧಾರಣೆ	ದರ್ಪಣದಾನ
ಪಾದರಕ್ಷೆಗಳ ತ್ಯಾಗ	ಪಾದರಕ್ಷೆಗಳ ದಾನ
ಅಲವಣವ್ರತ	ಬಗೆಬಗೆಯ ರಸಪದಾರ್ಥಗಳ ದಾನ
ದೀಪದಾನದ ವ್ರತ	ಬಂಗಾರದ ಬತ್ತಿಯ ದೀಪದ ದಾನ
ಧಾರಣಪಾರಣವ್ರತ	ಎಂಟು ಉದಕುಂಭಗಳ ದಾನ

ಇವು ಸಾಮಾನ್ಯವಾಗಿ ಅಧಿಕಮಾಸದಲ್ಲಿ ವಿಶೇಷವಾಗಿ ಕೈಗೊಳ್ಳಬೇಕಾದ ವ್ರತಗಳು ಹಾಗೂ ಆ ವ್ರತಗಳ ಪೂರ್ಣತೆಗಾಗಿ ವಿಹಿತವಾದ ದಾನಗಳು. ಅನಿವಾರ್ಯ ಕಾರಣಗಳಿಂದ ಇವುಗಳ ದಾನ ಅಶಕ್ಯವಾದಲ್ಲಿ ಬ್ರಾಹ್ಮಣರನ್ನು ಯಥಾಶಕ್ತಿ ಸಂತೃಪ್ತಿಪಡಿಸಿ ಅವರಿಂದ ವ್ರತಸಂಪೂರ್ತಿಯ ಆಶೀರ್ವಚನವನ್ನು ಪಡೆದುಕೊಳ್ಳಬೇಕು.

ವಿತ್ತಶಾಠ್ಯವು ನಿಷಿದ್ಧ

ವಿತ್ತಶಾಠ್ಯಮಕುರ್ವಾಣೋ ದಾನಂ ದದ್ಯಾದ್ದ್ವಿಜಾತಯೇ ।
ವಿದ್ಯಮಾನೇ ಧನೇ ಶಾಠ್ಯಂ ಕುರ್ವಾಣೋ ರೌರವಂ ವ್ರಜೇತ್ ॥

– ಬೃ.ನಾ. ೩೧/೨೪

ವಿತ್ತಶಾಠ್ಯವನ್ನು ಮಾಡದೇ ಬ್ರಾಹ್ಮಣನಿಗೆ ದಾನನೀಡಬೇಕು. ಐಶ್ವರ್ಯವಿದ್ದಾಗಲೂ ಯಥಾಶಕ್ತಿ ದಾನಮಾಡದವನು ರೌರವನರಕವನ್ನು ಹೊಂದುವನು.

ಅಧಿಕಮಾಸದಲ್ಲಿ ಪಿತೃಕಾರ್ಯ ವಿಚಾರ

ಅಧಿಕಮಾಸದಲ್ಲಿ ಬ್ರಹ್ಮಯಜ್ಞಾಂಗವಾದ ಪಿತೃತರ್ಪಣ, ಅಮಾವಾಸ್ಯಾತಿಲತರ್ಪಣಾದಿಗಳನ್ನು ಎಂದಿನಂತೆ ತಪ್ಪದೆ ನೀಡಲೇಬೇಕು. ಅಧಿಕಮಾಸದಲ್ಲೇ ಒದಗುವ ಮೃತರಾದವರ ಶ್ರಾದ್ಧವನ್ನು ಅಧಿಕವೈಶಾಖಮಾಸದಲ್ಲಿ ಪಿಂಡಪ್ರದಾನಪೂರ್ವಕವಾಗಿಯೇ ಆಚರಿಸಬೇಕು. ನಿಜಮಾಸದಲ್ಲಿ ಮೃತರಾದವರ ಶ್ರಾದ್ಧವನ್ನು ಅಧಿಕಮಾಸ ಹಾಗೂ ನಿಜಮಾಸ ಎರಡರಲ್ಲಿಯೂ ಮಾಡಬೇಕು ಎಂಬುದು ಕಾಲಾದರ್ಶಗ್ರಂಥದ ಪಕ್ಷ:

ವರ್ಷೇ ವರ್ಷೇ ತು ಯಚ್ಛ್ರಾದ್ಧಂ ಮಾತಾಪಿತ್ರೋರ್ಮೃತೇಽಹನಿ ।
ಮಾಸದ್ವಯೇಽಪಿ ತತ್ಕಾರ್ಯಂ ವ್ಯಾಸಸ್ಯ ವಚನಂ ತಥಾ ॥

ಇದರಂತೆ ವೃದ್ಧವಾಸಿಷ್ಠ, ಸತ್ಯವ್ರತ, ಹೇಮಾದ್ರಿ ಮೊದಲಾದವರ ಪಕ್ಷವೂ ಇದೇ ಆಗಿದೆ.

ಅಧಿಕಮಾಸದಲ್ಲಿ ಬ್ರಾಹ್ಮಣಭೋಜನಾದಿಗಳನ್ನು ಮಾಡಿಸಿ ನಿಜಮಾಸದಲ್ಲಿ ಮಾತ್ರ ಪ್ರತಿವರ್ಷದ ಶ್ರಾದ್ಧವನ್ನು ಪಿಂಡಪ್ರದಾನಪೂರ್ವಕ ಮಾಡಬೇಕು ಎಂಬುದು ಸ್ಮೃತಿಮುಕ್ತಾವಲಿಯಲ್ಲಿ ಉದಾಹೃತವಾದ ನಿರ್ಣಯಾಮೃತ ಮೊದಲಾದ (ನಿರ್ಣಯಸಿಂಧು ಇತ್ಯಾದಿ)ಗ್ರಂಥಕಾರರ ಪಕ್ಷ:

'ಪೂರ್ವೋಕ್ತ ಕಾಲಾದರ್ಶವಚನಾತ್ ಮಲಮಾಸಶ್ರಾದ್ಧದಿನಸ್ಯ ವಂಧ್ಯತ್ವನಿರಾಸಾರ್ಥಂ ಪಿತ್ರುದ್ದೇಶೇನ ಬ್ರಾಹ್ಮಣಾನ್ ಭೋಜಯಿತ್ವಾ ಶುದ್ಧಮಾಸೇ ಸಪಿಂಡಂ ಶ್ರಾದ್ಧಂ ಕುರ್ಯಾತ್'

ಹಿಂದಿನ ಸಂವತ್ಸರ ಆ ಮಾಸದಲ್ಲಿ ಮೃತರಾದವರ ಪ್ರಥಮಾಬ್ದಿಕವನ್ನು ಈ ಸಂವತ್ಸರದ ಆ ಮಾಸದ ಅಧಿಕಮಾಸದಲ್ಲಿಯೇ ಮಾಡಬೇಕು. ಇತರ ಶ್ರಾದ್ಧಾದಿಗಳನ್ನು

ನಿಜಮಾಸದಲ್ಲಿಯೇ ಮಾಡಬೇಕು. ಅಧಿಕಮಾಸದಲ್ಲಿ ಸಂಕಲ್ಪಶ್ರಾದ್ಧವನ್ನು ಮಾಡುವ ಪಕ್ಷವೂ ಉಂಟು. ಮಾಸಿಕ ಶ್ರಾದ್ಧವನ್ನು ಅಧಿಕಮಾಸದಲ್ಲಿ ಸಹ ಮಾಡಬೇಕು.

ಅಧಿಕಮಾಸಮಹಾತ್ಮ್ಯದ ಲೇಖನವೂ ಪುಣ್ಯಕರ

ಪುರುಷೋತ್ತಮಮಾಹಾತ್ಮ್ಯಂ ಲೇಖಯಿತ್ವಾ ದ್ವಿಜನ್ಮನೇ।
ಸಂಭೂಷ್ಯ ವಸ್ತ್ರಭೂಷಾಭಿರ್ವಿಧಿನಾ ಯಃ ಪ್ರಯಚ್ಛತಿ॥
ಕುಲತ್ರಯಂ ಸಮುದ್ಧೃತ್ಯ ಗೋಲೋಕಂ ಯಾತಿ ದುರ್ಲಭಮ್।
ಯತ್ರಾಸ್ತೇ ಗೋಪಿಕಾವೃಂದೈರ್ವೇಷ್ಟಿತಃ ಪುರುಷೋತ್ತಮಃ॥

-ಬೃ.ನಾ. ೩೧/೩೯-೪೦

ಅಧಿಕಮಾಸದ ಮಹಿಮೆಯನ್ನು ಬರೆದು ವಸ್ತ್ರಸಮೇತವಾಗಿ ಬ್ರಾಹ್ಮಣನಿಗೆ ವಿಧ್ಯುಕ್ತವಾಗಿ ದಾನಮಾಡುವವನು ಮೂರುಕುಲಗಳನ್ನು ಉದ್ಧರಿಸಿ ಗೋಪಿಕಾವೃಂದದಿಂದ ಸುತ್ತುವರಿದ ಶ್ರೀಪುರುಷೋತ್ತಮನು ನೆಲೆಸಿದ ಗೋಲೋಕವನ್ನು ಪಡೆಯುವನು.

ಅಧಿಕಮಾಸದ ಮಹಿಮೆಯ ಪುಸ್ತಕವು ಮನೆಯಲ್ಲಿರುವುದು ಶ್ರೇಯಸ್ಕರ

ಲಿಖಿತ್ವಾ ಧಾರಯೇದ್ಯಸ್ತು ಗೃಹೇ ಮಾಹಾತ್ಮ್ಯಮುತ್ತಮಮ್।
ತದ್ಗೃಹೇ ಸರ್ವತೀರ್ಥಾನಿ ವಿಲಸಂತಿ ನಿರಂತರಮ್॥ - ಬೃ.ನಾ. ೩೧/೪೧

ಉತ್ತಮವಾದ ಅಧಿಕಮಾಸಮಹಾತ್ಮ್ಯಪುಸ್ತಕವನ್ನು ಬರೆದು ಮನೆಯಲ್ಲಿ ಇರಿಸಿ-ಕೊಳ್ಳುವುದು ಪುಣ್ಯಕರ. ಅಂತಹ ಮನೆಯಲ್ಲಿ ಸಕಲತೀರ್ಥಗಳು ಸದಾ ನೆಲೆಸಿರುವವು.

ಅಧಿಕಮಾಸದ ಮಹಾತ್ಮ್ಯದ ಶ್ರವಣವೂ ಪುಣ್ಯಕರ

ಶ್ರುತ್ವಾ ಧರ್ಮಂ ವಿಜಾನಾತಿ ಶ್ರುತ್ವಾ ಪಾಪಂ ಪರಿತ್ಯಜೇತ್।
ಶ್ರುತ್ವಾ ನಿವರ್ತತೇ ಮೋಹಃ ಶ್ರುತ್ವಾ ಜ್ಞಾನಾಮೃತಂ ಲಭೇತ್॥

-ಬೃ.ನಾ.೨೯/೬೭

ಅಧಿಕಮಾಸದ ಮಹಿಮೆಯನ್ನು ಕೇಳಿ ಧರ್ಮವು ತಿಳಿಯುವುದು; ಕೇಳಿದಂತೆ ಪಾಪಬುದ್ಧಿ ತೊಲಗುವುದು. ಕೇಳುತ್ತ ಕೇಳುತ್ತ ಮೋಹವು ಪರಿಹಾರವಾಗುವುದು; ಶ್ರವಣದ ಫಲವಾಗಿ ಜ್ಞಾನಾಮೃತವು ಲಭಿಸುವುದು.

ಯತ್ರ ಸಂಕೀರ್ತ್ಯತೇ ನಿತ್ಯಂ ಮಲಮಾಸಕಥಾನಕಮ್।
ತತ್ರ ತೀರ್ಥಾನಿ ಸರ್ವಾಣಿ ತುಲಸ್ಯಾ ಸಹಿತೋ ಹರಿಃ॥ -ಪ.ಪು.೫/೨೩

ಅಧಿಕಮಾಸದ ಮಹಿಮೆಯ ಕೀರ್ತನೆ ನಡೆಯುವ ಸ್ಥಳದಲ್ಲಿಯೂ ಸಕಲತೀರ್ಥಗಳು ನೆಲೆಸುವವು ಹಾಗೂ ತುಲಸಿಯೊಂದಿಗೆ ಶ್ರೀಹರಿಯು ಸನ್ನಿಹಿತನಾಗುವನು.

ಯಃ ಶೃಣೋತಿ ನರೋ ರಾಜನ್ ಪಠತೇ ವಾಽಪಿ ಸರ್ವದಾ।
ಸ ಯಾತಿ ಪರಮಂ ಲೋಕಂ ಯತ್ರ ಯೋಗೀಶ್ವರೋ ಹರಿಃ॥

- ಬೃ.ನಾ.೨೬/೩೭

ಯಾವ ಮನುಷ್ಯನು ಅಧಿಕಮಾಸದ ಮಹಾತ್ಮ್ಯವನ್ನು ಕೇಳುವನೋ ಅಥವಾ ಹೇಳುವನೋ, ಅವನೂ ಸಹ ಶ್ರೀಹರಿಯು ನೆಲೆಸಿರುವ ಪುಣ್ಯವಾದ ವೈಕುಂಠವನ್ನು ಸೇರುವನು.

ಶ್ರೋತವ್ಯಮೇತತ್ ಸತತಂ ಪುರಾಣಮಭೀಷ್ಟದಂ ಪಾವನಮಾದರೇಣ।
ಶ್ಲೋಕೈಕಮಾತ್ರಶ್ರವಣೇನ ಪುಂಸಾಮಘಾನಿ ಸರ್ವಾಣಿ ನಿಹಂತಿ ವಿಪ್ರಾಃ॥
ಗಂಗಾದಿಸರ್ವತೀರ್ಥೇಷು ಮಜ್ಜತೋ ಯತ್ಫಲಂ ಭವೇತ್।
ತತ್ಫಲಂ ಶೃಣ್ವತಸ್ತಸ್ಯ ಮಾಹಾತ್ಮ್ಯಂ ಮುನಿಸತ್ತಮಾಃ॥
ಇಲಾಂ ಪ್ರದಕ್ಷಿಣೀಕುರ್ವನ್ ಯತ್ಪುಣ್ಯಂ ಲಭತೇ ನರಃ।
ತತ್ಪುಣ್ಯಂ ಶೃಣ್ವತಸ್ತಸ್ಯ ಮಾಹಾತ್ಮ್ಯಂ ಪೌರುಷೋತ್ತಮಮ್॥
ಬ್ರಾಹ್ಮಣೋ ಬ್ರಹ್ಮವರ್ಚಸ್ವೀ ಕ್ಷತ್ರಿಯೋ ವಸುಧಾಧಿಪಃ।
ವೈಶ್ಯೋ ಧನಪತಿರ್ಭೂಯಾತ್ ಶೂದ್ರಃ ಸತ್ತಮತಾಂ ಲಭೇತ್॥

- ಬೃ.ನಾ. ೩೧/೩೪-೩೭

ಪಾವನವಾದ ಈ ಅಧಿಕಮಾಸ ಮಹಾತ್ಮ್ಯೆಯನ್ನು ಭಕ್ತಿಯಿಂದ ಶ್ರವಣ ಮಾಡಬೇಕು. ಇದರ ಒಂದೊಂದು ಶ್ಲೋಕದ ಕೇವಲ ಶ್ರವಣದಿಂದಲೂ ಸಕಲಪಾಪಗಳು ಪರಿಹಾರವಾಗುವವು. ಗಂಗಾದಿ ಸಕಲತೀರ್ಥಗಳಲ್ಲಿ ಸ್ನಾನಮಾಡಿದ ಪುಣ್ಯ ಇದರ ಶ್ರವಣದಿಂದ ಲಭಿಸುವುದು. ಸಕಲಭೂಪ್ರದಕ್ಷಿಣೆಯನ್ನು ಮಾಡಿದ ಪುಣ್ಯವೂ ಇದರ ಶ್ರವಣದಿಂದ ಬರುವುದು. ಇದನ್ನು ಕೇಳಿದ ಬಾಹ್ಮಣ ಬ್ರಹ್ಮವರ್ಚಸ್ವಿಯಾಗುವನು; ಕ್ಷತ್ರಿಯ ಚಕ್ರವರ್ತಿಯಾಗುವನು; ವೈಶ್ಯ ಕುಬೇರನೆನ್ನಿಸುವನು; ಶೂದ್ರ ಹಿರಿಮೆ ಗಳಿಸುವನು.

ಅಧಿಕಮಾಸದಲ್ಲಿ ನಿತ್ಯಪಠನೀಯವಾದ ವಿಶೇಷ ಶ್ರೀಹರಿಯ ಸ್ತೋತ್ರ

ನಮಃ ಪುರುಷೋತ್ತಮಾಖ್ಯ ನಮಸ್ತೇ ವಿಶ್ವಭಾವನ।
ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ॥
ಯೇನೇದಮಖಿಲಂ ಜಾತಂ ಯತ್ರ ಸರ್ವಂ ಪ್ರತಿಷ್ಠಿತಮ್।
ಲಯಮೇಷ್ಯತಿ ಯತ್ರೈತತ್ ತಂ ಪ್ರಪನ್ನೋಽಸ್ಮಿ ಕೇಶವಮ್॥
ಪರೇಶ ಪರಮಾನಂದ ಪರಾತ್ಪರತರಃ ಪ್ರಭುಃ।
ಚಿದ್ರೂಪ ಚಿತ್ಪರಿಜ್ಞೇಯಃ ಸ ತೇ ಕೃಷ್ಣಃ ಪ್ರಸೀದತು॥
ಕೃಷ್ಣಂ ಕಮಲಪತ್ರಾಕ್ಷಂ ರಾಮಂ ರಘುಕುಲೋದ್ಭವಮ್।

ನೃಸಿಂಹಂ ವಾಮನಂ ವಿಷ್ಣುಂ ಸ್ಮರನ್ ಯಾತಿ ಪರಾಂ ಗತಿಮ್ ॥
ವಾಸುದೇವಂ ವರಾಹಂ ಚ ಕಂಸಕೇಶಿನಿಷೂದನಮ್ ।
ಪುರಾಣಪುರುಷಂ ಯಜ್ಞಪುರುಷಂ ಪ್ರಣತೋಽಸ್ಮ್ಯಹಮ್ ।
ಅನಾದಿನಿಧನಂ ದೇವಂ ಶಂಖಚಕ್ರಗದಾಧರಮ್ ॥
ತ್ರಿವಿಕ್ರಮಂ ಹಲಧರಂ ಪ್ರಣತೋಽಸ್ಮಿ ಸನಾತನಮ್ ।
ಯ ಇದಂ ಕೀರ್ತಯೇನ್ನಿತ್ಯಂ ಸ್ತೋತ್ರಾಣಾಮುತ್ತಮೋತ್ತಮಮ್ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥

-ಪ.ಪು.೨೮/೫-೧೧

ಅಧಿಕಮಾಸದಲ್ಲಿ ಶ್ರೀಹರಿಪೂಜೆಗೆ ವಿಶೇಷವಾಗಿ ವಿಹಿತವಾದ ಮಂತ್ರ

ಗೋವರ್ಧನಧರಂ ವಂದೇ ಗೋಪಾಲಂ ಗೋಪರೂಪಿಣಮ್ ।
ಗೋಕುಲೋತ್ಸವಮೀಶಾನಂ ಗೋವಿಂದಂ ಗೋಪಿಕಾಪ್ರಿಯಮ್ ॥

- ಬೃ.ನಾ. ೩೧/೨೮

ಗೋವರ್ಧನವನ್ನು ಧರಿಸಿದ, ಗೋಪರೂಪದ, ಗೋಕುಲಕ್ಕೆ ಹಬ್ಬವೆನ್ನಿಸಿದ, ಗೋಪಿಯರಿಗೆ ಪ್ರಿಯನಾದ, ಸರ್ವೇಶನಾದ, ವೇದವೇದ್ಯನಾದ ಶ್ರೀಗೋಪಾಲಕೃಷ್ಣನಿಗೆ ನಮಸ್ಕರಿಸುವೆನು.

ಶ್ರೀಪುರುಷೋತ್ತಮರೂಪದ ಲಕ್ಷಣ

ಶ್ರೀಪುರುಷೋತ್ತಮ ಎಂದರೆ ಶ್ರೀಮದ್ಭಗವದ್ಗೀತೆಯ [1]ಹದಿನೈದನೆಯ ಅಧ್ಯಾಯದ ಕೊನೆಯಲ್ಲಿ ಬಂದಿರುವಂತೆ ಕ್ಷರಾಕ್ಷರ ಪುರುಷೋತ್ತಮನಾದ ಶ್ರೀಹರಿ. ಈ ಅರ್ಥದಲ್ಲಿ ಶ್ರೀಹರಿಯ ಸಕಲರೂಪಗಳೂ ಶ್ರೀಪುರುಷೋತ್ತಮರೂಪಗಳೇ. ನರಸಿಂಹರೂಪವು ವಿಶೇಷವಾಗಿ ಶ್ರೀಪುರುಷೋತ್ತಮರೂಪವೇ (ನರಸಿಂಹ - ನರಶ್ರೇಷ್ಠ - ಪುರುಷಶ್ರೇಷ್ಠ-ಪುರುಷೋತ್ತಮ). ಮಾಸಗಳ ಪ್ರಸಕ್ತಿಯಲ್ಲಿ ಬಂದಿರುವುದರಿಂದ ಇದು ಕೇಶವಾದಿ

---

೧. ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥
ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥
ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥
ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥ - ಗೀತಾ (೧೫/೧೬-೨೦)

ಚತುರ್ವಿಂಶತಿರೂಪಗಳಲ್ಲಿ ಒಂದಾದ ಪುರುಷೋತ್ತಮರೂಪ ಎಂಬುದು ವಿಶೇಷ. ಶ್ರೀಮದಾಚಾರ್ಯರ ತಂತ್ರಸಾರಸಂಗ್ರಹಾದಿ ಗ್ರಂಥಗಳಲ್ಲಿ ಬಂದಿರುವಂತೆ ಪುರು-ಷೋತ್ತಮರೂಪವು ಮೇಲಿನ ಬಲಗೈಯಲ್ಲಿ ಪದ್ಮ ಕೆಳಬಲಗೈಯಲ್ಲಿ ಚಕ್ರ, ಮೇಲಿನ ಎಡಗೈಯಲ್ಲಿ ಶಂಖ ಹಾಗೂ ಕೆಳಗಿನ ಎಡಗೈಯಲ್ಲಿ ಗದೆಗಳನ್ನು ಹಿಡಿದಿರುವ ರೂಪ ಎಂದು ತಿಳಿಯಬೇಕು.

ಪುರುಷೋತ್ತಮರೂಪದ ಸ್ತುತಿಪರವಾದ ಕೆಲವು ವಚನಗಳು ಹೀಗಿವೆ:

ಅಧಿಕ ಬಂಧಂ ರಂಧಯ ಬೋಧಾಚ್ಛಿಂಧಿ ಪಿಧಾನಂ ಬಂಧುರಮದ್ಧಾ।

– ಶ್ರೀಮದಾನಂದತೀರ್ಥರು (ದ್ವಾದಶಸ್ತೋತ್ರ)

ದೇವೇಶಃ ಪುರುಷೋತ್ತಮೋಽರಿಕಮಲಃ ಶಂಖೀ ಗದೀ ಸದ್ವಪುಃ ... ।

– ಶ್ರೀವಾದಿರಾಜಸ್ವಾಮಿಗಳು (ಕೇಶವಾದಿಸ್ತುತಿ)

ಪದ್ಮಶಂಖಗದಾಚಕ್ರಧಾರ್ಯರ್ವೇತ್ ಪುರುಷೋತ್ತಮಃ।
ಪುರುಷೋತ್ತಮರಾಮಾಽಸ್ತು ನಂದಾಽಽನಂದವರಪ್ರದಾ ॥

– ಶ್ರೀಸುಮತೀಂದ್ರತೀರ್ಥರು (ಕೇಶವಾದಿಚತುರ್ವಿಂಶತಿಮೂರ್ತಿಲಕ್ಷಣಸ್ತುತಿ)

ಶ್ರೀಹರಿದಾಸರ ಅನೇಕ ಕೃತಿಗಳಲ್ಲಿ ಶ್ರೀಕೇಶವಾದಿರೂಪಗಳ ಸ್ತವನ ಬಂದಿದ್ದು ಅವುಗಳಲ್ಲಿ ಕೆಲವು ಹೀಗಿವೆ :

ಪುರುಷೋತ್ತಮಗಾರು ಸಾಟಿ ಪರಬ್ರಹ್ಮಸ್ವರೂಪಿಯೆ ನಿನಗಾರೊ ಪೋಟಿ
ಮಹಿಮೆ ಕೇಳಿದರೊಂದು ಕೋಟಿ ನಿನ್ನ ಹೃದಯದಿ ಬ್ರಹ್ಮಾಂಡ ಕಂಡ ಕಿರೀಟಿ ॥

– ಶ್ರೀಪುರಂದರದಾಸರು

ಹರುಷದಿಂದ ನಿನ್ನ ನಾಮ – ಸ್ಮರಿಸುವಂತೆ ಮಾಡು ಪ್ರೇಮ
ಇರಿಸು ನಿನ್ನ ಚರಣದಲ್ಲಿ – ಪುರುಷೋತ್ತಮ ॥ – ಶ್ರೀಕನಕದಾಸರು

ಪುಣ್ಯಕ್ಷೇತ್ರದಲ್ಲಿ ಪುರುಷೋತ್ತಮನಿದ್ದಾನೆ – ರಾಮರಾಮ
ಪುಣ್ಯಕ್ಷೇತ್ರವ ಕಂಡೆ ಪುರುಷೋತ್ತಮನ ದಯದಿ – ರಾಮರಾಮ ॥

– ಶ್ರೀವಿಜಯದಾಸರು

★★★★★

॥ ಶ್ರೀಕೃಷ್ಣಾರ್ಪಣಮಸ್ತು ॥

ಸಮರ್ಪಿತಂ ಮಯಾ ಭವೇತ್ ಸುಮಧ್ವಸುತ್ತವಾಣಿನಾ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

★★★★★

ಪರಿಶಿಷ್ಟ-೧

ಅಪೂಪದಾನ ಸಂಕಲ್ಪವಿಧಿ

ಆಚಮ್ಯ, ಪ್ರಾಣಾನಾಯಮ್ಯ, ದೇಶಕಾಲೌ ಸಂಕೀರ್ತ್ಯ, ಏವಂಗುಣವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಶ್ರುತಿಸ್ಮೃತಿಪುರಾಣೋಕ್ತಸಕಲಫಲಪ್ರಾಪ್ತ್ಯರ್ಥಂ ವಸು-ರುದ್ರ-ಆದಿತ್ಯ-ಪ್ರಜಾಪತಿ-ವಷಟ್ಕಾರಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಮಾಸನಿಯಾಮಕಶ್ರೀಪುರುಷೋತ್ತಮಪ್ರೇರಣಯಾ, ಶ್ರೀಪುರುಷೋತ್ತಮಪ್ರೀತ್ಯರ್ಥಂ ಮಮನಿಖಿಲಪಾಪಶಮನಪೂರ್ವಕಪುತ್ರಪೌತ್ರಧನಧಾನ್ಯಾದಿಕ್ಷೇಮಸಮೃದ್ಧಿಲೋಕದ್ವಯ-ಸುಖಹೇತುಭೂತಭೂದಾನಾದಿಸಕಲಫಲಾವಾಪ್ತಯೇ ವಿಶೇಷತಃ ಜ್ಞಾನಭಕ್ತಿವೈರಾಗ್ಯ-ಸಿದ್ಧ್ಯರ್ಥಂ ಶ್ರೀಹರಿಗುರುಪ್ರಸಾದಸಿದ್ಧ್ಯರ್ಥಂ ಅಪೂಪಚ್ಛಿದ್ರಸಮಸಂಖ್ಯವರ್ಷ-ಸಹಸ್ರಾವಧಿಸ್ವರ್ಲೋಕನಿವಾಸಸಿದ್ಧ್ಯರ್ಥಂ ಮಲಮಾಸಪ್ರಯುಕ್ತತ್ರಯಸ್ತ್ರಿಂಶತ್‌ಸಂಖ್ಯಾಕ-ಅಪೂಪದಾನಮಹಂ ಕರಿಷ್ಯೇ । ತದಂಗಭೂತಪುರುಷೋತ್ತಮಪೂಜಾಂ ಕರಿಷ್ಯೇ ॥

ಮಂಡಲವನ್ನು ಮಾಡಿ ಯಥಾಶಕ್ತಿ ಹೊಸ ಕಂಚಿನ ಪಾತ್ರೆಯಲ್ಲಿ ೩೩ ಅಪೂಪಗಳನ್ನಿರಿಸಿ ಅದರ ಮೇಲೆ ಹೊಸ ತಟ್ಟೆಯನ್ನು ಮುಚ್ಚಿ, ರೇಷ್ಮೆ ವಸ್ತ್ರಗಳನ್ನು ಹೊದಿಸಿ ಬ್ರಾಹ್ಮಣನಲ್ಲಿ ಶ್ರೀಪುರುಷೋತ್ತಮರೂಪ ಶ್ರೀಹರಿಯನ್ನು ಚಿಂತಿಸಿ ಯಥೋಪಚಾರ ಪೂಜೆ ಸಲ್ಲಿಸಿ ಈ ಕೆಳಗೆ ತಿಳಿಸಿರುವಂತೆ ವಸ್ವಾದ್ಯಂತರ್ಗತ ಭಗವದ್ರೂಪಗಳನ್ನು ಚಿಂತಿಸಿ ಪೂಜಿಸಬೇಕು :

೧. ದ್ರೋಣಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಿಷ್ಣವೇ ನಮಃ
೨. ಧ್ರುವಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಜಿಷ್ಣವೇ ನಮಃ
೩. ದೋಷಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮಹಾವಿಷ್ಣವೇ ನಮಃ
೪. ಅರ್ಕಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಹರಯೇ ನಮಃ
೫. ಅಗ್ನ್ಯಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾಯ ನಮಃ
೬. 'ದ್ಯು' ಅಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಅಧೋಕ್ಷಜಾಯ ನಮಃ
೭. ಪ್ರಾಣಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಕೇಶವಾಯ ನಮಃ
೮. ವಿಭಾವಸ್ವಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮಾಧವಾಯ ನಮಃ
೯. ಭೀಮಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀರಾಮಾಯ ನಮಃ
೧೦. ರೈವತಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಅಚ್ಯುತಾಯ ನಮಃ
೧೧. ಓಜಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಪುರುಷೋತ್ತಮಾಯ ನಮಃ
೧೨. ಅಜೈಕಪಾದಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಗೋವಿಂದಾಯ ನಮಃ
೧೩. ಮಹಾನಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಾಮನಾಯ ನಮಃ
೧೪. ಬಹುರೂಪಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಶ್ರೀಶಾಯ ನಮಃ

೧೫. ಭವಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಕಂಠಾಯ ನಮಃ
೧೬. ವಾಮದೇವಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಿಶ್ವಸಾಕ್ಷಿಣೇ ನಮಃ
೧೭. ಉಗ್ರಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀನಾರಾಯಣಾಯ ನಮಃ
೧೮. ವೃಷಾಕಪ್ಯಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮಧುರಿಪವೇ ನಮಃ
೧೯ ಅಹಿರ್ಬುಧ್ನ್ಯಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಅನಿರುದ್ಧಾಯ ನಮಃ
೨೦. ವಿವಸ್ವದಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀತ್ರಿವಿಕ್ರಮಾಯ ನಮಃ
೨೧. ಅರ್ಯಮಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಾಸುದೇವಾಯ ನಮಃ
೨೨. ಪೂಷಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಜಗದ್ಯೋನಯೇ ನಮಃ
೨೩. ತ್ವಷ್ಟ್ರಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಅನಂತಾಯ ನಮಃ
೨೪. ಸವಿತ್ರಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಶೇಷಶಾಯಿನೇ ನಮಃ
೨೫. ಭರ್ಗಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಸಂಕರ್ಷಣಾಯ ನಮಃ
೨೬. ಧಾತ್ರಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಪ್ರದ್ಯುಮ್ನಾಯ ನಮಃ
೨೭. ಪರ್ಜನ್ಯಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀದೈತ್ಯಾರಯೇ ನಮಃ
೨೮. ವರುಣಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಿಶ್ವತೋಮುಖಾಯ ನಮಃ
೨೯. ಮಿತ್ರಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಜನಾರ್ದನಾಯ ನಮಃ
೩೦. ಶಕ್ರಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಧರಾವಾಸಾಯ ನಮಃ
೩೧. ಉರುಕ್ರಮಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀದಾಮೋದರಾಯ ನಮಃ
೩೨. ಪ್ರಜಾಪತ್ಯಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಅಘಾರ್ದನಾಯ ನಮಃ
೩೩. ವಷಟ್ಕಾರಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಪತಯೇ ನಮಃ

ಪುರುಷೋತ್ತಮ ಪ್ರಾರ್ಥನಾಮಂತ್ರಃ

ಚಂದ್ರಾಂಶುನಿರ್ಮಲಾಽಪೂಪಾಃ ಶಾಲಿಗೋಧೂಮನಿರ್ಮಿತಾಃ ।
ಆಹಾರಃ ಸರ್ವದೇವಾನಾಂ ತೇ ಮೇ ಕುರ್ವಂತು ಮಂಗಲಮ್ ॥
ವಿಷ್ಣುರೂಪೀ ಸಹಸ್ರಾಂಶುಃ ಸರ್ವಪಾಪಪ್ರಣಾಶನಃ ।
ಅಪೂಪಾನ್ನಪ್ರದಾನೇನ ಮಮ ಪಾಪಂ ವ್ಯಪೋಹತು ॥
ಕುರುಕ್ಷೇತ್ರಮಯೋ ದೇಶಃ ಕಾಲಃ ಪರ್ವ ದ್ವಿಜೋ ಹರಿಃ ।
ಪೃಥ್ವೀಸಮಮಿದಂ ದಾನಂ ಗೃಹಾಣ ಪುರುಷೋತ್ತಮ ॥
ಮಲಾನಾಂ ಚ ವಿಶುದ್ಧ್ಯರ್ಥಂ ಪಾಪಪ್ರಶಮನಾಯ ಚ ।
ಪುತ್ರಪೌತ್ರಾದಿವೃದ್ಧ್ಯರ್ಥಂ ತೇನ ದಾಸ್ಯಾಮಿ ಭಾಸ್ಕರ ॥
ನಾರಾಯಣ ಜಗದ್ಬೀಜ ಭಾಸ್ಕರಪ್ರತಿರೂಪಧೃಕ್ ।
ವ್ರತೇನಾನೇನ ಪುತ್ರಾಂಶ್ಚ ಸಂಪದಂ ಚಾಭಿವರ್ಧಯ ॥

ಯಸ್ಯ ಹಸ್ತೇ ಗದಾ ಚಕ್ರೋ ಗರುಡೋ ಯಸ್ಯ ವಾಹನಮ್ ।
ಶಂಖಃ ಕರತಲೇ ಯಸ್ಯ ಸ ಮೇ ವಿಷ್ಣುಃ ಪ್ರಸೀದತು ॥
ಕಲಾಕಾಷ್ಠಾದಿರೂಪೇಣ ನಿಮೇಷಘಟಿಕಾದಿನಾ ।
ಯೋ ವಂಚಯತಿ ಭೂತಾನಿ ತಸ್ಮೈ ಕಾಲಾತ್ಮನೇ ನಮಃ ॥

ಭಗವದ್ರೂಪಚಿಂತನ ಮಂತ್ರಃ

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಹರಿಂ ಕೃಷ್ಣಮಧೋಕ್ಷಜಮ್ ।
ಕೇಶವಂ ಮಾಧವಂ ರಾಮಮಚ್ಯುತಂ ಪುರುಷೋತ್ತಮಮ್ ॥
ಗೋವಿಂದಂ ವಾಮನಂ ಶ್ರೀಶಂ ಶ್ರೀಕಂಠಂ ವಿಶ್ವಸಾಕ್ಷಿಣಮ್ ।
ನಾರಾಯಣಂ ಮಧುರಿಪುಮನಿರುದ್ಧಂ ತ್ರಿವಿಕ್ರಮಮ್ ॥
ವಾಸುದೇವಂ ಜಗದ್ಯೋನಿಮನಂತಂ ಶೇಷಶಾಯಿನಮ್ ।
ಸಂಕರ್ಷಣಂ ಚ ಪ್ರದ್ಯುಮ್ನಂ ದೈತ್ಯಾರಿಂ ವಿಶ್ವತೋಮುಖಮ್ ॥
ಜನಾರ್ದನಂ ಧರಾವಾಸಂ ದಾಮೋದರಮಘಾರ್ದನಮ್ ।
ಶ್ರೀಪತಿಂ ಚ ತ್ರಯಸ್ತ್ರಿಂಶದುದ್ದಿಶ್ಯ ಪ್ರತಿನಾಮಭಿಃ ॥
ಮಂತ್ರೈರೇತೈಶ್ಚ ಯೋ ದದ್ಯಾತ್ ತ್ರಯಸ್ತ್ರಿಂಶದಪೂಪಕಮ್ ।
ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರಪೌತ್ರಾದಿಸಂತತಿಮ್ ॥

ಇದಂ ಸೋಪಸ್ಕರಂ ತ್ರಯಂಸ್ತ್ರಿಂಶದಪೂಪಂ ಸದಕ್ಷಿಣಾಕಂ, ಸತಾಂಬೂಲಂ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಪುರುಷೋತ್ತಮಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ ನ ಮಮ ನ ಮಮ ॥

ಸಾಜ್ಯಂ ಚ ಸಗುಡಂ ಚೈವ ತ್ರಯಸ್ತ್ರಿಂಶದಪೂಪಕಮ್ ।
ಪ್ರಾಣಿನಾಂ ಪ್ರೀಣನಾರ್ಥಾಯ ತಸ್ಮೈ ಕಾಲಾತ್ಮನೇ ನಮಃ ॥
ಮಲಾನಾಂ ಚೈವ ಶುದ್ಧ್ಯರ್ಥಂ ಪಾಪಪ್ರಶಮನಾಯ ಚ ।
ಪುತ್ರಪೌತ್ರಾಭಿವೃದ್ಧ್ಯರ್ಥಂ ತವ ದಾಸ್ಯಾಮಿ ಭಾಸ್ಕರ ॥
ಅಧಿಮಾಸೇ ತು ಸಂಪ್ರಾಪ್ತೇ ಪಾತ್ರೇ ದತ್ತಂ ಜನಾರ್ದನ ।
ತ್ವಾಮುದ್ದಿಶ್ಯ ಸುರಾಧ್ಯಕ್ಷ ಪ್ರಸೀದ ಪುರುಷೋತ್ತಮ ॥
ಯೇನಾಕ್ರಾಂತಾಸ್ತ್ರಯೋ ಲೋಕಾ ದಾನವಾಶ್ಚ ವಶೀಕೃತಾಃ ।
ಶರಣ್ಯಂ ಸರ್ವಭೂತಾನಾಂ ಸ ಮೇ ವಿಷ್ಣುಃ ಪ್ರಸೀದತು ॥

- ಪ.ಪು. (೧೭/೮,೧೧,೧೨)

ಅನೇನ ತ್ರಯಂಸ್ತ್ರಿಂಶದಪೂಪದಾನೇನ ಶ್ರೀಪುರುಷೋತ್ತಮಃ ಪ್ರೀಯತಾಂ ಪ್ರೀತೋ ವರದೋ ಭವತು ॥

॥ಶ್ರೀಕೃಷ್ಣಾರ್ಪಣಮಸ್ತು॥

ಅಧಿಕಮಾಸಮಾಹಾತ್ಮ್ಯದ ಕಥೆಗಳು

೧. ದೃಢಧನ್ವನ ಕಥೆ

ಹೈಹಯ ದೇಶದಲ್ಲಿ ಚಿತ್ರಧರ್ಮ ಎಂಬ ರಾಜನಿದ್ದ. ಅವನು ಧೀಮಂತ, ಸತ್ಯಪರಾಕ್ರಮ. ದೃಢಧನ್ವ ಎಂಬವನು ಅವನ ಪುತ್ರ. ಸಕಲಗುಣಸಂಪನ್ನನೂ, ಸತ್ಯಧರ್ಮನೂ, ಧಾರ್ಮಿಕನೂ, ನಿರ್ಮಲನೂ ಆಗಿದ್ದ ಪುಣ್ಯಶಾಲಿ. ಗುಣದಂತೆ ರೂಪದಲ್ಲೂ ಲಕ್ಷಣವಂತ; ಏಕಪಾಠಿಯಾಗಿ ಸಕಲಶಾಸ್ತ್ರಗಳನ್ನು ಗುರುಮುಖೇನ ಅಧ್ಯಯನ ಮಾಡಿದವನಾಗಿದ್ದ. ಮಗನ ಸಾಧನೆಗೆ ಹೆಮ್ಮೆಪಟ್ಟ ತಂದೆ ಚಿತ್ರಧರ್ಮ ಅವನಿಗೆ ರಾಜ್ಯಭಾರವನ್ನು ಒಪ್ಪಿಸಿ ವಿರಕ್ತನಾಗಿ ಪುಲಹಾಶ್ರಮಕ್ಕೆ ತೆರಳಿದ. ಅಲ್ಲಿ ತಪಸ್ಸನ್ನಾಚರಿಸಿ ಶ್ರೀಕೃಷ್ಣನನ್ನು ವಿಶೇಷವಾಗಿ ಧ್ಯಾನಿಸಿ, ಸ್ವಲ್ಪಕಾಲ ತಪಸ್ಸನ್ನಾಚರಿಸಿ ಶ್ರೀಹರಿಮಂದಿರಕ್ಕೆ ತೆರಳಿದ.

ದೃಢಧನ್ವ ರಾಜನಾಗಿ ತಂದೆಗೆ ತಕ್ಕ ಮಗನೆನ್ನಿಸಿ ಉತ್ತಮರೀತಿಯಲ್ಲಿ ರಾಜ್ಯಭಾರ ಮಾಡಿದ. ಪುಷ್ಕರಾದೇಶ ಎಂಬ ಪುಣ್ಯಸ್ಥಳ ಅವನ ರಾಜಧಾನಿಯಾಗಿತ್ತು. ಅವನ ಪತ್ನಿ ಸುಶೀಲೆಯಾದ ಗುಣಸುಂದರಿ ಎಂಬುವವಳು. ವಿದರ್ಭದೇಶದ ರಾಜಕುಮಾರಿಯಾದ ಅವಳು ಅಪ್ರತಿಮ ಸುಂದರಿಯೂ ಆಗಿದ್ದಳು. ಅವರಿಬ್ಬರಿಗೆ ಚಿತ್ರವಾಕ್, ಚಿತ್ರವಾಹ, ಮಣಿಮಾನ್ ಹಾಗೂ ಚಿತ್ರಕುಂಡಲ ಎಂಬ ನಾಲ್ವರು ಪುತ್ರರು ಮತ್ತು ಚಾರುಮತಿ ಎಂಬ ಒಬ್ಬ ಪುತ್ರಿಯೂ ಜನಿಸಿದರು. ಅನೇಕಗುಣಗಳಿಂದ ಭೂಷಿತನಾದ ದೃಢಧನ್ವ ತನಗೆ ಸಕಲವಿಧವಾದ ಭೋಗಭಾಗ್ಯಗಳೆಲ್ಲ ಲಭಿಸಿದ್ದಕ್ಕೆ ತುಂಬ ಸಂತೋಷಿಸಿದ. ಅಂತಹ ಸಮೃದ್ಧ ಜೀವನಕ್ಕೆ ತಾನು ಹಿಂದೆ ಎಂತಹ ಪುಣ್ಯ ಮಾಡಿದ್ದಿರಬಹುದು ಎಂದು ಯೋಚಿಸಿದ. ಆಗೊಮ್ಮೆ ಪ್ರಾತರಾಹ್ನಿಕವನ್ನು ಪೂರೈಸಿ ಬೇಟೆಗೆಂದು ಅವನು ತೆರಳಿದ್ದಾಗ ವಿಶೇಷ ಘಟನೆಯೊಂದು ನಡೆಯಿತು. ಅವನು ಜಿಂಕೆಯೊಂದಕ್ಕೆ ಬಾಣಪ್ರಯೋಗ ಮಾಡಿದಾಗ ತಾಗಿದ ಬಾಣದೊಂದಿಗೆ ಆ ಜಿಂಕೆ ಕಣ್ಣಿಗೆ ಕಾಣದಂತೆ ಮರೆಯಾಯಿತು. ಅದನ್ನು ಹುಡುಕುತ್ತ ತುಂಬ ಆಯಾಸಗೊಂಡ ರಾಜ ಸರೋವರವೊಂದರಲ್ಲಿ ನೀರನ್ನು ಕುಡಿದು ಅದರ ತೀರದಲ್ಲಿದ್ದ ಒಂದು ದೊಡ್ಡ ಆಲದಮರದ ನೆರಳಿನಲ್ಲಿ ವಿಶ್ರಾಂತಿಗೆಂದು ಕುಳಿತುಕೊಂಡ. ಇದ್ದಕ್ಕಿದ್ದಂತೆ ಅಲ್ಲಿಗೆ ತುಂಬ ಮನೋಹರವಾಗಿದ್ದ ಗಿಳಿಯೊಂದು ಆಗಮಿಸಿ ರಾಜನನ್ನು ಕುರಿತು ಒಂದು ಶ್ಲೋಕವನ್ನು ಉಚ್ಚರಿಸಿತು :

ವಿದ್ಯಮಾನಾತುಲಸುಖಮಾಲೋತ್ಯಾತೀವ ಭೂತಲೇ ।
ನ ಚಿಂತಯಸಿ ತತ್ತ್ವಂ ತ್ವಂ ತತ್ಕಥಂ ಪಾರಮೇಶ್ಯಸಿ ॥

(ಭೂಮಿಯ ಮೇಲಿನ ಅತುಲವಾದ ಸುಖದಲ್ಲಿ ಮೈಮರೆತು ತತ್ತ್ವಚಿಂತನೆಯನ್ನು ದೂರಮಾಡಿರುವ ನೀನು ಈ ಸಂಸಾರದಿಂದ ಎಂತು ಪಾರಾಗುವಿ?)

ಅದು ಅನೇಕಬಾರಿ ಈ ಶ್ಲೋಕವನ್ನು ಉಚ್ಚರಿಸತೊಡಗಿದಾಗ ರಾಜನಿಗೆ ಆ ಬಗ್ಗೆ ವಿಶೇಷ ಕುತೂಹಲ ಮೂಡಿತು : ''ಈ ಗಿಳಿ ಯಾವುದು? ಪರೀಕ್ಷಿತ್ ರಾಜನನ್ನು ಉದ್ಧರಿಸಲು ಆಗಮಿಸಿದ ಶುಕಮುನಿಗಳಂತೆ ನನ್ನನ್ನು ಉದ್ಧರಿಸಲು ಬಂದಿರುವಂತಿದೆಯಲ್ಲ'' ಅವನು ಹೀಗೆ ಚಿಂತಿಸುತ್ತಿದ್ದಂತೆಯೇ ಆ ಗಿಳಿ ಮರೆಯಾಗಿ ಹೋಯಿತು. ಆ ಬಗ್ಗೆ ಚಿಂತಿಸುತ್ತಲೇ ರಾಜ ರಾಜಧಾನಿಗೆ ಮರಳಿದ. ಅವನ ಚಿಂತಾಕ್ರಾಂತವಾದ ಮುಖವನ್ನು ಕಂಡು ಪತ್ನಿ ಗುಣಸುಂದರಿಯು ಬಗೆಬಗೆಯಲ್ಲಿ ಪ್ರಶ್ನಿಸಿದಳು. ಅದಕ್ಕೆ ಉತ್ತರ ನೀಡದ ರಾಜ ಚಿಂತೆಯಲ್ಲೇ ಕಾಲಕಳೆಯತೊಡಗಿದ.

ಆಗೊಮ್ಮೆ ರಾಮಾಯಣ ರಚಿಸಿದ ಮಹಾಮುನಿಗಳಾದ ವಾಲ್ಮೀಕಿಮುನಿಗಳು ಅವನ ಬಳಿಗೆ ಆಗಮಿಸಿದರು. ಅವನಿಂದ ಪೂಜಿತರಾದ ಅವರು ಅವನ ಕುಶಲವನ್ನು ವಿಚಾರಿಸಿದರು. ಅದಕ್ಕೆ ರಾಜ ಆ ಗಿಳಿಯ ಪ್ರಸಂಗವನ್ನು ವಿವರಿಸಿ ಅದರ ಬಗ್ಗೆ ವಿವರಗಳನ್ನು ತಿಳಿಯಬಯಸಿದ. ಕೂಡಲೇ ವಾಲ್ಮೀಕಿಮುನಿಗಳು ಒಂದುಕ್ಷಣ ಧ್ಯಾನಿಸಿ ಅವನಿಗೆ ಉತ್ತರಿಸಿದರು.

''ನೋಡು ರಾಜ, ನೀನು ಹಿಂದಿನ ಜನ್ಮದಲ್ಲಿ ತಾಮ್ರಪರ್ಣೀತೀರದ ದ್ರವಿಡ ದೇಶದಲ್ಲಿ ಸುದೇವ ಎಂಬ ಬ್ರಾಹ್ಮಣನಾಗಿ ಜನಿಸಿದ್ದೆ. ಧಾರ್ಮಿಕನೂ, ಸತ್ಯವಾದಿಯೂ, ಯದೃಚ್ಛಾಲಾಭಸಂತುಷ್ಟನೂ ಆಗಿ ವಿಶೇಷರೀತಿಯಲ್ಲಿ ಶ್ರೀಹರಿಯನ್ನು ಆರಾಧನೆ ಮಾಡುತ್ತಿದ್ದೆ. ಗೌತಮ ಎಂಬುವರ ಪುತ್ರಿಯಾದ ಗೌತಮೀ ಎಂಬುವವಳು ನಿನ್ನ ಪತ್ನಿಯಾಗಿದ್ದಳು. ಅನುರೂಪದಂಪತಿಗಳಾಗಿದ್ದ ನಿಮಗೆ ಇತರ ಎಲ್ಲ ಸಂಪತ್ತು ಲಭಿಸಿದ್ದರೂ ಸಂತತಿ ಮಾತ್ರ ಆಗಿರಲಿಲ್ಲ. ಆ ಚಿಂತೆಯಲ್ಲೇ ನೀವಿಬ್ಬರೂ ತಾಮ್ರಪರ್ಣೀ ನದಿಯಲ್ಲಿ ಮಿಂದು ವಿಶೇಷವಾಗಿ ಶ್ರೀಹರಿಯ ಆರಾಧನೆಗೆಂದು ತಪಸ್ಸಿಗೆ ತೊಡಗಿದಿರಿ. ಪ್ರತಿ ಐದು ದಿವಸಕ್ಕೊಮ್ಮೆ ಒಣಗಿದ ಎಲೆ, ಸ್ವಲ್ಪ ನೀರು ಇಷ್ಟನ್ನು ಮಾತ್ರ ಸ್ವೀಕರಿಸುತ್ತ ಒಟ್ಟು ನಾಲ್ಕು ವರ್ಷಗಳ ಕಾಲ ತಪಸ್ಸನ್ನು ಆಚರಿಸಿದಿರಿ''.

''ನಿಮ್ಮ ತಪಸ್ಸಿಗೆ ಮೆಚ್ಚಿ ಶ್ರೀಹರಿ ಗರುಡಾರೂಢನಾಗಿ ದರ್ಶನ ನೀಡಿದ. ಸಂತತಿಗಾಗಿ ನೀವು ಪ್ರಾರ್ಥಿಸಿಕೊಂಡಾಗ ಆ ಭಾಗ್ಯ ನಿಮಗಿಲ್ಲವೆಂದು ಅವನು ತಿಳಿಸಿದ. ಚಿಂತಾಕ್ರಾಂತರಾದ ನಿಮ್ಮನ್ನು ಕಂಡು ಗರುಡ ನಿಮ್ಮ ಪರವಾಗಿ ಶ್ರೀಹರಿಯನ್ನು ಪ್ರಾರ್ಥಿಸಿ ಒಬ್ಬ ಪುತ್ರನನ್ನು ನೀಡುವಂತೆ ಕೇಳಿಕೊಂಡ. ಅದಕ್ಕೆ ನಾರಾಯಣನ ಸಮ್ಮತಿ ಲಭಿಸಿತು. ಅದರಂತೆ ಮುಂದೆ ಒಬ್ಬ ಲಕ್ಷಣವಂತನಾದ ಪುತ್ರ ಅವರಿಗೆ ಜನಿಸಿದ. ಅವನಿಗೆ ನೀವು ಶುಕದೇವ ಎಂದು ನಾಮಕರಣ ಮಾಡಿದಿರಿ. ಸಕಾಲದಲ್ಲಿ ಉಪನಯನವು ಪೂರೈಸಿ, ಏಕಪಾಠೀ ಎನ್ನಿಸಿ ಗುರುಮುಖೇನ ಸಕಲಶಾಸ್ತ್ರಗಳನ್ನು ಅಧ್ಯಯನ ಮಾಡಿದ. ಆಗೊಮ್ಮೆ ಮಹಾತಪಸ್ವಿಗಳಾದ ದೇವಲ ಎಂಬ ಮುನಿ ನಿಮ್ಮ ಬಳಿಗೆ ಆಗಮಿಸಿದರು. ಶುಕದೇವನನ್ನು

ನೋಡಿ ಅವರು ಅವನ ಬಗ್ಗೆ ಬಹಳವಾಗಿ ಪ್ರಶಂಸಿಸಿ ಒಂದು ಮಾತನ್ನು ಹೇಳಿದರು : 'ಇವನು ಇಷ್ಟು ಲಕ್ಷಣವಂತನಾಗಿದ್ದರೂ ಹನ್ನೆರಡನೆಯ ವರ್ಷದಲ್ಲಿ ನೀರಿನಲ್ಲಿ ಮುಳುಗಿ ಮರಣಹೊಂದುವನು'. ಇದನ್ನು ಕೇಳಿದ ನಿಮ್ಮಿಬ್ಬರ ದುಃಖಕ್ಕೆ ಕೊನೆಯಿಲ್ಲದಾಯಿತು.''

''ಮುಂದೆ ಬಾಲಕನಿಗೆ ಹನ್ನೆರಡನೆಯ ವರ್ಷ ನಡೆಯುತ್ತಿತ್ತು. ಆಗ ಸುದೇವ ಸಮಿತ್ತು, ದರ್ಭೆಗಳನ್ನು ತರಲೆಂದು ಕಾಡಿಗೆ ತೆರಳಿದ್ದಾಗ ಶುಕದೇವ ತನ್ನ ಗೆಳೆಯರೊಂದಿಗೆ ಬಾವಿಯೊಂದಕ್ಕೆ ತೆರಳಿ ಜಲಕ್ರೀಡೆಯಲ್ಲಿ ತೊಡಗಿದ. ವಿಧಿಯ ಪ್ರೇರಣೆಗೆ ಅಡ್ಡಿ ಯಾವುದು? ಅವನಿಗೆ ಆ ಬಾವಿಯಲ್ಲೇ ಮೃತ್ಯು ಕಾದಿತ್ತು. ಈಜುತ್ತಲೇ ಸ್ಪರ್ಧೆಗೆಂದು ಆಳಕ್ಕೆ ಮುಳುಗಿದ ಅವನು ಮೇಲೇಳಲಿಲ್ಲ. ವಿಷಯ ತಿಳಿದ ನೀವು ಬಹಳವಾಗಿ ರೋದಿಸುತ್ತ ಅವನ ಕಳೇಬರದ ಬಳಿಗೆ ತೆರಳಿದಿರಿ. ಜನರು ಎಷ್ಟು ಸಮಾಧಾನಪಡಿಸಿದರೂ ನಿಮ್ಮ ಶೋಕ ನಿಲ್ಲಲಿಲ್ಲ. ಆಗ ಇದ್ದಕ್ಕಿದ್ದಂತೆಯೇ ಗಗನದಲ್ಲಿ ಮೋಡಕವಿದು ಬಿರುಗಾಳಿ ಬೀಸತೊಡಗಿತು. ಭಯಂಕರವಾದ ಮಳೆ ಸುರಿಯತೊಡಗಿತು. ಪುತ್ರನ ಶವವನ್ನು ಬಿಡಲಾಗದ ನೀವು ಅಲ್ಲಿಯೇ ಕುಳಿತು ರೋದಿಸತೊಡಗಿದಿರಿ. ಒಂದುತಿಂಗಳು ಹೀಗೆಯೇ ಕಳೆಯಿತು. ಕೂಡಲೇ ಶ್ರೀನಾರಾಯಣನು ನಿಮಗೆ ದರ್ಶನ ನೀಡಿದ. ಮರಣಿಸಿದ ಶುಕದೇವ ಪುನಃ ಬದುಕಿ ಹನ್ನೆರಡುಸಾವಿರ ವರ್ಷಗಳ ಕಾಲ ವಿಖ್ಯಾತನಾಗಿ ಜೀವಿಸುವಂತೆ ವರನೀಡಿದ. ಅಂತಹ ಅನುಗ್ರಹಕ್ಕೆ ಕಾರಣವನ್ನು ತಿಳಿಯಬಯಸಿದ ನಿಮಗೆ ಶ್ರೀಹರಿ ತಿಳಿಸಿದ. ನೀವು ಉಪವಾಸದಿಂದ ರೋದಿಸತೊಡಗಿದ ದಿನವೇ ಅಧಿಕಮಾಸ ಪ್ರಾರಂಭವಾಗಿತ್ತು. ಅಂದರೆ ಇಡೀ ತಿಂಗಳು ನೀವು ಮಳೆನೀರಿನಲ್ಲಿ ಮಾಡಿದ ಸ್ನಾನ ಅಧಿಕಮಾಸದ ಮಹಾಪರ್ವಕಾಲದ ಸ್ನಾನವಾಯಿತು. ಅದರಂತೆ ನೀವು ಮಾಡಿದ ಉಪವಾಸ ಮಹೋಪವಾಸವೆನ್ನಿಸಿದ ಮಹಾತಪಸ್ಸಾಯಿತು. ಅದರ ಫಲದಿಂದಾಗಿ ನಿಮಗೆ ಲಭಿಸಿದ ಪುಣ್ಯದಿಂದಾಗಿ ನಿನ್ನ ಪುತ್ರ ಇಷ್ಟು ಸುದೀರ್ಘಕಾಲದ ಜೀವಿತ ಪಡೆಯಲು ಸಾಧ್ಯವಾಯಿತು.''

''ಹಿಂದೊಮ್ಮೆ ಧನು ಎಂಬ ಮುನಿಶ್ರೇಷ್ಠನು ಇದ್ದನು. ಅವನ ಮಕ್ಕಳು ಹುಟ್ಟುತ್ತಲೇ ಸಾಯುತ್ತಿದ್ದರು. ಚಿರಾಯುವಾಗುವ ಪುತ್ರನನ್ನು ಪಡೆಯಲೆಂದು ಆ ಮುನಿ ಘೋರತಪಸ್ಸಿಗೆ ತೊಡಗಿದ. ಸಾವಿರ ವರ್ಷ ಪೂರೈಸುತ್ತಿದ್ದಂತೆ ದೇವತೆಗಳು ಆ ಮುನಿಗೆ ತಿಳಿಸಿದರು : 'ನಿನ್ನ ತಪಸ್ಸಿಗೆ ಮೆಚ್ಚಿರುವೆವು. ಬಯಸಿದ ವರವನ್ನು ಕೇಳಿಕೋ'. ಆ ಮುನಿ ಒಂದು ಬೆಟ್ಟವನ್ನು ತೋರಿಸಿ ಅದು ಇರುವವರೆಗೂ ಬದುಕುವ ಪುತ್ರನನ್ನು ಕೇಳಿಕೊಂಡ. ಅದರಂತೆ ವರನೀಡಿದ ದೇವತೆಗಳು ಅದೃಶ್ಯರಾದರು. ಅದರಂತೆ ಮುಂದೆ ಅವನಿಗೆ ಪುತ್ರನೊಬ್ಬ ಜನಿಸಿದ. ಅವನಿಗೆ ಎಷ್ಟು ತಿಳಿಹೇಳಿದರೂ ಸಾತ್ತ್ವಿಕಜೀವನ ಸಾಧ್ಯವಾಗಲಿಲ್ಲ. ಉನ್ಮತ್ತನಾದ ಅವನು ಮುನಿಗಳನ್ನು ಪೀಡಿಸತೊಡಗಿದ. ಆಗೊಮ್ಮೆ ಮಹಿಷ ಎಂಬ

ಕೋಪಿಷ್ಠನಾದ ಮುನಿ ಸಾಲಿಗ್ರಾಮಪೂಜೆಯಲ್ಲಿ ತೊಡಗಿದ್ದ. ಅಲ್ಲಿಗೆ ಧಾವಿಸಿದ ಇವನು ಆ ಸಾಲಿಗ್ರಾಮವನ್ನು ಎತ್ತಿಕೊಂಡು ಹೋಗಿ ನೀರು ತುಂಬಿದ ಬಾವಿಯಲ್ಲಿ ಎಸೆದು ಅಪಹಾಸ್ಯ ಮಾಡಿದ. ಕೋಪಗೊಂಡ ಮುನಿ ಅವನು ಕೂಡಲೇ ಸಾಯಲೆಂದು ಶಪಿಸಿದ. ಆದರೆ ವರಬಲ ಹೊಂದಿದ್ದ ಅವನು ಆ ಶಾಪಕ್ಕೆ ಸಾಯಲಿಲ್ಲ. ಧ್ಯಾನಸ್ಥನಾದ ಮುನಿಗೆ ಉಪಾಯ ಹೊಳೆಯಿತು. ಕೂಡಲೇ ಅವನ ನಿಟ್ಟುಸಿರಿನಿಂದ ಕೋಟಿಗಟ್ಟಲೇ ಕೋಣಗಳು ಪ್ರಕಟವಾಗಿ ಅಲ್ಲಿದ್ದ ದೊಡ್ಡ ಬೆಟ್ಟವನ್ನು ಪುಡಿಮಾಡಿದವು. ಕೂಡಲೇ ಉನ್ಮತ್ತನಾದ ಮುನಿಯ ಪುತ್ರ ಮರಣಿಸಿದ. ಹೀಗೆ ಹಠದಿಂದ ಪಡೆದ ಕಾರಣ ಅವನಿಗೆ ಪುತ್ರ ಜನಿಸಿದರೂ ಉಳಿದುಕೊಳ್ಳಲಿಲ್ಲ. ಆದರೆ ಅದರಂತೆ ನೀನೂ ಸಹ ಹಠದಿಂದಲೇ ಪುತ್ರನನ್ನು ಪಡೆದೆ. ಅಧಿಕಮಾಸದ ಸ್ನಾನ, ಉಪವಾಸಗಳ ಮಾಹಾತ್ಮ್ಯದಿಂದಾಗಿ ನಿನ್ನ ಪುತ್ರ ಮಹಾಸಾಧಕನಾಗಿ ದೀರ್ಘಾಯುವೂ ಆದ. ನೀನೂ ಸಹ ಮುಂದೆ ದೃಢಧನ್ವ ಎಂಬ ಹೆಸರಿನಿಂದ ಚಕ್ರವರ್ತಿಯಾಗಿ ಜನಿಸುವೆ. ಹತ್ತುಸಹಸ್ರವರ್ಷಗಳ ಕಾಲ ಸುಖದಿಂದ ರಾಜ್ಯವಾಳುವಿ. ಆಗಲೂ ಈ ಗೌತಮಿಯೇ ಗುಣಸುಂದರಿ ಎಂಬ ಹೆಸರಿನಿಂದ ನಿನ್ನ ಪತ್ನಿಯಾಗುವಳು. ಪುತ್ರ, ಪುತ್ರಿಯರು ಜನಿಸುವರು. ಸಕಲಸೌಭಾಗ್ಯಗಳಲ್ಲಿ ಮೈಮರೆತು ನೀನು ನನ್ನನ್ನು ಮರೆತಾಗ ಈ ನಿನ್ನ ಮಗ ಶುಕದೇವನೇ ಗಿಳಿರೂಪದಲ್ಲಿ ಬಂದು ನಿನಗೆ ವೈರಾಗ್ಯಕ್ಕೆ ಕಾರಣವಾಗುವ ಮಾತನ್ನು ತಿಳಿಸುವನು. ವಾಲ್ಮೀಕಿ ಮುನಿಗಳು ಬಂದು ನಿನಗೆ ತತ್ತ್ವೋಪದೇಶ ಮಾಡುವರು. ಆ ಬಳಿಕ ನೀನು ಸಪತ್ನೀಕನಾಗಿ ವೈಕುಂಠವನ್ನು ಪಡೆಯುವೆ.''

ಇದನ್ನೆಲ್ಲ ವಾಲ್ಮೀಕಿಮುನಿಗಳ ಮೂಲಕ ತಿಳಿದ ದೃಢಧನ್ವ ಆಶ್ಚರ್ಯಚಕಿತನಾಗಿ ತತ್ತ್ವಜ್ಞಾನದ ಸಂಪಾದನೆಗೆ ತೊಡಗಿ ಮುಂದೆ ಸದ್ಗತಿಯನ್ನು ಪಡೆದ. ಹೀಗೆ ಅಧಿಕಮಾಸದ ಸ್ನಾನ, ಉಪವಾಸಗಳು ಅವನ ಹಾಗೂ ಅವನ ಸಮಸ್ತವಂಶದ ಉದ್ಧಾರಕ್ಕೆ ಕಾರಣವಾಯಿತು. ಆದ್ದರಿಂದ ಅಧಿಕಮಾಸದ ಆಚರಣೆ, ಅದರಲ್ಲೂ ಸ್ನಾನ, ಉಪವಾಸಗಳು ಅತ್ಯಂತ ಮಹತ್ತ್ವಪೂರ್ಣವಾದ ಸಾಧನೆಗಳು ಎಂಬುದು ತಿಳಿಯುತ್ತದೆ.

೨. ಕದರ್ಯನ ಕಥೆ

ಕೇರಳ ದೇಶದಲ್ಲಿ ಒಬ್ಬ ಬ್ರಾಹ್ಮಣನಿದ್ದ. ಚಿತ್ರಶರ್ಮ ಎಂಬುದು ಅವನಿಗೆ ತಂದೆತಾಯಿಗಳಿರಿಸಿದ್ದ ಹೆಸರು. ಆದರೆ ಅವನು ಅಪಾರ ಶ್ರೀಮಂತನಾಗಿದ್ದರೂ ತುಂಬ ಜಿಪುಣನಾಗಿ ಬೆಳೆದನು. ಅದರಿಂದಾಗಿ ಕದರ್ಯ ಎಂದೇ ಜನ ಅವನನ್ನು ಕರೆಯತೊಡಗಿದ್ದರು. ಹೋಮ, ಹವನ, ಪಿತೃಕಾರ್ಯ, ದಾನ, ಕಾರ್ತಿಕಾದಿ ಮಾಸಗಳಲ್ಲಿ ಸ್ನಾನ, ದೀಪದಾನ, ವೈಶಾಖದಲ್ಲಿ ಧಾನ್ಯದಾನ, ವ್ಯತೀಪಾತದಲ್ಲಿ ಸುವರ್ಣದಾನ,

ವೈಧೃತಿಯಲ್ಲಿ ರಜತದಾನ, ಸೂರ್ಯ-ಚಂದ್ರ ಗ್ರಹಣಕಾಲದಲ್ಲಿ ಜಪ, ಮೊದಲಾದ ಯಾವ ಪುಣ್ಯಕಾರ್ಯಗಳನ್ನು ಅವನು ಮಾಡಿರಲಿಲ್ಲ. ಆದರ ಬದಲು ಕಂಡವರನ್ನು 'ದರಿದ್ರನಾದ ನನಗೆ ಏನಾದರೂ ನೀಡಿ' ಎಂದು ಸುಳ್ಳುಹೇಳಿ ಭಿಕ್ಷೆ ಬೇಡುತ್ತ ಬದುಕುತ್ತಿದ್ದನು. ಕೊನೆಗೊಮ್ಮೆ ಅಡವಿಯಲ್ಲಿ ನೆಲೆಸಿದ್ದ ಒಬ್ಬ ತೋಟದ ಮಾಲಿಯೊಂದಿಗೆ ಸ್ನೇಹ ಬೆಳೆಸಿ ಅವನ ಮುಂದೆಯೂ ತಾನು ದರಿದ್ರನೆಂಬಂತೆ ನಟಿಸಿ, ಹಣ ಕೀಳತೊಡಗಿದ. ಅವನ ತೋಟದ ಕಾರ್ಯದಲ್ಲಿ ಸಹಾಯ ಮಾಡುವ ನೆಪದಲ್ಲಿ ಅವನ ವಿಶ್ವಾಸವನ್ನು ಗಳಿಸಿದ. ಅವನಿಗೆ ನಂಬಿಕೆ ದ್ರೋಹ ಮಾಡಿ ತೋಟದಲ್ಲಿ ಬೆಳೆದ ಹಣ್ಣಗಳನ್ನು ಸಾಕಷ್ಟು ತಿಂದು ಉಳಿದವುಗಳನ್ನು ಮಾರಿ ಹಣಮಾಡತೊಡಗಿದ. ಹಣ್ಣುಗಳನ್ನು ಪಶುಪಕ್ಷಿಗಳು ತಿಂದು ಹೋದವೆಂದು ಸುಳ್ಳು ಹೇಳಿ ಯಜಮಾನನಿಗೆ ಮೋಸಮಾಡಿದ. ಹೀಗೆ ಒಟ್ಟು ಎಂಭತ್ತೇಳು ವರ್ಷ ವಯಸ್ಸಾಗುವವರೆಗೂ ಬದುಕಿ ಮುಂದೆ ಸಾವನ್ನಪ್ಪಿದ.

ಯಮದೂತರು ಅವನನ್ನು ಚಿತ್ರಹಿಂಸೆ ಮಾಡುತ್ತ ಯಮನ ಬಳಿಗೆ ಕರೆದೊಯ್ದರು. ಅವನು ಆಗ ತನ್ನ ಪಾಪಗಳಿಗಾಗಿ ಪರಿಪರಿಯಾಗಿ ಪರಿತಪಿಸಿದ. ಅವನ ಪಾಪಗಳನ್ನು ಪರಿಶೀಲಿಸಿ ಯಮದೇವ ಅವನಿಗೆ ಮೊದಲು ಪ್ರೇತಜನ್ಮ ಬಳಿಕ ಕಪಿಜನ್ಮ ಆ ಬಳಿಕ ಬಗೆಬಗೆಯ ನರಕಯಾತನೆ ಎಂಬುದಾಗಿ ಶಿಕ್ಷೆಯನ್ನು ಘೋಷಿಸಿದ. ಪ್ರೇತಯೋನಿಯನ್ನು ಪೂರೈಸಿದ ಅವನು ಬಳಿಕ ಕಪಿಯಾಗಿ ಜನಿಸಿದ. ಕಾಲಂಜರ ಎಂಬ ಬೆಟ್ಟದಲ್ಲಿ ನೆಲೆಸಿದ. ಅಲ್ಲಿಯ ಮೃಗತೀರ್ಥ ಎಂಬುದು ಅವನ ವಾಸಸ್ಥಾನವಾಯಿತು. ಅವನು ಹಿಂದಿನ ಜನ್ಮದಲ್ಲಿ ಚಿತ್ರಕುಂಡಲ ಹಾಗೂ ತಾರಕ ಎಂಬ ಶ್ರೀಮಂತ ದಂಪತಿಗಳು ಅಧಿಕಮಾಸದಲ್ಲಿ ಬಗೆಬಗೆಯ ವ್ರತಗಳನ್ನು ಪೂರೈಸಿ ಉದ್ಯಾಪನೆ ಮಾಡಿ ಯೋಗ್ಯರಾದ ಬ್ರಾಹ್ಮಣರಿಗೆ ಬಗೆಬಗೆಯ ದಾನಗಳನ್ನು ನೀಡಿದ ಪ್ರಸಂಗದಲ್ಲಿ ಅಲ್ಲಿಗೆ ತೆರಳಿದ್ದ ಈ ಕದರ್ಯ ಆ ಪುರುಷೋತ್ತಮಮಾಸದಂತಹ ಶ್ರೇಷ್ಠಮಾಸವನ್ನು ವೈಭವದಿಂದ ಶಾಸ್ತ್ರೋಕ್ತರೀತಿಯಲ್ಲಿ ಮಾಡಿದ್ದಕ್ಕೆ ಅಭಿನಂದಿಸಿದ ನಾಟಕ ಮಾಡಿ ತಾನು ದರಿದ್ರನೆಂದು ಸುಳ್ಳು ಹೇಳಿ ಯಾಚಿಸಿ ಧನವನ್ನು ಪಡೆದುಕೊಂಡ. ಹಾಗೆ ಆ ಮಹಾಶ್ರೇಷ್ಠಕಾರ್ಯದಲ್ಲಿ ಭಾಗವಹಿಸಿದ್ದ ಪುಣ್ಯ, ಪುರುಷೋತ್ತಮಮಾಸವನ್ನು ಕಪಟದಿಂದ ಪ್ರಶಂಸಿಸಿದ ಪುಣ್ಯಗಳಿಂದಾಗಿ ಅಂತಹ ಪುಣ್ಯಸ್ಥಳದಲ್ಲಿ ನೆಲೆಸುವ ಭಾಗ್ಯ ಅವನಿಗೆ ಲಭಿಸಿತು. ಕ್ರಮೇಣ ಪರ್ವತಪ್ರಾಯವಾಗಿ ಬೆಳೆದ ಆ ಕಪಿಗೆ ಒಮ್ಮೆ ಬಾಯಿಯಲ್ಲಿ ವ್ರಣವಾಗಿ ಏನನ್ನೂ ತಿನ್ನಲು ಸಾಧ್ಯವಾಗದಂತಾಯಿತು. ಹಸಿವು, ಬಾಯಾರಿಕೆಯಿಂದ ಬಳಲಿ ವೃಕ್ಷಗಳಿಂದ ಹಣ್ಣಗಳನ್ನು ಕಿತ್ತು ತಿನ್ನಲು ಪ್ರಯತ್ನಿಸಿ ವ್ರಣದ ವೇದನೆಯಿಂದಾಗಿ ತಿನ್ನಲಾಗದೆ ಅದನ್ನು ಬಿಸಾಡತೊಡಗಿತು. ಹಾಗಿದ್ದಾಗಲೇ ಅಧಿಕಮಾಸದ ಪರ್ವಕಾಲ ಆಗಮಿಸಿತು. ಆ ಮಾಸ ಪೂರ್ತಿಯಾಗಿ ಹಣ್ಣು ತಿನ್ನಲಾಗದೇ ಅದು ಹಸಿವಿನಿಂದ ಬಳಲಿ ಮೃಗತೀರ್ಥಕುಂಡದಲ್ಲಿ ಬಿದ್ದು ಸತ್ತುಹೋಯಿತು. ಸಾಯುವ ಮುನ್ನ ಆ ಮೃಗತೀರ್ಥದಲ್ಲಿ ಐದು ದಿನಗಳ ಕಾಲ ಜೀವಹಿಡಿದು ಬದುಕಿತ್ತು.

ಮರಣಿಸಿದ ಅದು ದಿವ್ಯದೇಹವನ್ನು ಪಡೆಯಿತು. ಅದನ್ನು ವೈಕುಂಠಕ್ಕೆ ಕರೆದೊಯ್ಯಲು ವಿಮಾನವೊಂದು ಆಗಮಿಸಿತು. ಕಪಿಗೆ ತನ್ನಂತಹ ಪರಮಪಾಪಿಗೆ ಅಂತಹ ವೈಭವ ಪ್ರಾಪ್ತವಾಗಿದ್ದಕ್ಕೆ ಬಹಳ ಅಚ್ಚರಿ ಉಂಟಾಯಿತು. ಆಗ ವಿಮಾನದಲ್ಲಿದ್ದ ಸುಶೀಲ, ಪುಣ್ಯಶೀಲರೆಂಬ ವಿಷ್ಣುದೂತರು ಅವನಿಗೆ ತಿಳಿಸಿದರು : 'ನೀನು ಪುರುಷೋತ್ತಮಮಾಸ-ದಂತಹ ಪವಿತ್ರಮಾಸದಲ್ಲಿ ಉಪವಾಸವಿದ್ದದ್ದರಿಂದಲೂ, ಐದು ದಿನಗಳ ಕಾಲ ಮೃಗತೀರ್ಥದಲ್ಲಿ ಸ್ನಾನಮಾಡಿದ ಪುಣ್ಯದಿಂದಾಗಿಯೂ, ನೀನು ಎಸೆದ ಹಣ್ಣುಗಳನ್ನು ಜನರು ತಿಂದಿದ್ದರಿಂದ ಅಪಾರ ಪುಣ್ಯ ಲಭಿಸಿ ನಿನ್ನ ಸಕಲಪಾಪಗಳು ಪರಿಹಾರವಾಗಿ ಇಂತಹ ಸುಯೋಗ ಲಭಿಸಿದೆ. ನೀನು ಗೋಲೋಕದಂತಹ ಪವಿತ್ರಲೋಕವನ್ನು ಹೊಂದು'. ಹೀಗೆ ಅಧಿಕಮಾಸದಂತಹ ಪವಿತ್ರಕಾಲದಲ್ಲಿ ವ್ರಣದ ಕಾರಣದಿಂದಾಗಿ ಉಪವಾಸ ಹಾಗೂ ಆಕಸ್ಮಿಕವಾಗಿ ಮೃಗತೀರ್ಥದಲ್ಲಿ ಬಿದ್ದು ಮಾಡಿದ ಸ್ನಾನದಿಂದಾಗಿ ಆ ಕದರ್ಯನ ಸಕಲಪಾಪಗಳು ಪರಿಹಾರವಾಗಿ ಸದ್ಗತಿ ಲಭಿಸಿತು. ಇನ್ನು ನಿರ್ವಂಚನೆಯಿಂದ, ಶ್ರದ್ಧಾಭಕ್ತಿಗಳಿಂದ ಅಧಿಕಮಾಸವ್ರತವನ್ನು ಆಚರಿಸುವವರಿಗೆ ಸಿಕ್ಕುವ ಫಲ ಅಪಾರ ಎಂದು ಪ್ರತ್ಯೇಕ ಹೇಳಬೇಕಿಲ್ಲ.

೩. ಕೌಶಿಕನ ಕಥೆ

ಕೌಶಿಕ ಎಂಬ ಮಹಾತಪಸ್ವಿಯಾದ ಬ್ರಾಹ್ಮಣ; ಮಹಾವಿಷ್ಣುಭಕ್ತ; ವೇದಧರ್ಮ-ಪರಾಯಣ. ಅವನಿಗೊಬ್ಬ ಮಗ; ಹೆಸರು ಮೈತ್ರೇಯ. ಅವನದು ತಂದೆಗೆ ವಿರುದ್ಧವಾದ ಸ್ವಭಾವ; ಮಹಾಕಾಮುಕ, ಸಜ್ಜನದ್ವೇಷಿ, ಪರಮನೀಚ; ಶಿವ, ವಿಷ್ಣು ಮೊದಲಾದ ದೇವತೆಗಳ ನಿಂದಕ; ಕ್ರೂರಾಚಾರಿ; ಭಯಂಕರ ಪ್ರಾಣಿಹಿಂಸಕ; ಮದ್ಯಪಾನದ ದಾಸ. ಅವನು ಒಮ್ಮೆ ಕಾಡಿಗೆಂದು ತೆರಳುತ್ತ ಸೌರಾಷ್ಟ್ರ ನಗರವನ್ನು ಸೇರಿದ. ಅಲ್ಲಿ ಬ್ರಹ್ಮಹತ್ಯೆಯನ್ನು ಮಾಡಿದ. ಜನಗಳನ್ನು ದರೋಡೆ ಮಾಡಿ ಅಪಾರಧನವನ್ನು ಸಂಗ್ರಹಿಸಿದ; ಕೊನೆಗೂ ಜನರೆಲ್ಲ ಸೇರಿ ಅವನನ್ನು ಕೊಂದುಹಾಕಿದರು. ಮೈತ್ರೇಯನನ್ನು ಅವನ ಸಂಗಡಿಗರೊಂದಿಗೆ ಯಮದೂತರು ಎಳೆದೊಯ್ದರು. ಯಮನ ಆಜ್ಞೆಯಂತೆ ಹತ್ತುಸಹಸ್ರವರ್ಷಗಳ ಕಾಲ ಕ್ರಿಮಿಕುಂಡದಲ್ಲಿ ಹಾಕಿದರು. ಅದನ್ನು ನೋಡಿ ನಾರದರು ಅವನ ತಂದೆ ಕೌಶಿಕರ ಬಳಿಗೆ ಹೋಗಿ ಹೇಳಿದರು : 'ನಿನ್ನ ವಂಶದಲ್ಲಿ ಬ್ರಹ್ಮಹತ್ಯಾದಿಗಳು ನಡೆದಿವೆ. ನಿನ್ನ ಪುತ್ರ ಮಹಾನರಕಗಳಲ್ಲಿ ಬಿದ್ದಿರುವನು' ಎಂದು ತಿಳಿಸಿ ಅವನ ಪ್ರಾರ್ಥನೆಯಂತೆ ಅದರ ಪರಿಹಾರದ ಉಪಾಯವನ್ನಾಗಿ ಅಧಿಕಮಾಸದ ವ್ರತವನ್ನು ಉಪದೇಶಿಸಿದರು. ನಾರದರ ಮಾತನ್ನು ಕೇಳಿ ಕೌಶಿಕ ಬ್ರಾಹ್ಮಣ ವಿಧ್ಯುಕ್ತವಾಗಿ ಪುರುಷೋತ್ತಮವ್ರತವನ್ನು ಆಚರಿಸಿದ. ಅದರ ಪುಣ್ಯವನ್ನು ತನ್ನ ಮಹಾಪಾಪಿಯಾದ ಪುತ್ರನ ಉದ್ಧಾರಕ್ಕಾಗಿ ಧಾರೆ ಎರೆದ. ಅದರ ಪ್ರಭಾವದಿಂದಾಗಿ ಮೈತ್ರೇಯ

ಸಕಲಪಾಪಗಳಿಂದ ಮುಕ್ತಿ ಕಂಡು ಸದ್ಗತಿಯನ್ನು ಹೊಂದಿದ. ಇದರಿಂದ ಅಧಿಕಮಾಸ ತನಗೆ, ತನ್ನ ಪಿತೃಗಳಿಗೆ ಹಾಗೂ ಮುಂದಿನ ಪುತ್ರಪೌತ್ರಾದಿ ಸಂತತಿಗೆ ಸಹ ಕಲ್ಯಾಣಕರವಾದ ಅಪೂರ್ವವ್ರತ ಎಂದು ಸಿದ್ಧವಾಗುವುದು.

೪.ಸುಶರ್ಮನ ಕಥೆ

ಸರಸ್ವತೀತೀರದಲ್ಲಿ ಸುಶರ್ಮ ಎಂಬ ಒಬ್ಬ ಬ್ರಾಹ್ಮಣ. ಭಿಕ್ಷಾಟನೆ ಮಾಡಿ ಕುಟುಂಬವನ್ನು ಪಾಲಿಸುತ್ತಿದ್ದ ಬಡವ; ಪ್ರತಿನಿತ್ಯ ಶ್ರೀಹರಿಯನ್ನು ಪೂಜಿಸಿ ನಂದಾದೀಪ ಬೆಳಗುತ್ತಿದ್ದ ಮಹಾತ್ಮ. ಅಧಿಕಮಾಸದ ಸಮಯದಲ್ಲಿ ಅವನು ಪೂಜೆ ಪೂರೈಸಿ ಮನಸ್ಸಿನಲ್ಲಿ ಶ್ರೀಹರಿಯನ್ನು ಸ್ಮರಿಸುತ್ತ ಮಲಗುತ್ತಿದ್ದ. ಒಮ್ಮೆ ಬೆಕ್ಕು ಇಲಿಯನ್ನು ಅಟ್ಟಿಸಿಕೊಂಡು ಬಂದಿತ್ತು. ಅಂದು ಏಕಾದಶಿಯ ದಿನ. ಸುಶರ್ಮ ಏಕಾದಶೀ ಉಪೋಷಣೆ ಮಾಡಿ ರಾತ್ರಿ ಜಾಗರಣೆಯಲ್ಲಿ ತೊಡಗಿದ್ದ. ಮಧ್ಯರಾತ್ರಿಯ ಸಮಯದಲ್ಲಿ ದೀಪ ಕುಡಿಗಟ್ಟಿ ಆರುವ ಹಂತ ತಲುಪಿತ್ತು. ಇಲಿಯನ್ನು ಹಿಡಿಯಲೆಂದು ಹಾರಿದ ಬೆಕ್ಕಿನ ಕಾಲು ತಾಕಿ ದೀಪ ಪುನಃ ಪ್ರಜ್ವಲಿಸಿ ಉರಿಯತೊಡಗಿತು. ಮಾರನೆಯ ದಿನ ಕಾರಣಾಂತರದಿಂದ ಆ ಬೆಕ್ಕು ಸತ್ತು ಹೋಯಿತು. ಕೂಡಲೇ ದಿವ್ಯವಿಮಾನ ಬಂದು ಅದನ್ನು ವೈಕುಂಠಕ್ಕೆ ಕರೆದೊಯ್ದಿತ್ತು. ಅದಕ್ಕೆ ಕಾರಣವಾಗಿದ್ದು ಅದರ ಕಾಲುತಾಗಿ ಆರುವ ದೀಪ ಮತ್ತೆ ಬೆಳಗುವಂತಾಗಿದ್ದು. ಎಂದರೆ ಮತ್ತೊಬ್ಬರು ಹಚ್ಚಿಟ್ಟ ದೀಪವನ್ನು ಅರಿವಿಲ್ಲದೆ ಪ್ರಜ್ವಲಿಸುವಂತೆ ಮಾಡಿದರೂ ಸದ್ಗತಿ ಖಚಿತ ಎಂದರ್ಥ. ಇನ್ನು ಶ್ರದ್ಧಾಪೂರ್ವಕವಾಗಿ ಅಧಿಕಮಾಸಪರ್ವಕಾಲದಲ್ಲಿ ದೀಪಾರಾಧನೆಯಿಂದ ಶ್ರೀಹರಿಯನ್ನು ಪೂಜಿಸುವವರಿಗೆ ದೊರೆಯುವ ಸೌಭಾಗ್ಯ ಅದೆಷ್ಟು ಅಪಾರ ಎಂಬ ಸಂದೇಶ ಇದರಲ್ಲಿದೆ. ಇದರಿಂದ ಸುಶರ್ಮನಿಗೆ ಲಭಿಸಿದ ಸದ್ಗತಿ ಅದೆಷ್ಟು ಅಪೂರ್ವ ಎಂದು ಊಹಿಸಬಹುದು.

೫. ಸುಶೀಲೆ-ವಿಮಲೆಯರ ಕಥೆ

ಮಧುವನ ಎಂಬ ಊರು. ಅಲ್ಲೊಬ್ಬ ಬ್ರಾಹ್ಮಣ. ಹೆಸರು ಶಾಕಲಿ. ಅವನಿಗೆ ಇಬ್ಬರು ಪತ್ನಿಯರು. ಒಬ್ಬಳು ವಿಮಲೆ; ಮತ್ತೊಬ್ಬಳು ಸುಶೀಲೆ. ಇಬ್ಬರೂ ಪತಿವ್ರತೆಯರು. ಆಗೊಮ್ಮೆ ಅಧಿಕಮಾಸ ಬಂದಿತ್ತು. ಒಮ್ಮೆ ಸುಶೀಲೆ ನೀರು ತರಲೆಂದು ಯಮುನಾ ನದಿಗೆ ಹೋಗಿದ್ದಳು. ಅಲ್ಲಿ ಸ್ನಾನಕ್ಕೆಂದು ನೆರೆದಿದ್ದ ಅಪಾರ ಜನಸಂದಣಿ; ಕುತೂಹಲದಿಂದ ಕಾರಣ ಕೇಳಿದಾಗ ಶಾಕಲಿ ತಿಳಿಸಿದರು: 'ಇದು ಅಧಿಕಮಾಸ; ಸತ್ಕಾರ್ಯಗಳನ್ನು ಅಕ್ಷಯಮಾಡುವ ಪವಿತ್ರಕಾಲ; ಪ್ರತಿನಿತ್ಯ ಪ್ರಾತಃಸ್ನಾನ ಮಾಡಿ ಮಾಸಪೂರ್ತಿ ದೇವರ ಮುಂದೆ ದೀಪ ಹಚ್ಚುವುದು ವಿಶೇಷಫಲದಾಯಕ'. ಸುಶೀಲೆ ತಾನೂ ಸಹ ವ್ರತವನ್ನು ಆಚರಿಸಲು ಪತಿಯ ಅನುಮತಿ ಪಡೆದುಕೊಂಡಳು. ಪ್ರತಿನಿತ್ಯ ಯಮುನೆಯಲ್ಲಿ ಸ್ನಾನ,

ಭಗವಂತನಿಗೆ ದೀಪಾರಾಧನೆ ಅವಳ ನಿತ್ಯವ್ರತವಾಯಿತು. ಇದನ್ನು ಕಂಡ ವಿಮಲೆ ಸಹಿಸದಾದಳು. ಅಸೂಯೆಯಿಂದ ಅವಳು ಹಚ್ಚಿದ ದೀಪವನ್ನು ಇವಳು ಆರಿಸಿಬಿಟ್ಟಳು. ಅವಳು ದೀಪ ಹಚ್ಚುವುದು; ಇವಳು ದೀಪ ಆರಿಸುವುದು ಹೀಗೆಯೇ ನಡೆಯತೊಡಗಿತು.

ವ್ರತ ಮುಗಿಯಿತು; ಸುಶೀಲೆ ಅಪಾರ ಪುಣ್ಯಪಡೆದು ಸಂಭ್ರಮಿಸಿದಳು. ದೀಪನಾಶ ಮಾಡಿದ ವಿಮಲೆ ತನ್ನ ಮೂವರು ಪುತ್ರರನ್ನು ಕಳೆದುಕೊಂಡಳು; ಕಣ್ಣುಗಳನ್ನು ಕಳೆದುಕೊಂಡು ಕುರುಡಿಯೂ ಆದಳು. ಮುಂದೆ ಮರಣಾನಂತರ ಮೂವತ್ತುಸಾವಿರ ವರ್ಷಗಳ ಕಾಲ ರೌರವನರಕದಲ್ಲಿ ನರಳಿದಳು. ಬಳಿಕ ಊರಹಂದಿಯಾಗಿ ಹುಟ್ಟಿದಳು; ಕಾಡಿನಲ್ಲಿ ಸರ್ಪವಾಗಿ ಹುಟ್ಟಿದಳು; ಮುಂದೆ ಹೆಣ್ಣುನರಿಯಾದಳು. ಮುಂದೆ ಹಲ್ಲಿಯಾಗಿ ಜನಿಸಿ, ಬಳಿಕ ಒಬ್ಬ ಬೇಡತಿಯಾಗಿ ಹುಟ್ಟಿದಳು; ಹೀಗೆಯೇ ಸಾಗಿತ್ತು ಅವಳ ಪಾಪದ ಫಲ. ಇತ್ತ ಸುಶೀಲೆ ಉತ್ತಮಲೋಕಗಳನ್ನು ಪಡೆದು ಪತಿಯೊಂದಿಗೆ ವೈಕುಂಠವನ್ನೇ ಹೊಂದಿದಳು. ಗಂಡಸರೇ ಆಗಲಿ, ಹೆಂಗಸರೇ ಆಗಲಿ, ಸ್ನಾನ, ದೀಪಾರಾಧನೆ, ಬ್ರಾಹ್ಮಣಸೇವನೆ ಮೊದಲಾದವುಗಳ ಮೂಲಕ ಅಧಿಕಮಾಸವ್ರತವನ್ನು ಆಚರಿಸಬೇಕು. ಹಾಗೆ ಮಾಡಿದಲ್ಲಿ ಅವರು ಮರಳಿ ಹುಟ್ಟದೆ ವೈಕುಂಠವನ್ನೇ ಸೇರುವರು. ಈ ಕಥೆಯನ್ನು ಕೇಳುವುದು ಸಹ ಪುಣ್ಯಕರ.

೬. ತಾಪಸಿಯ ಕಥೆ

ಸ್ನಾನಾದಿಗಳನ್ನು ಮಾಡಲು ಅಶಕ್ತರಾದವರ ಉದ್ಧಾರದ ಹಾದಿಯನ್ನು ತಿಳಿಸುವ ಮತ್ತೊಂದು ಕಥೆ ಹೀಗಿದೆ:

ನರ್ಮದಾ ತೀರದಲ್ಲಿ ಮಾಹಿಷ್ಮತೀ ಎಂಬ ಪಟ್ಟಣ; ಅಲ್ಲೊಬ್ಬ ತಪಸ್ವಿನಿ. ಅವಳ ಹೆಸರು ತಾಪಸಿ. ಅಧಿಕಮಾಸದಲ್ಲಿ ತಪ್ಪದೆ ಉಪವಾಸವ್ರತವನ್ನು ಆಚರಿಸುವ ನಿಯಮ ಅವಳದಾಗಿತ್ತು. ಅವಳ ಮನೆಗೆಲಸದವಳೊಬ್ಬಳು ಕುಷ್ಠರೋಗಕ್ಕೆ ತುತ್ತಾದಳು; ಮರಣಶಯ್ಯೆಯಲ್ಲಿ ಒರಗಿದ ಅವಳು ಏನಾದರೂ ಪುಣ್ಯವನ್ನು ನೀಡಿ ತನ್ನನ್ನು ಉದ್ಧರಿಸಲು ಕೇಳಿಕೊಂಡಳು. ಇವಳು ತನ್ನ ಉಪವಾಸವ್ರತದ ಒಂದುದಿನದ ಪುಣ್ಯವನ್ನು ಅವಳಿಗೆ ಧಾರೆ ಎರೆದಳು. ಕೂಡಲೇ ಮೃತಳಾದ ಅವಳನ್ನು ಕರೆದೊಯ್ಯಲು ದಿವ್ಯವಿಮಾನ ಆಗಮಿಸಿತು. ಸ್ವರ್ಗದಲ್ಲಿ ಬಹುಕಾಲ ಸುಖವಾಗಿದ್ದ ಅವಳು ಮುಂದೆ ಕಾಶೀರಾಜನ ರಾಜಕುಮಾರಿಯಾಗಿ ಜನಿಸಿದಳು. ಮುಂದೆ ಕೈಲಾಸಲೋಕವನ್ನು ಸೇರುವ ಯೋಗ ಅವಳದಾಯಿತು. ಮುಂದೆ ಅವಳು ಚಂದ್ರೇಶ್ವರಿ ಎಂದು ಖ್ಯಾತಳಾಗಿ ಕಾಶಿಯಲ್ಲಿ ನೆಲೆಸಿದಳು.

ಹೀಗೆ ಒಂದು ದಿವಸ ಉಪವಾಸದ ಫಲ ಅವಳ ಸಂಪೂರ್ಣ ಉದ್ಧಾರಕ್ಕೆ ಕಾರಣವಾಯಿತು.

೭. ವೇದಶರ್ಮನ ಕಥೆ

ಅವಂತೀದೇಶದಲ್ಲಿ ಒಬ್ಬ ಬ್ರಾಹ್ಮಣ; ಹೆಸರು ವೇದಶರ್ಮ. ಸೂರ್ಯನಂತೆ ಮಹಾತೇಜಸ್ವಿ; ಅಹಂಕಾರ ಮಮಕಾರಗಳನ್ನು ತೊರೆದ ಮಹಾಯೋಗಿ. ಆಗೊಮ್ಮೆ ಅಧಿಕಮಾಸ ಬಂದಿತು. ಆಗಲೇ ವೃದ್ಧಾಪ್ಯವನ್ನು ತಲುಪಿದ್ದ ಅವನಿಗೆ ಉಪವಾಸವನ್ನು ಮಾಡುವ ಶಕ್ತಿ ಇಲ್ಲವಾಯಿತು. ಆ ಕೊರಗಿನಲ್ಲೆ ಅವನು ಮಲಗಿದ್ದಾಗ ಮೌನವ್ರತವನ್ನು ಆಚರಿಸಲು ಸ್ವಪ್ನಸೂಚನೆಯಾಯಿತು. ಅದರಂತೆ ಅವನು ಮೌನವ್ರತವನ್ನು ಮಾಸಪೂರ್ತಿ ಆಚರಿಸಿದ. ಬಳಿಕ ಶ್ರೀಹರಿಯು ಅವನಿಗೆ ಸಾಕ್ಷಾತ್ ದರ್ಶನವಿತ್ತು ಸದ್ಗತಿಯನ್ನು ನೀಡಿದ.

ಉಪವಾಸಾದಿ ಕಠಿಣ ವ್ರತಗಳನ್ನು ಆಚರಿಸಲಾಗದ ಅಶಕ್ತರಿಗೆ ಮೌನವ್ರತದ ಆಚರಣೆ ಸಹ ತಾರಕ ಎಂಬ ಸಂದೇಶ ಇಲ್ಲಿದೆ.

೮. ಸ್ಮಿತವಿಲಾಸಿನಿಯ ಕಥೆ

ಒಬ್ಬ ಅಪ್ಸರೆ; ಮಹಾರೂಪಸಿ. ಹೆಸರು ಸ್ಮಿತವಿಲಾಸಿನಿ. ಕುಬೇರನಿಗೆ ಪ್ರಿಯಳಾದವಳು. ಇಂದ್ರಲೋಕದಲ್ಲಿ ಅವಳ ವಾಸ. ಒಮ್ಮೆ ಅವಳು ಕ್ರೀಡೆಗೆಂದು ಸಖಿಯರೊಂದಿಗೆ ಕೂಡಿ ಸ್ವರ್ಗಲೋಕದಿಂದ ಕುರುಕ್ಷೇತ್ರಕ್ಕೆ ತೆರಳಿದಳು. ಅಲ್ಲಿ ವಿಹರಿಸುತ್ತ ಅನೇಕ ಪುಷ್ಪಗಳನ್ನು ಆಯ್ದು ಒಂದು ಮಾಲೆಯನ್ನು ಕಟ್ಟಿದಳು. ಆ ವೇಳೆಗೆ ಅಲ್ಲಿಗೆ ದೂರ್ವಾಸಮುನಿಗಳು ಆಗಮಿಸಿದರು. ಅವರು ಬರುತ್ತಿದ್ದಂತೆ ಇವಳ ಸಖಿಯರೆಲ್ಲ ಭಯದಿಂದ ದೂರಕ್ಕೆ ಧಾವಿಸಿದರು. ಸ್ಮಿತವಿಲಾಸಿನಿಯು ಮಾತ್ರ ಅವರ ಬಳಿಗೆ ತೆರಳಿ ತಾನು ಕಟ್ಟಿದ್ದ ಮಾಲೆಯನ್ನು ಅವರ ಕೊರಳಲ್ಲಿ ಹಾಕಿಬಿಟ್ಟಳು. ಕೋಪಗೊಂಡ ದೂರ್ವಾಸರು ಅವಳನ್ನು ಪಿಶಾಚಿಯಾಗು ಎಂದು ಶಪಿಸಿದರು. ತನ್ನ ಅಪರಾಧಕ್ಕಾಗಿ ಮರುಗಿ ಬಹಳವಾಗಿ ಕೇಳಿಕೊಂಡಾಗ ಅವರು ವಿಶಾಪ ನೀಡಿದರು : 'ನೀನು ಪಿಶಾಚಿಯಾಗುವುದು ನಿಶ್ಚಿತ; ನಾಲ್ಕು ಯುಗಗಳು ಸಾವಿರಬಾರಿ ಕಳೆದ ಮೇಲೆ ಮಹೀಸಾಗರಸಂಗಮದಲ್ಲಿನ ಕುಮಾರ್ಯಾ ಎಂಬ ಕ್ಷೇತ್ರದಲ್ಲಿ ಯಾಜ್ಞವಲ್ಕ್ಯರ ವಂಶದಲ್ಲಿ ಜನಿಸಿದ ಒಬ್ಬ ತಪಸ್ವಿನಿ ಅಧಿಕಮಾಸದಲ್ಲಿ ಸ್ನಾನಕ್ಕೆಂದು ಆಗಮಿಸುವಳು. ಅವಳು ಬಗೆಬಗೆಯ ವ್ರತಗಳಿಂದ ವಿಶೇಷವಾಗಿ ಅಧಿಕಮಾಸದಲ್ಲಿ ಶ್ರೀಹರಿಯನ್ನು ಆರಾಧಿಸುವಳು. ಅವಳ ದರ್ಶನಮಾತ್ರ-ದಿಂದಲೇ ನಿನಗೆ ಜ್ಞಾನ ಹುಟ್ಟುವುದು. ನೀನು ಅವಳನ್ನು ಪ್ರಾರ್ಥಿಸಿಕೋ; ಅವಳು ಕರುಣೆಯಿಂದ ನಿನಗೆ ಒಂದು ಅಧಿಕಮಾಸದ ಫಲವನ್ನು ನೀಡುವಳು. ಅದರಿಂದ ನೀನು

ಈ ಶಾಪದಿಂದ ಬಿಡುಗಡೆ ಹೊಂದುವಿ'. ಮುಂದೆ ಅದರಂತೆ ನಡೆದು ಅವಳು ಶಾಪಮುಕ್ತಳಾದಳು.

ಹೀಗೆ ಒಂದೊಂದು ಅಧಿಕಮಾಸಕ್ಕೂ ಅಪಾರಫಲವಿದೆ.

೯. ಧರ್ಮಶರ್ಮನ ಕಥೆ

ಹಿಂದೆ ದಕ್ಷಿಣದೇಶದಲ್ಲಿ ಪ್ರಶಸ್ತವಾದ ಗೋದಾವರೀತೀರದ ಪ್ರತಿಷ್ಠಾನಪುರದಲ್ಲಿ ಒಬ್ಬ ವೃದ್ಧ ಬ್ರಾಹ್ಮಣನಿದ್ದ. ಧರ್ಮಶರ್ಮ ಎಂದು ಅವನ ಹೆಸರು. ಬಹಳ ಶಾಸ್ತ್ರಗಳನ್ನು ಓದಿದ ವಿದ್ವಾಂಸ; ಮಹಾಪ್ರಾಜ್ಞ. ಆಗೊಮ್ಮೆ ಅಧಿಕಮಾಸ ಬಂದಿತ್ತು. ವೃದ್ಧನಾದ ತನಗೆ ಉಪವಾಸಾದಿ ಯಾವುದೂ ಸಾಧ್ಯವಾಗದೆಂದು ಭಾವಿಸಿ, ಅಧಿಕಮಾಸದಲ್ಲಿ ಮೂರು ದಿನಗಳಾದರೂ ಸ್ನಾನಮಾಡುವ ವ್ರತವನ್ನು ಕೈಗೊಂಡ. ಎರಡು ದಿನಗಳು ಪೂರೈಸಿದವು. ಮೂರನೆಯ ದಿನದಂದು ಸ್ನಾನಕ್ಕೆ ತೆರಳಿದ್ದಾಗ ಮಾರ್ಗಮಧ್ಯದಲ್ಲಿ ಒಂದು ಭಯಂಕರಾಕಾರದ ಪ್ರೇತ ಗೋಚರಿಸಿತು. ಆ ಭಯಂಕರ ಪ್ರೇತವನ್ನು ಕಂಡು ಸ್ವಲ್ಪವೂ ಭಯಪಡದೆ ಧರ್ಮಶರ್ಮ 'ನೀನಾರು? ಎಂದು ಕೇಳಿದ. ಆ ಬ್ರಾಹ್ಮಣನ ದರ್ಶನ ಹಾಗೂ ಅವನ ಮಾತುಗಳ ಶ್ರವಣದಿಂದ ಪ್ರೇತಕ್ಕೆ ಸದ್ಬುದ್ಧಿ ಜನಿಸಿತು. ಕೈ ಜೋಡಿಸಿ-ಕೊಂಡು ಅವನನ್ನು ಕೇಳಿಕೊಂಡಿತು : 'ಪೂಜ್ಯರೇ, ನಾನು ಪಾಪವಶದಿಂದ ಪ್ರೇತನಾಗಿರುವ ಪಾತಕಿ. ದಯವಿಟ್ಟು ನನ್ನನ್ನು ಉದ್ಧರಿಸಿ'. ಅವನ ಮೇಲೆ ಕೃಪೆತೋರಿದ ಧರ್ಮಶರ್ಮ ಅವನ ಪ್ರೇತಜನ್ಮಕ್ಕೆ ಕಾರಣವನ್ನು ಕೇಳಿದ. 'ನಾನು ಮಹಾಚೋರ, ಪರಸ್ತ್ರೀಲೋಲುಪ; ಮದ್ಯಪಾನವನ್ನೂ ಮಾಡಿದವನು. ಬ್ರಹ್ಮಹತ್ಯೆಯನ್ನೂ ಬಿಟ್ಟವನಲ್ಲ; ಅದರ ಫಲ ಈ ಪ್ರೇತಯೋನಿ.' ಕರುಣಾನಿಧಿಯಾದ ಬ್ರಾಹ್ಮಣ ತನ್ನ ಆ ಮೂರು ದಿವಸದ ಸ್ನಾನದ ಫಲವನ್ನು ಅವನಿಗೆ ಧಾರೆ ಎರೆದ. ಕೂಡಲೇ ಸಕಲಪಾಪಗಳಿಂದ ಬಿಡುಗಡೆ ಕಂಡ ಅವನು ಆ ವಿಪ್ರನಿಗೆ ನಮಿಸಿ ದಿವ್ಯರೂಪಧರನಾಗಿ ವಿಮಾನವನ್ನೇರಿ ಸ್ವರ್ಗಕ್ಕೆ ನಡೆದ. ಮೂರುದಿನದ ಅಧಿಕಮಾಸದ ಸ್ನಾನಫಲವೂ ಸಹ ಎಷ್ಟು ಅದ್ಭುತವಾದದ್ದು!

೧೦. ಕುಶಲಶರ್ಮನ ಕಥೆ

ನರ್ಮದಾ ನದಿ ಅತ್ಯಂತ ಪವಿತ್ರನದಿಗಳಲ್ಲೊಂದು. ಅದರ ತೀರದಲ್ಲಿ ಭೃಗುಕಚ್ಛ ಎಂಬ ಸುಪ್ರಸಿದ್ಧ ನಗರ. ಅಲ್ಲೊಬ್ಬ ಬ್ರಾಹ್ಮಣ; ಹೆಸರು ಕುಶಲಶರ್ಮ. ಕುಶಾವತಿ ಎಂಬುವವಳು ಅವನ ಪತ್ನಿ. ಸ್ವಧರ್ಮನಿರತರಾದ ಅವರಿಗೆ ಒಬ್ಬ ಮಗಳು; ಹೆಸರು ಮೇಧಾವತಿ. ಒಬ್ಬ ಯೋಗ್ಯ ಬ್ರಾಹ್ಮಣಕುಮಾರನೊಂದಿಗೆ ಅವಳ ಮದುವೆಯೂ ಆಯಿತು. ವಿಧಿವಶಾತ್ ಅವಳಿಗೆ ಬಾಲ್ಯದಲ್ಲೇ ವೈಧವ್ಯ ಒದಗಿತು. ಮರಣಕ್ಕಿಂತ ಹೆಚ್ಚಿನ

ದುಃಖವೆನ್ನಿಸಿದ ವೈಧವ್ಯದಿಂದ ಬಳಲಿದ ಅವಳು ತಂದೆಯ ಆದೇಶದಂತೆ ಅಧಿಕಮಾಸದಲ್ಲಿ ಧಾರಣ-ಪಾರಣ ವ್ರತವನ್ನು ಕೈಗೊಂಡಳು. ಅಧಿಕಮಾಸ ಬರುತ್ತಿದ್ದಂತೆಯೇ ಮೊದಲ ದಿನದಲ್ಲಿ ನರ್ಮದೆಯಲ್ಲಿ ಸ್ನಾನಮಾಡಿ ವ್ರತವನ್ನು ಕೈಗೊಂಡಳು. ಸಾಂಗೋಪಾಂಗವಾಗಿ ವ್ರತವನ್ನು ಪೂರೈಸಿದಳು. ಹೀಗೆ ಅನೇಕ ಅಧಿಕಮಾಸಗಳನ್ನು ಅವಳು ಧಾರಣ-ಪಾರಣ-ವ್ರತಗಳಿಂದ ಕಳೆದಳು. ಮುಂದೆ ಒಮ್ಮೆ ಅವಳಿಗೆ ಮೃತ್ಯು ಒದಗಿತು. ಶಿವನ ಸೇವಕರು ಅವಳನ್ನು ಕೈಲಾಸಕ್ಕೆ ಕರೆದೊಯ್ದರು. ಅದರ ಫಲವಾಗಿ ಪಾರ್ವತಿಯ ಸಖಿ ಎನ್ನಿಸಿ ಅವಳು ವಿಶಾಲಾಕ್ಷೀ ಎನ್ನಿಸಿದಳು. ಧಾರಣ-ಪಾರಣ ವ್ರತದ ಪ್ರಭಾವದಿಂದ ವಿಧವೆಯಾಗಿದ್ದ ಅವಳು ಮುಂದೆ ಶ್ರೇಷ್ಠಗತಿಯನ್ನು ಸಂಪಾದಿಸಿಕೊಂಡಳು. ವಿಧವೆಯರು ಸಹ ಅಧಿಕಮಾಸದ ಆಚರಣೆಯಿಂದ ಶ್ರೇಷ್ಠ ಹಿರಿಮೆಯನ್ನು ಸಂಪಾದಿಸಬಹುದು ಎಂಬ ವಿಶೇಷಾಂಶ ಈ ಕಥೆಯಲ್ಲಿದೆ.

೧೧. ವಿಪ್ರದಾಸನ ಕಥೆ

ಶಿವಪುರಿ ಎಂಬ ಪಟ್ಟಣ. ಅಲ್ಲೊಬ್ಬ ಶೂದ್ರ; ವಿಪ್ರದಾಸ ಎಂದು ಅವನ ಹೆಸರು. ವಿಪ್ರದಾಸಿ ಎಂಬುವವಳು ಅವನ ಪತ್ನಿ. ಅವರಿಬ್ಬರೂ ಒಮ್ಮೆ ಅಧಿಕಮಾಸ ಬಂದಾಗ ನಿತ್ಯಸ್ನಾನವ್ರತವನ್ನು ಕೈಗೊಂಡರು. ಗೋಕರ್ಣಿ ಎಂಬ ನದಿಯಲ್ಲಿ ಅವರ ಸ್ನಾನವ್ರತ ಸಾಗಿತ್ತು. ಒಂದು ಅಧಿಕಮಾಸ ಪೂರ್ತಿ ಅವರು ತಪ್ಪದೆ ಸ್ನಾನವ್ರತವನ್ನು ಆಚರಿಸಿದರು. ಉದ್ಯಾಪನೆಯನ್ನೂ ಪೂರೈಸಿದರು. ವ್ರತವನ್ನು ಪೂರೈಸಿ ಮನೆಗೆ ತೆರಳುತ್ತಿದ್ದಾಗ ಮಹಾಭಯಂಕರವಾದ ಏಳು ಪ್ರೇತಗಳನ್ನು ಅವರು ಕಂಡರು. ಇವರನ್ನು ಕಾಣುತ್ತಲೇ ಆ ಪ್ರೇತಗಳಿಗೆ ದುರ್ಬುದ್ಧಿ ತೊಲಗಿ ಸದ್ಬುದ್ಧಿ ಜನಿಸಿತು. ಆ ಬ್ರಾಹ್ಮಣದಂಪತಿಗಳನ್ನು ಅವು ಪ್ರಾರ್ಥಿಸಿಕೊಂಡವು : 'ನಾವು ಬಗೆಬಗೆಯ ಪಾಪಗಳನ್ನು ಮಾಡಿ ಇಂತಹ ಪ್ರೇತಯೋನಿಯನ್ನು ಹೊಂದಿರುವೆವು; ದಯವಿಟ್ಟು ನಮ್ಮನ್ನು ಉದ್ಧರಿಸಬೇಕು' ಕೂಡಲೇ ಕರುಣಾಳುವಾದ ಆ ಬ್ರಾಹ್ಮಣ ಏಳು ದಿನದ ಸ್ನಾನದ ಫಲವನ್ನು ಅವರಿಗೆ ನೀಡಿದ; ತತ್‌ಕ್ಷಣವೇ ಪ್ರೇತಜನ್ಮದಿಂದ ಬಿಡುಗಡೆ ಹೊಂದಿ ದಿವ್ಯವಿಮಾನವನ್ನೇರಿ ಸ್ವರ್ಗಕ್ಕೆ ಸೇರಿದರು. ಹೀಗೆ ಶೂದ್ರರು ಅಧಿಕಮಾಸವ್ರತಮಾಡಿದರೂ ಅದರಿಂದ ಅದ್ಭುತ ಫಲ ಎಂದು ತಿಳಿಯುವುದು. ಅದರಂತೆ ಅಧಿಕಮಾಸವ್ರತ ಮಾಡಿದವರು ನೀಡಿದ ಪುಣ್ಯವೂ ಸಹ ಅಪೂರ್ವಹಿರಿಮೆಗೆ ಸಾಧನ ಎಂಬ ಪ್ರಮೇಯವೂ ಇದರಲ್ಲಿ ಸೂಚಿತ.

೧೨. ಸೋಮಶರ್ಮನ ಕಥೆ

ಸೌರಾಷ್ಟ್ರ ಎಂಬ ನಗರದಲ್ಲಿ ಪ್ರಭಾಸ ಎಂಬ ಕ್ಷೇತ್ರ. ಅಲ್ಲೊಬ್ಬ ಬ್ರಾಹ್ಮಣ; ಹೆಸರು ಸೋಮಶರ್ಮ. ವೇದಾದಿಶಾಸ್ತ್ರಗಳನ್ನು ಓದಿದ ವಿದ್ವಾಂಸ; ಸದಾಚಾರಪರಾಯಣ.

ಬಗೆಬಗೆಯ ಯಜ್ಞ, ದಾನ ಮೊದಲಾದವುಗಳನ್ನು ಮಾಡಿದ್ದ ಪುಣ್ಯಶಾಲಿ. ಅನೇಕ ಅಧಿಕಮಾಸಗಳನ್ನು ಆಚರಿಸಿದ್ದ ಭಾಗ್ಯಶಾಲಿ. ಅವನೊಮ್ಮೆ ಆ ಕ್ಷೇತ್ರದಲ್ಲಿನ ಸರಸ್ವತೀ ಸಮುದ್ರಸಂಗಮದಲ್ಲಿ ಸ್ನಾನಕ್ಕೆಂದು ತೆರಳಿದ್ದಾಗ ಮಾರ್ಗದಲ್ಲಿ ಒಬ್ಬ ಭಯಂಕರ ರಾಕ್ಷಸ ಕಾಣಿಸಿಕೊಂಡ. ಅವನನ್ನು ಕಾಣುತ್ತಲೇ ಸೋಮಶರ್ಮ ಶ್ರೀನರಸಿಂಹದೇವರನ್ನು ಸ್ಮರಿಸುತ್ತ ನಿಂತುಕೊಂಡ. ಎಷ್ಟು ಪ್ರಯತ್ನಿಸಿದರೂ ರಾಕ್ಷಸನಿಗೆ ಅವನನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಅಗ್ನಿಯಂತೆ ಕಂಗೊಳಿಸುತ್ತಿದ್ದ ಆ ಬ್ರಾಹ್ಮಣನನ್ನು ಕುರಿತ ರಾಕ್ಷಸ ಹೇಳಿದ: ' ಸ್ವಾಮಿ, ನೀವು ಮಹಾಪುಣ್ಯಾತ್ಮರು. ನಾನು ಎಷ್ಟು ಪ್ರಯತ್ನಿಸಿದರೂ ನಿಮ್ಮನ್ನು ಏನೂ ಮಾಡಲು ಸಾಧ್ಯವಾಗಲಿಲ್ಲ; ಮಹಾತ್ಮರಾದ ತಾವು ನನ್ನನ್ನು ಉದ್ಧರಿಸಬೇಕು' ಎಂದು ಕೇಳಿಕೊಂಡ. ಬ್ರಾಹ್ಮಣ 'ನಾನು ಇವನನ್ನು ಉದ್ಧರಿಸದಿದ್ದಲ್ಲಿ ಇವನ ಬದುಕು ಹೀಗೆಯೇ ಸಾಗುವುದು. ಅನೇಕ ಜನರು ಇವನಿಗೆ ಆಹಾರವಾಗಿ ಹೋಗುವರು. ಇವನನ್ನು ಬಿಡುಗಡೆ ಮಾಡಿದರೆ ಅಷ್ಟು ಜನರನ್ನು ಪಾಲಿಸಿದಂತಾಗುವುದು' ಎಂದು ಚಿಂತಿಸಿ, ತಾನು ಆಚರಿಸಿದ ಸ್ನಾನದ ಒಂದುದಿನದ ಪುಣ್ಯವನ್ನು ಅವನಿಗೆ ಧಾರೆ ಎರೆದ. ಕೂಡಲೇ ಆ ರಾಕ್ಷಸ ದಿವ್ಯರೂಪ ಧರಿಸಿ ಶೋಭಿಸಿದ. ದೇವತೆಗಳು ಪುಷ್ಪವೃಷ್ಟಿ ಸುರಿಸಿ ಆ ಬ್ರಾಹ್ಮಣನನ್ನು ಅಭಿನಂದಿಸಿದರು: 'ಇವನನ್ನು ಉದ್ಧರಿಸುವ ಮೂಲಕ ಅಸಂಖ್ಯಜನರ ಪ್ರಾಣವನ್ನು ಉಳಿಸಿ ಲೋಕೋಪಕಾರ ಮಾಡಿದಿರಿ' ಎಂದು ಕೊಂಡಾಡಿದರು.

ಇದರಿಂದ ಜ್ಞಾನಿಗಳಾದವರು ತಮ್ಮ ವ್ರತ, ಉಪವಾಸಗಳ ಪುಣ್ಯವನ್ನು ಕ್ರೂರಪಾಪ ಮಾಡಿದವರಿಗೂ ಸಹ ಧಾರೆ ಎರೆದು ಉದ್ಧರಿಸುವ ಹಿಂದಿನ ರಹಸ್ಯ ಇದರಲ್ಲಿ ನಿರೂಪಿತವಾಗಿದೆ. ಲೋಕೋದ್ಧಾರವೇ ಪ್ರಧಾನವಾಗಿ ಜ್ಞಾನಿಗಳ ಸಾಧನೆಯ ಪರಮೋದ್ದೇಶ ಎಂಬುದು ಅತ್ಯಂತ ಗಮನಾರ್ಹವಾದ ಸಂಗತಿ.

೧೩. ಧನದಾಸನ ಕಥೆ

ವಿರಾಟ ಎಂಬ ಸಮೃದ್ಧವಾದ ಒಂದು ದೇಶ. ಅದರಲ್ಲಿ ಸಹ್ಯಪರ್ವತ ಎಂಬ ಬೆಟ್ಟದ ಬಳಿಯಲ್ಲಿ ಮಹಾಪುರ ಎಂಬ ಪಟ್ಟಣ. ಕಲಿಯುಗದಲ್ಲೂ ಧರ್ಮ ನಾಲ್ಕು ಪಾದಗಳಿಂದ ಸಂಚರಿಸುವ ಪುಣ್ಯನಗರವದು. ಅಲ್ಲಿ ಧನದಾಸ ಎಂಬ ಮಹಾಶೂದ್ರನಿದ್ದ. ಸದಾ ಬ್ರಾಹ್ಮಣಸೇವೆ ಮಾಡುವುದು ಅವನ ವ್ರತವಾಗಿತ್ತು. ತನಗೆ ಅನೇಕ ಸೇವಕರಿದ್ದರೂ ಅಹಂಕಾರ ಪಡದೆ ತಾನೇ ಸ್ವತಃ ಬ್ರಾಹ್ಮಣರ ಪಾದಪ್ರಕ್ಷಾಲನೆಯನ್ನು ಮಾಡುವ ದೀಕ್ಷೆ ಅವನದಾಗಿತ್ತು. ಬ್ರಾಹ್ಮಣರ ಬಟ್ಟೆ ಒಗೆಯುವುದು, ಪದಾರ್ಥಗಳನ್ನು ತಂದುಕೊಡುವುದು, ಕಾಲೊತ್ತುವುದು, ಅಭ್ಯಂಜನ ಸ್ನಾನ ಮಾಡಿಸುವುದು ಅವನ ವ್ರತವಾಗಿತ್ತು. ಅವನ ಪತ್ನಿ ವಿಪ್ರಸ್ತ್ರೀಯರ ಸೇವೆಯಲ್ಲಿ ತೊಡಗಿದ್ದಳು. ಅಧಿಕಮಾಸದಲ್ಲಂತೂ ಅವರ ಬ್ರಾಹ್ಮಣಸೇವೆ ಇನ್ನೂ ಹೆಚ್ಚಾಗಿ ನಡೆಯುತ್ತಿತ್ತು. ಪ್ರಾರಬ್ಧವಶಾತ್ ಅವನಿಗೆ ಕುಷ್ಠರೋಗ ಒದಗಿತ್ತು.

ಅವನ ಪತ್ನಿ ಕಂಜಾಕ್ಷಿಯು ಪತಿಯ ಸ್ಥಿತಿಯನ್ನು ಕಂಡು ಚಿಂತೆಗೊಳಗಾದಳು. ಆಗೊಮ್ಮೆ ಸಿದ್ಧನೊಬ್ಬ ಆಗಮಿಸಿ ಆ ಧನದಾಸನಿಗೆ ಹೇಳಿದ : 'ನಾಳೆ ನೀನು ಮರಣಿಸುವಿ, ಬ್ರಾಹ್ಮಣರನ್ನು ವಿಶೇಷವಾಗಿ ಸೇವಿಸಿದ ಫಲವಾಗಿ ಸ್ವರ್ಗಲೋಕವನ್ನು ಸೇರುವಿ'. ಇದನ್ನು ಕೇಳಿ ಧನದಾಸ ತನ್ನ ಸಂಪತ್ತನ್ನು ಮೂರು ಭಾಗ ಮಾಡಿ ಒಂದನ್ನು ಮಗನಿಗೆ ನೀಡಿದ; ಇನ್ನೊಂದನ್ನು ಹೆಣ್ಣುಮಕ್ಕಳಿಗೆ ನೀಡಿದ; ಮೂರನೆಯ ಭಾಗವನ್ನು ಮನೆಮನೆಗೆ ತೆರಳಿ ಬ್ರಾಹ್ಮಣರಿಗೆ ಸಮರ್ಪಿಸಿದ. ಇದರಿಂದಾಗಿ ಆ ಶೂದ್ರ ಶ್ರೇಷ್ಠಗತಿಯನ್ನು ಪಡೆದುಕೊಂಡ. ಅಂತ್ಯಕಾಲ ಬಂದಾಗ ಕೈಗೊಳ್ಳಬೇಕಾದ ಎಚ್ಚರಿಕೆಯನ್ನು ನೀಡುವ ಈ ಕಥೆ ಬಂಧುಬಾಂಧವರಿಗೆ ಹೇಗೋ ಹಾಗೆ ಪ್ರಧಾನವಾಗಿ ಧರ್ಮಕಾರ್ಯಕ್ಕೆ ತಮ್ಮ ಸಂಪತ್ತು ವಿನಿಯೋಗವಾಗುವ ವಿವೇಕವನ್ನು ಹೊಂದಬೇಕು ಎಂಬ ಸಂದೇಶವನ್ನು ತಿಳಿಸುತ್ತದೆ.

೧೪. ಮಂಡನ-ಗುಣವತಿಯರ ಕಥೆ

ವೀರಬಾಹು ಎಂಬ ರಾಜ; ದಾನಶೂರ; ಬಹುಯಜ್ಞಗಳನ್ನು ಮಾಡಿದವ. ತುಂಬಾ ಜನಪ್ರಿಯ. ಯಶೋಮತಿ ಎಂಬುವವಳು ಅವನ ಪತ್ನಿ. ಮಂಡನ ಎಂಬುವವನು ಅವನ ಮಂತ್ರಿ. ಗುಣವತಿ ಎಂಬುವವಳು ಅವನ ಪತ್ನಿ. ವೀರಬಾಹು ಮಂತ್ರಿಗಳಿಗೆ ರಾಜ್ಯಭಾರವನ್ನು ಒಪ್ಪಿಸಿ ಪತ್ನಿಯೊಂದಿಗೆ ಸುಖಜೀವನವನ್ನು ನಡೆಸಿದ್ದ. ಅವರಿಗೆ ಸುಬಾಹು, ಶತಬಾಹು ಎಂಬ ಇಬ್ಬರು ಪುತ್ರರು ಜನಿಸಿದರು. ಒಮ್ಮೆ ಅಧಿಕಮಾಸ ಬಂದಾಗ ಮಂತ್ರಿಯಾದ ಮಂಡನನ ಹೆಂಡತಿಯು ಮಹಾರಾಣಿಯಾದ ಯಶೋಮತಿಯ ಬಳಿಗೆ ತೆರಳಿ ಅಧಿಕಮಾಸವ್ರತವನ್ನು ಮಾಡಲು ತಿಳಿಸಿದಳು. ಯಶೋಮತಿಯು ಅವಳ ಮಾತನ್ನು ಕಡೆಗಣಿಸಿ 'ನಮಗೇಕೆ ವ್ರತ, ಹೇಗೂ ಪ್ರಜೆಗಳ ಪುಣ್ಯದ ಒಂದು ಪಾಲು ನಮಗೆ ಬಂದೇಬರುವುದಲ್ಲವೇ?' ಎಂದುಬಿಟ್ಟಳು. ಗುಣವತಿಯು ಮಾತ್ರ ಶ್ರದ್ಧೆಯಿಂದ ಅಧಿಕಮಾಸದ ವ್ರತವನ್ನು ಮಾಡತೊಡಗಿದಳು. ಅಧಿಕಮಾಸವ್ರತವನ್ನು ತೊರೆದ ಪರಿಣಾಮದಿಂದ ಯಶೋಮತಿಯ ಇಬ್ಬರು ಮಕ್ಕಳೂ ಭಯಂಕರ ಜ್ವರವೊಂದಕ್ಕೆ ತುತ್ತಾಗಿ ಅಸುನೀಗಿದರು. ಅದನ್ನು ಕಂಡು ಮಹಾರಾಣಿ ಬಹಳವಾಗಿ ದುಃಖಿಸಿದಳು. ವಿಷಯ ತಿಳಿದ ಮಂಡನನ ಪತ್ನಿ ಅಲ್ಲಿಗೆ ಧಾವಿಸಿ ಸಮಾಧಾನಪಡಿಸತೊಡಗಿದಳು. ಆಗ ಮಹಾರಾಣಿಯು, ಗುಣವತಿಯು ಬಗೆಬಗೆಯ ಅಲಂಕಾರಗಳನ್ನು ಧರಿಸಿದ್ದುದನ್ನು ಕಂಡು 'ಈ ಸಮಯದಲ್ಲಿ ಇವುಗಳನ್ನು ನೀನು ಧರಿಸಿರುವುದು ಉಚಿತವಲ್ಲ' ಎಂದು ನುಡಿದಳು. ಮಾರನೆಯ ದಿನ ಬೆಳಿಗ್ಗೆ ರಾಜರಾಣಿಯರನ್ನು ಸಮಾಧಾನಪಡಿಸಲೆಂದು ಅವರಿಬ್ಬರೂ ತೆರಳಿದರು. ಆಗಲೂ ಅವರು ಅಲಂಕಾರಯುಕ್ತರಾಗಿದ್ದುದನ್ನು ಕಂಡು ರಾಜರಾಣಿಯರಿಗೆ ಕೋಪ ಉಕ್ಕಿತು. ಕೂಡಲೇ ರಾಜ ಅವರಿಬ್ಬರನ್ನು ಬಂಧನದಲ್ಲಿರಿಸಿದ. ಬಂಧನದಲ್ಲಿದ್ದ ದಂಪತಿಗಳು ತಮ್ಮ ಪರಿಸ್ಥಿತಿಗೆ ದುಃಖಪಡುತ್ತ ಶ್ರೀಹರಿಯನ್ನು ಪ್ರಾರ್ಥಿಸಿದರು. ಶ್ರೀಹರಿ ಕನಸಿನಲ್ಲಿ ಕಾಣಿಸಿಕೊಂಡು ರಾಜರಾಣಿಯರಿಗೆ ನುಡಿದ :

'ಎಲವೋ, ನೀನು ಮಾಡಿದ್ದು ಸರಿಯಲ್ಲ. ಕೂಡಲೇ ಅವರಿಬ್ಬರನ್ನು ಬಂಧನದಿಂದ ಬಿಡುಗಡೆ ಮಾಡು. ನೀನು ಅವರ ಮೇಲೆ ಕೋಪಮಾಡಿಕೊಂಡಿದ್ದು ಸರಿಯಲ್ಲ. ಹಿಂದಿನ ಜನ್ಮದಲ್ಲಿ ಅವರಿಬ್ಬರೂ ಬಡವರಾಗಿದ್ದರು. ಆದರೆ ಅಧಿಕಮಾಸವ್ರತವನ್ನಾಚರಿಸಿ ನನ್ನನ್ನು ಆರಾಧಿಸಿದ್ದರು. ಅದರ ಫಲವಾಗಿ ಈಗ ನಿನ್ನ ಮಂತ್ರಿಪದವಿ ಅವನಿಗೆ ಲಭಿಸಿತು. ಅವರೇನು ಈಗ ಅಲಂಕಾರ ಮಾಡಿಕೊಂಡು ಬಂದಿರಲಿಲ್ಲ, ಹಿಂದಿನ ಜನ್ಮದಲ್ಲಿ ಮಾಡಿದ ಅಧಿಕಮಾಸದ ಪುಣ್ಯದಿಂದಾಗಿ ಅವರ ಮುಖ ಸದಾ ಅಲಂಕಾರ ಮಾಡಿಕೊಂಡಂತೆ ಕಾಣುತ್ತಿರುತ್ತದೆ. ಆಭರಣಯುಕ್ತವಾಗಿ ಶೋಭಿಸುತ್ತಿರುತ್ತದೆ'. ಇದನ್ನು ಕೇಳುತ್ತಲೇ ವೀರಬಾಹು ಪಶ್ಚಾತ್ತಾಪಪಟ್ಟು ಅವರನ್ನು ಬಿಡುಗಡೆ ಮಾಡಿಸಿದ. ಪರೀಕ್ಷಿಸಲೆಂದು ರಾಜರಾಣಿಯರಿಬ್ಬರೂ ಅವರಿಬ್ಬರ ಮುಖಗಳನ್ನು ಸಹ ತಾವೇ ತೊಳೆದರು. ಆದರೂ ಅವರ ಮುಖದಲ್ಲಿನ ಅಲಂಕಾರಗಳು ಮಾಸಲೇ ಇಲ್ಲ. ಪರಮಾಶ್ಚರ್ಯ ಪಟ್ಟ ರಾಜ ಅವರಿಗೆ ಕೈಮುಗಿದು ತನ್ನ ತಪ್ಪನ್ನು ಮನ್ನಿಸಲು ಕೇಳಿಕೊಂಡ. ಮುಂದೆ ಅಧಿಕಮಾಸ ಬಂದಾಗ ಸಪತ್ನೀಕನಾಗಿ ತಾನೂ ಅದನ್ನು ಆಚರಿಸಿ ಕೃತಕತ್ಯನಾದ. ಹೀಗೆ ಅಧಿಕಮಾಸದ ಫಲ ಜನ್ಮಜನ್ಮಕ್ಕೂ ಸಹ ಅಲಂಕಾರಾದಿ ಶೋಭೆಗಳನ್ನು ನೀಡುವ ಮಹಾವ್ರತ ಎಂದು ತಿಳಿಯುವುದು.

೧೫. ಸುಮತಿಯ ಕಥೆ

ಕೃತಯುಗದಲ್ಲಿ ಸುಮತಿ ಎಂಬ ರಾಜನಿದ್ದ. ಚಂದ್ರವಂಶದ ಅವನು ಸಪ್ತದ್ವೀಪಾಧಿಪತಿಯೆನ್ನಿಸಿದ್ದ. ಮಹಾಹರಿಭಕ್ತ; ಧರ್ಮಾತ್ಮ. ಅವನ ಪತ್ನಿ ಸುಷ್ಟುಮತಿ. ಅವರಿಬ್ಬರೂ ಅಧಿಕಮಾಸ ವ್ರತವನ್ನು ಆಚರಿಸಿದವರು. ಆದರಿಂದಾಗಿ ಪೂರ್ವಜನ್ಮದ ಸ್ಮರಣೆಯೂ ಅವರಿಗೆ ಇದ್ದಿತು. ಆಗೊಮ್ಮೆ ಆಂಗೀರಸ ಮುನಿಗಳು ಅವನ ಬಳಿಗೆ ಬಂದರು. ಸಪತ್ನೀಕನಾಗಿ ರಾಜ ಅವರನ್ನು ಸ್ವಾಗತಿಸಿ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿದ. ರಾಜ ಅವರ ಆಗಮನದಿಂದ ತಾನು ಪಾವನನಾದೆನೆಂದು ಸಂಭ್ರಮದಿಂದ ತಿಳಿಸಿದ. ಆಗ ಮುನಿಗಳು 'ರಾಜ, ನಿನ್ನ ಈ ವಿನಯಕ್ಕೆ ನಾನು ಸಂತುಷ್ಟನಾದೆ. ವಿನಯಗುಣಕ್ಕಿಂತ ಮಿಗಿಲಾದ ಗುಣ ಮತ್ತೊಂದಿಲ್ಲ. ನಿನ್ನ ಈ ಸ್ಥಿತಿಗೆ ನನಗೆ ಮಹದಾನಂದವಾಗಿದೆ. ಇದಕ್ಕಾಗಿ ನೀನು ಯಾವ ಪುಣ್ಯಕಾರ್ಯವನ್ನು ಮಾಡಿದ್ದೆ ಎಂಬುದನ್ನು ತಿಳಿಸು' ಎಂದು ಕೇಳಿದರು. ರಾಜ ತಿಳಿಸಿದ : 'ಪೂಜ್ಯರೇ ಆಲಿಸಬೇಕು, ನಾನು ಹಿಂದಿನ ಜನ್ಮದಲ್ಲಿ ವೀರ ಎಂಬ ಹೆಸರಿನ ವೈಶ್ಯನಾಗಿದ್ದೆ. ಮಹಾಪಾತಕಿಯಾಗಿದ್ದೆ; ಬ್ರಾಹ್ಮಣರ ಸ್ವತ್ತನ್ನು ಅಪಹರಿಸುವ ನೀಚನೂ ಆಗಿದ್ದೆ. ಕಾಲ ಕಳೆಯಿತು. ಐಶ್ವರ್ಯವನ್ನೂ ಕಳೆದುಕೊಂಡೆ, ಬಂಧುಗಳು ನನ್ನನ್ನು ತೊರೆದರು. ನಾನು ಕಾಡನ್ನು ಸೇರಿದೆ, ಪ್ರಾಣಿಗಳ ಮಾಂಸವನ್ನು ತಿನ್ನುತ್ತ ಪಾಪಕಾರ್ಯವನ್ನು ಮುಂದುವರಿಸಿದೆ. ಒಮ್ಮೆ ಬಹಳ ಹಸಿವು, ನೀರಡಿಕೆಯಿಂದ ಬಳಲಿ ಮಹಾವಿಷ್ಣುವಿನ ಒಂದು ಹಾಳುದೇಗುಲವನ್ನು ನಿರ್ಜನಪ್ರದೇಶದಲ್ಲಿ ಕಂಡೆ. ಅಲ್ಲಿದ್ದ

ದಿವ್ಯಸರೋವರದಲ್ಲಿ ನೀರನ್ನು ಕುಡಿದು ವಿಶ್ರಮಿಸಿಕೊಳ್ಳುತ್ತಿದ್ದೆ. ಅಲ್ಲಿ ಕುಲೀನಿಯಾದ ಈ ಸುಷ್ಟುಮತಿ ನನಗೆ ಪತ್ನಿಯಾಗಿ ದೊರೆತಳು. ಬಂಧುವರ್ಗದಿಂದ ಪರಿತ್ಯಕ್ತಳಾಗಿ ಆ ನಿರ್ಜನವನದಲ್ಲಿ ಅಲೆಯುತ್ತ ಅಲ್ಲಿಗೆ ಬಂದಿದ್ದಳು. ಅವಳ ಬಗ್ಗೆ ಕನಿಕರಿಸಿ ನಾನು ನೀರು, ಹಣ್ಣುಗಳನ್ನು ಕೊಟ್ಟು ಸಮಾಧಾನಪಡಿಸಿದೆ. ಅವಳು 'ಸ್ವಾಮಿ, ಇಂತಹ ಪಾಪಕಾರ್ಯದಲ್ಲಿ ಏತಕ್ಕೆ ತೊಡಗಿರುವಿರಿ. ಇದು ಉದ್ಧಾರಕ್ಕೆ ಕಾರಣವಾಗುವುದಿಲ್ಲ. ಇನ್ನಾದರೂ ಸನ್ಮಾರ್ಗವನ್ನು ಹಿಡಿಯಿರಿ' ಎಂದು ತಿಳಿಸಿ ಅಧಿಕಮಾಸವ್ರತವನ್ನು ಆಚರಿಸಲು ಹೇಳಿದಳು. ಅದರಂತೆ ನಾನು ಅಧಿಕಮಾಸವ್ರತವನ್ನು ಆಚರಿಸಿದೆ. ಮುಂದೆ ಮರಣ ಒದಗಿದ ಮೇಲೆ ಆ ವ್ರತದ ಪ್ರಭಾವದಿಂದ ಇಂತಹ ಜನ್ಮವನ್ನು, ಸಮಸ್ತ ಭೋಗಭಾಗ್ಯಗಳನ್ನೂ ಪಡೆದಿರುವೆ'. ಮುಂದೆ ಅವನು ಸದ್ಗತಿಗೂ ತೆರಳಿದ. ಅಧಿಕಮಾಸದಂತಹ ವ್ರತದ ಆಚರಣೆ ಪೂರ್ವಜನ್ಮದ ಸ್ಮರಣೆಯಂತಹ ಮಹಾಫಲಕ್ಕೂ ಸಾಧನ ಎಂಬ ವಿಶೇಷಾಂಶ ಇದರಲ್ಲಿ ನಿರೂಪಿತವಾಗಿದೆ.

ವಿ.ಸೂ.: ಈ [೧]ಕಥೆಗಳಲ್ಲಿ ಮೇಲ್ನೋಟಕ್ಕೆ ಕೇವಲ ಅಧಿಕಮಾಸದ ಯಥಾಶಕ್ತಿ ಆಚರಣೆಯಿಂದಲೇ ಸಂಪೂರ್ಣ ಉದ್ಧಾರ ಸಾಧ್ಯ ಎಂಬ ಭಾವ ಕಾಣುತ್ತದೆ. ವಾಸ್ತವವಾಗಿ ಸಂಪೂರ್ಣ ಉದ್ಧಾರಕ್ಕೆ ಕಾರಣವಾಗುವುದು ಬ್ರಹ್ಮಜ್ಞಾನವೊಂದೇ. ಇಂತಹ ವ್ರತ ಉಪವಾಸಗಳ ಸಾಧನೆ ಏನಿದ್ದರೂ ಅಂತಹ ಬ್ರಹ್ಮಜ್ಞಾನಕ್ಕೆ ಸಹಕಾರಿಯಾಗುವುದರಲ್ಲಿ ಮಾತ್ರ ಎಂಬುದಾಗಿ ಶ್ರೀಮದಾಚಾರ್ಯರು ನಿರ್ಣಯಿಸಿರುವರು[೨]; ಅದರಂತೆ ಜ್ಞಾನಿಗಳಾದವರು ಪ್ರಾರಬ್ಧವಶಾತ್ ದುರ್ಮಾರ್ಗದಲ್ಲಿ ಸಾಗಿದ್ದರೆ ಇಂತಹ ವ್ರತ, ಉಪವಾಸಗಳು ಅವರನ್ನು ಸನ್ಮಾರ್ಗಕ್ಕೆ ತಿರುಗಿಸುವ ಮೂಲಕ ಸಹಕಾರಿಯೆನ್ನಿಸುವವು ಎಂದು ತಿಳಿಯಬೇಕು : ಅಜಾಮಿಳ ಮೊದಲಾದವರ ಪ್ರಸಂಗದಲ್ಲಿ ಹೇಗೋ ಹಾಗೆ. ಅವರೆಲ್ಲ ಮೂಲತಃ ಭಗವದಪರೋಕ್ಷಿಗಳು ಎಂಬುದು ಆಕರಗ್ರಂಥಗಳಲ್ಲಿ ನಿರೂಪಿತವಾಗಿದೆ.

★★★★★

॥ ಶ್ರೀಕೃಷ್ಣಾರ್ಪಣಮಸ್ತು ॥

ಸಮರ್ಪಿತಂ ಮಯಾ ಭವೇತ್ ಸುಮಧ್ವನುತ್ತವಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

★★★★★

---

೧. ಈ ಕಥೆಗಳಲ್ಲಿ ದೃಢಧನ್ವ, ಕದರ್ಯರ ಕಥೆಗಳು ಬೃಹನ್ನಾರದೀಯಪುರಾಣದಲ್ಲಿ ಬಂದಿವೆ. ಕೌಶಿಕನ ಕಥೆ ಭವಿಷ್ಯೋತ್ತರಪುರಾಣದಲ್ಲಿದೆ. ಉಳಿದೆಲ್ಲ ಕಥೆಗಳು ಪದ್ಮಪುರಾಣದಲ್ಲಿ ಬಂದಿವೆ.

೨. ದಾನತೀರ್ಥತಪೋಯಜ್ಞಪೂರ್ವಾಃ ಸರ್ವೇऽಪಿ ಸರ್ವದಾ ।
ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ।
- ಮಹಾಭಾರತತಾತ್ಪರ್ಯನಿರ್ಣಯ (೧/೯೮)

ಅಧಿಕಮಾಸದಲ್ಲಿ ನಿತ್ಯಪಠನೀಯವಾದ
ವಿಶೇಷ ಶ್ರೀಹರಿಯ ಸ್ತೋತ್ರ

ನಮಃ ಪುರುಷೋತ್ತಮಾಖ್ಯ ನಮಸ್ತೇ ವಿಶ್ವಭಾವನ ।
ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ ॥
ಯೇನೇದಮಖಿಲಂ ಜಾತಂ ಯತ್ರ ಸರ್ವಂ ಪ್ರತಿಷ್ಠಿತಮ್ ।
ಲಯಮೇಷ್ಯತಿ ಯತ್ರೈತತ್ ತಂ ಪ್ರಪನ್ನೋಽಸ್ಮಿ ಕೇಶವಮ್ ॥
ಪರೇಶ ಪರಮಾನಂದ ಪರಾತ್ಪರತರಃ ಪ್ರಭುಃ ।
ಚಿದ್ರೂಪ ಚಿತ್ಪರಿಜ್ಞೇಯಃ ಸ ತೇ ಕೃಷ್ಣಃ ಪ್ರಸೀದತು ॥
ಕೃಷ್ಣಂ ಕಮಲಪತ್ರಾಕ್ಷಂ ರಾಮಂ ರಘುಕುಲೋದ್ಭವಮ್ ।
ನೃಸಿಂಹಂ ವಾಮನಂ ವಿಷ್ಣುಂ ಸ್ಮರನ್ ಯಾತಿ ಪರಾಂ ಗತಿಮ್ ॥
ವಾಸುದೇವಂ ವರಾಹಂ ಚ ಕಂಸಕೇಶಿನಿಷೂದನಮ್ ।
ಪುರಾಣಪುರುಷಂ ಯಜ್ಞಪುರುಷಂ ಪ್ರಣತೋಽಸ್ಮ್ಯಹಮ್ ॥
ಅನಾದಿನಿಧನಂ ದೇವಂ ಶಂಖಚಕ್ರಗದಾಧರಮ್ ।
ತ್ರಿವಿಕ್ರಮಂ ಹಲಧರಂ ಪ್ರಣತೋಽಸ್ಮಿ ಸನಾತನಮ್ ॥
ಯ ಇದಂ ಕೀರ್ತಯೇನ್ನಿತ್ಯಂ ಸ್ತೋತ್ರಾಣಾಮುತ್ತಮೋತ್ತಮಮ್ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥

ಅಧಿಕಮಾಸದಲ್ಲಿ ಶ್ರೀಹರಿಪೂಜೆಗೆ
ವಿಶೇಷವಾಗಿ ವಿಹಿತವಾದ ಮಂತ್ರ

ಗೋವರ್ಧನಧರಂ ವಂದೇ ಗೋಪಾಲಂ ಗೋಪರೂಪಿಣಮ್ ।
ಗೋಕುಲೋತ್ಸವಮೀಶಾನಂ ಗೋವಿಂದಂ ಗೋಪಿಕಾಪ್ರಿಯಮ್ ॥